182

# ಪುರುಷಸೂಕ್ತಭಾಷ್ಯ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1994

ಆಧ್ಯಾತ್ಮಗ್ರಂಥಾವಳಿ

ಶ್ರೀ. ಶ್ರೀ. ಕಾರ್ಯಾಲಯ. ಹೊ. ನ. ಪುರ
ಸಂಖ್ಯೆ 182
ತಾರೀಖು 22.2.05
ಪುಸ್ತಕ ಭಂಡಾರ

# ಪುರುಷಸೂಕ್ತಭಾಷ್ಯ

( ಕನ್ನಡ ವಿವರಣೆ )

ಬರೆದವರು :

ಆಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೮೨

ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

**ಹೊಳೆನರಸೀಪುರ.**

**1994**

ಮೊದಲನೆಯ ಮುದ್ರಣ : 1981
ಎರಡನೆಯ ಮುದ್ರಣ : 1985
ಮೂರನೆಯ ಮುದ್ರಣ : 1994

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಮೊದಲ ಮಾತು

ಪುರುಷಸೂಕ್ತವು ವೈದಿಕರಲ್ಲಿ ತ್ರಿಮತಸ್ಥರಲ್ಲಿಯೂ ಪೂಜಾನುಷ್ಠಾನ–ಆರಾಧನಾದಿಗಳಲ್ಲಿ ಈಗಲೂ ಬಳಸಲ್ಪಡುತ್ತಿರುವದರಿಂದಲೂ ವೇದಾಧ್ಯಯನ ವನ್ನು ಆರಂಭಿಸುವವರಿಗೆ ಪುರುಷಸೂಕ್ತವನ್ನೇ ಪ್ರಥಮವಾಗಿ ಪಾಠಮಾಡಿಸು ವದರಿಂದಲೂ ಜನಪ್ರಿಯವಾದ ಈ ವೇದಮಂತ್ರಭಾಗಕ್ಕೆ ಆಧ್ಯಾತ್ಮಿಕಹಿನ್ನೆಲೆ ಯಿಂದ ವಿವರಣೆಯನ್ನು ಬರೆದು ಮೊದಲು 'ಆಧ್ಯಾತ್ಮಪ್ರಕಾಶ'ಮಾಸಪತ್ರಿಕೆಯ ಮೂಲಕ ಪ್ರಕಟಿಸಲಾಯಿತು. ಅನೇಕರು ಈ ಲೇಖನಗಳನ್ನು ಮೆಚ್ಚಿ ಗ್ರಂಥ ರೂಪವಾಗಿ ಹೊರತರುವಂತೆ ಪ್ರೇರೇಪಿಸಿದ್ದರಿಂದ 1981 ರಲ್ಲಿ ಮೊದಲನೆಯ ಬಾರಿಗೆ ಗ್ರಂಥರೂಪವಾಗಿ ಪ್ರಕಟಿಸಲಾಯಿತು. ಪ್ರತಿಗಳೆಲ್ಲ ಮಾರಾಟವಾದ್ದ ರಿಂದ ಎರಡನೆಯ ಬಾರಿಗೆ 1985 ರಲ್ಲಿ ಪುನರ್ಮುದ್ರಣವನ್ನು ಹೊರತರಲಾ ಯಿತು. ಈಗಲೂ ಪ್ರತಿಗಳೆಲ್ಲ ಮಾರಾಟವಾಗಿಬಿಟ್ಟದ್ದರಿಂದ ಮೂರನೆಯ ಬಾರಿಗೆ ಪುನರ್ಮುದ್ರಿಸಿ ಹೊರತರಲಾಗಿದೆ. ಇದರಿಂದ ವೈದಿಕಸಂಸ್ಕೃತಿಯಲ್ಲಿ ಅಭಿಮಾನವುಳ್ಳ ಹಾಗೂ ಕುತೂಹಲವುಳ್ಳ ವಾಚಕರ ಸಂಖ್ಯೆ ಬೆಳೆಯುತ್ತಿದೆ ಎಂದು ಕಂಡುಬಂದಿದೆ.

ಈ ಗ್ರಂಥದಲ್ಲಿ ಯಾವ ಮತಧರ್ಮ ಅಥವಾ ಸಿದ್ಧಾಂತಕ್ಕಾಗಲಿ ಒತ್ತು ಕೊಡದೆ ಯಥಾಶ್ರುತಾರ್ಥವನ್ನು ಸ್ವೀಕರಿಸಿ ನಾರಾಯಣಭಗವಂತನ ವಿರಾಡ್ ರೂಪ, ಹಾಗೂ ಸ್ವರೂಪವರ್ಣನೆಗಳ ನೆಪದಿಂದ ಜಿಜ್ಞಾಸುಗಳನ್ನು ಭಗವಂತನ ತತ್ತ್ವದ ಕಡೆಗೆ ಕೊಂಡೊಯ್ಯಲಾಗಿದೆ. ಮುಂದಿನ ಮೆಟ್ಟಲುಗಳನ್ನು ಜಿಜ್ಞಾಸು ಗಳೇ ತಮ್ಮ ಬುದ್ಧಿಸಂಸ್ಕಾರಗಳಿಗನುಗುಣವಾಗಿ ಏರಿ ಪರಮಪುರುಷಾರ್ಥದ ವರೆಗೂ ಮುಟ್ಟಬಹುದು. ಮತ್ತು ತಮ್ಮ ಆಧ್ಯಾತ್ಮಜ್ಞಾನದ ಅಂತಸ್ತನ್ನೂ ಹೆಚ್ಚಿಸಿಕೊಳ್ಳಬಹುದು.

ಈ ಗ್ರಂಥದ ಪ್ರಪಟನೆಗೆ (೧) ಬೆಂಗಳೂರು ಜಯನಗರದಲ್ಲಿರುವ ಶ್ರೀ|| ಜಿ. ವಿ. ಶ್ರೀನಿವಾಸಯ್ಯನವರು ಒಂದುಸಾವಿರರೂಪಾಯಿಗಳನ್ನೂ (೨) ಬೆಂಗಳೂರು ಬ ನ ಶಂ ಕ ರಿ ಬಡಾವಣೆಯಲ್ಲಿರುವ ಒಬ್ಬ ಭಕ್ತಮಹನೀಯರು ಸಹ ಒಂದುಸಾವಿರರೂಪಾಯಿಗಳನ್ನೂ ಸಹಾಯಧನವಾಗಿ ನೀಡಿರುತ್ತಾರೆ. ಈ ಇಬ್ಬರು ಮಹಾಶಯರಿಗೂ ಭಗವಾನ್ ನಾರಾಯಣನ ಅನುಗ್ರಹವುಂಟಾಗ ಲೆಂದು ಹಾರೈಸುತ್ತೇನೆ.

ಇತಿ–ಸಜ್ಜನವಿಧೇಯ,

ಹೊಳೆನರಸೀಪುರ,
ತಾ|| 20–8–1994.

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಆಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಮುನ್ನುಡಿ

ವೇದಮಂತ್ರಗಳಲ್ಲಿ ಪುರುಷಸೂಕ್ತವು ಬಹುಮುಖ್ಯವಾದ ಭಾಗವಾಗಿದೆ. ಇದು ಋಗ್ವೇದ–ಯಜುರ್ವೇದಗಳೆರಡರಲ್ಲಿಯೂ ಕಂಡುಬರುತ್ತದೆ. ಸ್ವರಸಂಯೋಜನೆ, ಆನುಪೂರ್ವಿ, ಉಚ್ಚಾರಣೆಗಳಲ್ಲಿ ಈ ಎರಡೂ ವೇದಗಳಂತೆ ಪುರುಷಸೂಕ್ತದಲ್ಲಿ ಪಾಠಾಂತರಗಳಿವೆ. ಆದರೆ ಅರ್ಥಗ್ರಹಣಕ್ಕೆ ಅದೇನೂ ಹೆಚ್ಚಿನ ತೊಡಕಾಗಿರುವದಿಲ್ಲ. ಪುರುಷಸೂಕ್ತದ ಹದಿನಾರು ಋಕ್ಕುಗಳಿಗೆ ಒಟ್ಟು ಒಂದೇ ತಾತ್ಪರ್ಯವಿದೆಯೆಂತ ಬಲ್ಲವರು ಹೇಳುತ್ತಾರೆ. ಅದೇನೆಂದರೆ : ಪುರುಷನಿಂದಲೇ ಈ ಬ್ರಹ್ಮಾಂಡವೆಲ್ಲವೂ ಸೃಷ್ಟಿಯಾಗಿದೆ– ಎಂದು 'ತಸ್ಮಾತ್' ಎಂಬ ಪದದಿಂದ ಬಹಳಸಲ ಹೇಳಿರುವದರಿಂದ ಮುಂಡಕೋಪನಿಷತ್ತಿನಂತೆಯೇ ಇಲ್ಲಿಯೂ ಅಕ್ಷರಪುರುಷನ ಸ್ವರೂಪಜ್ಞಾನದಲ್ಲಿಯೇ ಸೂಕ್ತಕ್ಕೆ ಪರಮತಾತ್ಪರ್ಯವಿದೆಯೆಂದೂ 'ಆ ಪುರುಷನನ್ನು ಅರಿತವನು ಅಮೃತನಾಗುತ್ತಾನೆ ; ಮೋಕ್ಷಕ್ಕೆ ಇದಕ್ಕಿಂತ ಬೇರೆ ಹಾದಿಯಿರುವದಿಲ್ಲ' ಎಂಬ ಸ್ಪಷ್ಟೋಲ್ಲೇಖವಿರುವದರಿಂದಲೂ ಪುರುಷಸೂಕ್ತವು ಪರಬ್ರಹ್ಮಪ್ರತಿಪಾದಕವಾದ ವೇದಭಾಗವೇ ಎಂಬಿದು ಅಂಥವರ ಅಭಿಪ್ರಾಯ. ಮತತ್ರಯ ಸಿದ್ಧಾಂತಾನುಯಾಯಿಗಳೂ ಈ ಅಭಿಪ್ರಾಯವನ್ನು ಅಂಗೀಕರಿಸುತ್ತಾರಾದರೂ ಪುರುಷನ ಸ್ವರೂಪವೇನೆಂಬುದರಲ್ಲಿ ಅದ್ವೈತಿಗಳಿಗೂ ಇತರರಿಗೂ ಮತಭೇದವಿದೆ. ಸಗುಣಸಾಕಾರನಾದ ಭಗವಂತನು ತನ್ನ ನಿತ್ಯೈಶ್ವರ್ಯ ಮಹಿಮಾವಿಭೂತಿಗಳೊಡನೆ ಗೊತ್ತಾದ ದಿವ್ಯಸ್ಥಾನದಲ್ಲಿದ್ದುಕೊಂಡಿದ್ದು ಅದು ಪರಮಪದವೆನಿಸಿರುವದು. ಅದನ್ನು ಮುಟ್ಟಿ ಆ ಭಗವಂತನ ಸೇವಾರಾಧನೆಗಳಿಂದ ಆನಂದವನ್ನು ಹೊಂದಿ ಅವನೊಡನೆ ಸಾಮ್ಯವನ್ನು ಪಡೆದುಕೊಂಡಿರುವದೇ ಮುಕ್ತಿಯು– ಎಂದು ವಿಶಿಷ್ಟಾದ್ವೈತಿಗಳೂ ದ್ವೈತಿಗಳೂ ಅಭಿಪ್ರಾಯಪಡುತ್ತಾರೆ. ಅದ್ವೈತಿಗಳು ಈ ಸ್ವರೂಪಗುಣಕರ್ಮವಿಶೇಷಗಳುಳ್ಳ ಭಗವಂತನು ಉಪಾಸ್ಯನೆಂಬುದನ್ನು ಒಪ್ಪಿ ಅದಕ್ಕೂ ಮೀರಿದ ನಿರ್ಗುಣತತ್ತ್ವವು ವಾಙ್ಮನಸ್ಸುಗಳಿಗೆ ಅಗೋಚರವಾಗಿದ್ದು ಸಾಧಕನು ತನ್ನ ಜ್ಞಾನದ ಪರಾಕಾಷ್ಠೆಯಲ್ಲಿ ಅದರೊಡನೆ ತಾದಾತ್ಮ್ಯವನ್ನೇ ಹೊಂದಿ ಅಮೃತನಾಗುವನೆಂದೂ ಅದೇ ಮುಕ್ತಿಯೆಂದೂ ಹೇಳುತ್ತಾರೆ. ಹೇಗೇ ಇರಲಿ– ಪುರುಷಸೂಕ್ತವು ಸಗುಣ– ನಿರ್ಗುಣಗಳೆಂಬ ವ್ಯಾವಹಾರಿಕಭೇದವನ್ನು ಅಂಗೀಕರಿಸಿ ವೇದಶಾಸ್ತ್ರಗಳು ಪ್ರತಿಪಾದಿಸಿರುವ ಪರಬ್ರಹ್ಮದ ಸ್ವರೂಪ

ನಿರ್ಧಾರಣೆಗೇ ವಿನಿಯುಕ್ತವಾಗಿದೆ-ಎಂಬಿದು ನಿಜಸಂಗತಿಯಾಗಿದೆ. ಇಂಥ ಪವಿತ್ರವಾದ ವೇದಭಾಗವನ್ನು ದೇವತಾರ್ಚನಾದಿಗಳಲ್ಲಿ ಉಪಯೋಗಿಸುವ ಶಿಷ್ಟಾಚಾರಸಂಪ್ರದಾಯವು ಬಹಳವಾಗಿ ಮೆಚ್ಚತಕ್ಕದ್ದಾಗಿದೆ.

ಭಗವಂತನ ಆರಾಧನೆಯನ್ನು ಕೈಗೊಳ್ಳುವ ಸಾಧಕನು ಇನ್ನೂ ಆ ಪರತತ್ತ್ವದ ಪೂರ್ಣಜ್ಞಾನವಿಲ್ಲದವನಾಗಿರುವದರಿಂದ ಅಂಥವನ ದೃಷ್ಟಿಯಿಂದ ಪೂಜ್ಯಪೂಜಕಭಾವಗಳು ಅಸ್ತಿತ್ವದಲ್ಲಿದ್ದೇ ಇರುವವು. ಆಗ ಸಾಧಕನು ಭಗವಂತನಿಗೆ ಸಲ್ಲಿಸುವ ಉಪಚಾರಗಳಿಗೆ ಪುರುಷಸೂಕ್ತದಂಥ ಸ್ತುತಿರೂಪವಾದ ಮಂತ್ರಭಾಗವು ಅತ್ಯುಪಯುಕ್ತವಾಗಿದೆ- ಎಂಬುದು ನಿರ್ವಿವಾದವು. ಆದ್ದರಿಂದಲೇ ಪುರುಷಸೂಕ್ತವಿಧಾನದ ಪೂಜಾಕ್ರಮವು ವೈದಿಕವಾದ ಇತರ ಎಲ್ಲಾ ಪೂಜಾಕ್ರಮಗಳಿಗೂ ಮಾತೃಸ್ಥಾನದಲ್ಲಿದೆ. ಹೀಗೆ ಪುರುಷಸೂಕ್ತಪೂಜಾಕ್ರಮವು ಸಾಧನಗಳಲ್ಲಿ ಮುಖ್ಯವಾದ ಸ್ಥಾನವನ್ನು ಹೊಂದಿದೆ. ಯಜ್ಞದಾನತಪಸ್ಸುಗಳೆಂಬ ಬಹಿರಂಗಸಾಧನಗಳಲ್ಲಿ ಯಜ್ಞವನ್ನು ಗುರಿಯಾಗಿಟ್ಟುಕೊಂಡು ಅದನ್ನು ಆರಾಧನೆ-ಜಪ-ಹೋಮಾದಿಗಳ ರೂಪದಿಂದ ಅನುಷ್ಠಿಸಲು ಎಲ್ಲಾ ಮಟ್ಟದಲ್ಲಿಯೂ ಪುರುಷಸೂಕ್ತವು ಸಹಕಾರಿಯಾಗಿದೆ. ಜಿಜ್ಞಾಸುಗಳಿಗೂ ಜ್ಞಾನಯಜ್ಞಕ್ಕೆ ತಕ್ಕ ವಿಚಾರಸರಣಿಯನ್ನು ಪುರುಷಸೂಕ್ತವು ಒದಗಿಸುತ್ತಿದೆ. ಹೀಗೆ ವೇದಾಂತಪ್ರಪಂಚದಲ್ಲಿ ಸಾಧನಭಾಗವನ್ನು ಎತ್ತಿಹಿಡಿದು ಸಿದ್ಧಾಂತವನ್ನು ಅಂತರಂಗದೊಳಗೆ ಅಡಗಿಸಿಟ್ಟುಕೊಂಡಿರುವ ಪುರುಷಸೂಕ್ತವು ಮುಮುಕ್ಷುಗಳಿಗೂ ಕರ್ಮಿಗಳಿಗೂ ಕಾಮಧೇನುವಾಗಿದೆ-ಎಂದು ಹೇಳಬಹುದು. ವೇದಾಧ್ಯಯನಕ್ಕೆ ಅಧಿಕಾರಿಯಾದವನು ಕಡೆಯಪಕ್ಷ ಪುರುಷಸೂಕ್ತವನ್ನಾದರೂ ಗುರುಮುಖದಿಂದ ಸಸ್ವರವಾಗಿ ಕಲಿತು ಪ್ರತಿದಿನವೂ ದೇವತಾರ್ಚನಕಾಲದಲ್ಲಿ ಪಠಿಸಬೇಕು. ವೇದಾಧಿಕಾರವಿಲ್ಲದವರು ಇದೇ ಪುರುಷಸೂಕ್ತದ ಮಂತ್ರಾರ್ಥಗಳನ್ನು ಹೃದಯದಲ್ಲಿ ಅನುಸಂಧಾನಮಾಡುತ್ತಾ ಪೌರಾಣಿಕವಾದ ಶ್ಲೋಕಗಳಿಂದಲೇ ಷೋಡಶೋಪಚಾರಗಳನ್ನು ಭಗವಂತನಿಗೆ ಅರ್ಪಿಸಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ಹೀಗೆ ಎಲ್ಲರೂ ಪುರುಷಸೂಕ್ತದ ಪ್ರಯೋಜನವನ್ನು ಪಡೆದುಕೊಳ್ಳುವಂತಾಗಬೇಕು.

ಸಹೃದಯರಾದ ವಾಚಕರು ಈ ಗ್ರಂಥವನ್ನು ಓದಿ ಮನನಮಾಡಿ ವಿರಾಡಾತ್ಮನಾದ ಭಗವಂತನ ಅನುಗ್ರಹಕ್ಕೆ ಪಾತ್ರರಾಗಲೆಂದು ಪ್ರಾರ್ಥಿಸಿ ಈ ಮುನ್ನುಡಿಯನ್ನು ಪೂರ್ಣಗೊಳಿಸುವೆನು. ಲೇಖಕ.

# ವಿಷಯಾನುಕ್ರಮಣಿಕೆ


| | | |
|---|---|---|
| ೧. | ಪೀಠಿಕೆ | ೧ |
| ೨. | ಸಹಸ್ರಶೀರ್ಷಾ ಪುರುಷಃ | ೧೦ |
| ೩. | ಏತಾವಾನಸ್ಯ ಮಹಿಮಾ | ೧೫ |
| ೪. | ತ್ರಿಪಾದೂರ್ಧ್ವ ಉದೈತ್ ಪುರುಷಃ | ೨೦ |
| ೫. | ತಸ್ಮಾದ್ವಿರಾಡಜಾಯತ | ೨೪ |
| ೬. | ದೇವಾ ಯಜ್ಞಮತನ್ವತ | ೨೯ |
| ೭. | ಋಚಃ ಸಾಮಾನಿ ಜಜ್ಞಿರೇ | ೩೫ |
| ೮. | ಯತ್ಪುರುಷಂ ವ್ಯದಧುಃ | ೪೦ |
| ೯. | ಬ್ರಾಹ್ಮಣೋಽಸ್ಯ ಮುಖಮಾಸೀತ್—೧ | ೪೫ |
| ೧೦. | ,, ,, ೨ | ೫೧ |
| ೧೧. | ,, ,, ೩ | ೫೫ |
| ೧೨. | ಚಂದ್ರಮಾ ಮನಸೋ ಜಾತಃ | ೬೨ |
| ೧೩. | ವೇದಾಹಮೇತಂ ಪುರುಷಮ್ | ೬೭ |
| ೧೪. | ಯಜ್ಞೇನ ಯಜ್ಞಮಯಜನ್ತ ದೇವಾಃ | ೭೨ |
| ೧೫. | ನಮೋ ರುಚಾಯ ಬ್ರಾಹ್ಮಯೇ | ೭೮ |
| ೧೬. | ತಚ್ಛಂ ಯೋರಾವೃಣೀಮಹೇ | ೮೩ |

# ಪುರುಷಸೂಕ್ತ

## (ಯಜುರ್ವೇದಪಾಠಕ್ರಮದಂತೆ)

### || ಶ್ರೀ ಗುರುಭ್ಯೋ ನಮಃ ಹರಿಃ ಓಂ ||

ಸಹಸ್ರಶೀರ್ಷಾ ಪುರುಷಃ | ಸಹಸ್ರಾಕ್ಷಃ ಸಹಸ್ರಪಾತ್ |
ಸ ಭೂಮಿಂ ವಿಶ್ವತೋ ವೃತ್ವಾ | ಅತ್ಯತಿಷ್ಠದ್ದಶಾಂಗುಲಮ್ ||೧||

ಪುರುಷ ಏವೇದಗ್ಂ ಸರ್ವಮ್ | ಯದ್ಭೂತಂ ಯಚ್ಚ ಭವ್ಯಮ್ |
ಉತಾಮೃತತ್ವಸ್ಯೇಶಾನಃ | ಯದನ್ನೇನಾತಿರೋಹತಿ ||೨||

ಏತಾವಾನಸ್ಯ ಮಹಿಮಾ | ಅತೋ ಜ್ಯಾಯಾಗ್ಂಶ್ಚ ಪೂರುಷಃ |
ಪಾದೋಽಸ್ಯ ವಿಶ್ವಾ ಭೂತಾನಿ | ತ್ರಿಪಾದಸ್ಯಾಮೃತಂ ದಿವಿ ||೩||

ತ್ರಿಪಾದೂರ್ಧ್ವ ಉದೈತ್ ಪುರುಷಃ | ಪಾದೋಽಸ್ಯೇಹಾಭವಾತ್ ಪುನಃ |
ತತೋ ವಿಷ್ವಙ್ ವ್ಯಕ್ರಾಮತ್ | ಸಾಶನಾನಶನೇ ಅಭಿ ||೪||

ತಸ್ಮಾದ್ವಿರಾಡಜಾಯತ | ವಿರಾಜೋ ಅಧಿ ಪೂರುಷಃ |
ಸ ಜಾತೋ ಅತ್ಯರಿಚ್ಯತ | ಪಶ್ಚಾದ್ಭೂಮಿಮಥೋ ಪುರಃ ||೫||

ಯತ್ಪುರುಷೇಣ ಹವಿಷಾ | ದೇವಾ ಯಜ್ಞಮತನ್ವತ |
ವಸಂತೋ ಅಸ್ಯಾಸೀದಾಜ್ಯಮ್ | ಗ್ರೀಷ್ಮ ಇಧ್ಮಃ ಶರದ್ಧವಿಃ ||೬||

ಸಪ್ತಾಸ್ಯಾಸನ್ ಪರಿಧಯಃ | ತ್ರಿಃ ಸಪ್ತ ಸಮಿಧಃ ಕೃತಾಃ |
ದೇವಾ ಯದ್ಯಜ್ಞಂ ತನ್ವಾನಾಃ | ಅಬಧ್ನನ್ ಪುರುಷಂ ಪಶುಮ್ ||೭||

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ | ಪುರುಷಂ ಜಾತಮಗ್ರತಃ |
ತೇನ ದೇವಾ ಅಯಜನ್ತ | ಸಾಧ್ಯಾ ಋಷಯಶ್ಚ ಯೇ ||೮||

ತಸ್ಮಾದ್ಯಜ್ಞಾತ್ ಸರ್ವಹುತಃ | ಸಂಭೃತಂ ಪೃಷದಾಜ್ಯಮ್ |
ಪಶೂಗ್ಂಸ್ತಾಗ್ಂಶ್ಚಕ್ರೇ ವಾಯವ್ಯಾನ್ | ಆರಣ್ಯಾನ್ ಗ್ರಾಮ್ಯಾಶ್ಚ ಯೇ ||

ತಸ್ಮಾದ್ಯಜ್ಞಾತ್ ಸರ್ವಹುತಃ | ಋಚಃ ಸಾಮಾನಿ ಜಜ್ಞಿರೇ |
ಛಂದಾಗ್ಂಸಿ ಜಜ್ಞಿರೇ ತಸ್ಮಾತ್ | ಯಜುಸ್ತಸ್ಮಾದಜಾಯತ ||೧೦||

ತಸ್ಮಾದಶ್ವಾ ಅಜಾಯನ್ತ | ಯೇ ಕೇ ಚೋಭಯಾ ದತಃ |
ಗಾವೋ ಹ ಜಜ್ಞಿರೇ ತಸ್ಮಾದ್ | ತಸ್ಮಾಜ್ಜಾತಾ ಅಜಾವಯಃ ||೧೧||
ಯತ್ಪುರುಷಂ ವ್ಯದಧುಃ | ಕತಿಧಾ ವ್ಯಕಲ್ಪಯನ್ |
ಮುಖಂ ಕಿಮಸ್ಯ ಕೌ ಬಾಹೂ | ಕಾವೂರೂ ಪಾದಾವುಚ್ಯೇತೇ ||೧೨||
ಬ್ರಾಹ್ಮಣೋಽಸ್ಯ ಮುಖಮಾಸೀತ್ | ಬಾಹೂ ರಾಜನ್ಯಃ ಕೃತಃ |
ಊರೂ ತದಸ್ಯ ಯದ್ವೈಶ್ಯಃ | ಪದ್ಭ್ಯಾಗ್ಂ ಶೂದ್ರೋ ಅಜಾಯತ ||೧೩||
ಚಂದ್ರಮಾ ಮನಸೋ ಜಾತಃ | ಚಕ್ಷೋಸ್ಸೂರ್ಯೋ ಅಜಾಯತ |
ಮುಖಾದಿಂದ್ರಶ್ಚಾಗ್ನಿಶ್ಚ | ಪ್ರಾಣಾದ್ವಾಯುರಜಾಯತ ||೧೪||
ನಾಭ್ಯಾ ಆಸೀದಂತರಿಕ್ಷಮ್ | ಶೀರ್ಷ್ಣೋ ದ್ಯೌಸ್ಸಮವರ್ತತ |
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ |ತಥಾ ಲೋಕಾಗ್ಂ ಅಕಲ್ಪಯನ್||

ವೇದಾಹಮೇತಂ ಪುರುಷಂ ಮಹಾಂತಮ್ |
ಆದಿತ್ಯವರ್ಣಂ ತಮಸಸ್ತು ಪಾರೇ |
ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ |
ನಾಮಾನಿ ಕೃತ್ವಾಽಭಿವದನ್ ಯದಾಸ್ತೇ ||೧೬||

ಧಾತಾ ಪುರಸ್ತಾತ್ ಯಮುದಾಜಹಾರ |
ಶಕ್ರಃ ಪ್ರ ವಿದ್ವಾನ್ ಪ್ರದಿಶಶ್ಚತಸ್ರಃ |
ತಮೇವಂ ವಿದ್ವಾನಮೃತ ಇಹ ಭವತಿ |
ನಾನ್ಯಃ ಪಂಥಾ ಅಯನಾಯ ವಿದ್ಯತೇ ||೧೭||

ಯಜ್ಞೇನ ಯಜ್ಞಮಯಜನ್ತ ದೇವಾಃ |
ತಾನಿ ಧರ್ಮಾಣಿ ಪ್ರಥಮಾನ್ಯಾಸನ್ |
ತೇ ಹ ನಾಕಂ ಮಹಿಮಾನಸ್ಸಚಂತೇ |
ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ ||೧೮||

ಅದ್ಭ್ಯಃ ಸಂಭೂತಃ ಪೃಥಿವ್ಯೈ ರಸಾಚ್ಚ |
ವಿಶ್ವಕರ್ಮಣಃ ಸಮವರ್ತತಾಧಿ |
ತಸ್ಯ ತ್ವಷ್ಟಾ ವಿದಧದ್ ರೂಪಮೇತಿ |
ತತ್ಪುರುಷಸ್ಯ ವಿಶ್ವಮಾಜಾನಮಗ್ರೇ ||೧೯||

ವೇದಾಹಮೇತಂ ಪುರುಷಂ ಮಹಾಂತಮ್ |
ಆದಿತ್ಯವರ್ಣಂ ತಮಸಃ ಪರಸ್ತಾತ್ |
ತಮೇವಂ ವಿದ್ವಾನಮೃತ ಇಹ ಭವತಿ |
ನಾನ್ಯಃ ಪಂಥಾ ವಿದ್ಯತೇಽಯನಾಯ ||೨೦||

ಪ್ರಜಾಪತಿಶ್ಚರತಿ ಗರ್ಭೇ ಅಂತಃ |
ಅಜಾಯಮಾನೋ ಬಹುಧಾ ವಿಜಾಯತೇ |
ತಸ್ಯ ಧೀರಾಃ ಪರಿಜಾನಂತಿ ಯೋನಿಮ್ |
ಮರೀಚೀನಾಂ ಪದಮಿಚ್ಛಂತಿ ವೇಧಸಃ ||೨೧||

ಯೋ ದೇವೇಭ್ಯ ಆತಪತಿ |
ಯೋ ದೇವಾನಾಂ ಪುರೋಹಿತಃ |
ಪೂರ್ವೋ ಯೋ ದೇವೇಭ್ಯೋ ಜಾತಃ |
ನಮೋ ರುಚಾಯ ಬ್ರಾಹ್ಮಯೇ |೨೨||

ರುಚಂ ಬ್ರಾಹ್ಮಂ ಜನಯನ್ತಃ |
ದೇವಾ ಅಗ್ರೇ ತದಬ್ರುವನ್ |
ಯಸ್ತ್ವೈವಂ ಬ್ರಾಹ್ಮಣೋ ವಿದ್ಯಾತ್ |
ತಸ್ಯ ದೇವಾ ಅಸನ್ ವಶೇ ||೨೩||

ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ | ಅಹೋರಾತ್ರೇ ಪಾರ್ಶ್ವೇ |
ನಕ್ಷತ್ರಾಣಿ ರೂಪಮ್ | ಅಶ್ವಿನೌ ವ್ಯಾತ್ತಮ್ ||೨೪||

ಇಷ್ಟಂ ಮನಿಷಾಣ | ಅಮುಂ ಮನಿಷಾಣ | ಸರ್ವಂ ಮನಿಷಾಣ ||

ಓಂ|| ತಚ್ಛಂ ಯೋರಾವೃಣೀಮಹೇ | ಗಾತುಂ ಯಜ್ಞಾಯ | ಗಾತುಂ ಯಜ್ಞಪತಯೇ | ದೈವೀ ಸ್ವಸ್ತಿರಸ್ತು ನಃ | ಸ್ವಸ್ತಿರ್ಮಾನುಷೇಭ್ಯಃ | ಊರ್ಧ್ವಂ ಜಿಗಾತು ಭೇಷಜಮ್ | ಶಂ ನೋ ಅಸ್ತು ದ್ವಿಪದೇ | ಶಂ ಚತುಷ್ಪದೇ || ಓಂ ಶಾಂತಿಃ ಶಾಂತಿಃ ಶಾಂತಿಃ ||

— —

# ಪುರುಷಸೂಕ್ತಭಾಷ್ಯ

## ೧. ಪೀಠಿಕೆ

ಪುರುಷಸೂಕ್ತವೆಂಬ ಹೆಸರಿನ ವೇದಭಾಗವು ಬಹಳಮಟ್ಟಿಗೆ ಆಸ್ತಿಕರಿಗೆಲ್ಲ ಪರಿಚಿತವಾದದ್ದಾಗಿದೆ. ಮತತ್ರಯಸಿದ್ಧಾಂತಾನುಯಾಯಿಗಳೂ ಈ ಭಾಗವನ್ನು ಪುರಸ್ಕರಿಸಿರುತ್ತಾರೆ. ವೇದಾಧ್ಯಯನವನ್ನು ಆರಂಭಮಾಡುವವರಿಗೆಲ್ಲ ಪುರುಷಸೂಕ್ತದಿಂದ ಪಾಠಾರಂಭಮಾಡುತ್ತಾರೆ. ದೇವತಾರ್ಚನೆಯ ಕ್ರಮಗಳಲ್ಲಿ ಪುರುಷಸೂಕ್ತವಿಧಾನವು ಸುಪ್ರಸಿದ್ಧವಾದುದೂ ಹೆಚ್ಚು ಬಳಕೆಯಲ್ಲಿರತಕ್ಕದ್ದೂ ಆಗಿದೆ. ಇದರ ಸಾಹಿತ್ಯವು ಹಗುರವಾಗಿದೆ. ಪುಟ್ಟ ಪುಟ್ಟ ವಾಕ್ಯಗಳಿಂದ ಹೆಣೆಯಲ್ಪಟ್ಟು ಉಚ್ಚಾರಣೆಗೆ ಸೌಕರ್ಯವಾಗಿದೆ. ಹೀಗೆಲ್ಲ ಗುಣಾಂಶಗಳಿದ್ದು ಅರ್ಥದೃಷ್ಟಿಯಿಂದಲೂ ಔನ್ನತ್ಯವನ್ನು ಹೊಂದಿ ಇಡಿಯ ವೇದಸಾಹಿತ್ಯವನ್ನೇ ಇದು ಪ್ರತಿನಿಧಿಸುತ್ತಿದೆ. ಆದ್ದರಿಂದ ಈ ಪುರುಷಸೂಕ್ತವನ್ನು ಪಾರಾಯಣಮಾಡುವವರೆಲ್ಲರೂ ಅರ್ಥವನ್ನು ತಿಳಿದಿರಬೇಕಾದದ್ದು ಅಗತ್ಯ. ಇದರ ಸೌಂದರ್ಯಕ್ಕೆ ಮಾರುಹೋಗಿ ಅನೇಕರು ಇದಕ್ಕೆ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಪ್ರಕೃತ ಆಧ್ಯಾತ್ಮದೃಷ್ಟಿಯನ್ನು ಹೆಚ್ಚಾಗಿ ಅನುಸರಿಸಿ ಪುರುಷಸೂಕ್ತಮಂತ್ರಗಳಿಗೆ ವ್ಯಾಖ್ಯಾನವನ್ನು ಈಗ ಆರಂಭಿಸಿದ್ದೇನೆ.

ಪುರುಷಸೂಕ್ತವು* ಋಗ್ವೇದದ ಹತ್ತನೆಯ ಮಂಡಲದಲ್ಲಿ ತೊಂಭತ್ತನೆಯ ಸೂಕ್ತವಾಗಿದೆ. ಮತ್ತು ಯಜುರ್ವೇದದ ವಾಜಸನೇಯಿಸಂಹಿತೆಯಲ್ಲಿಯೂ ತೈತ್ತಿರೀಯಾರಣ್ಯಕಭಾಗದಲ್ಲಿಯೂ ಅಥರ್ವಣವೇದದಲ್ಲಿಯೂ ಬಂದಿದೆ. ಇದು ನಾರಾಯಣಋಷಿಗೆ ಪ್ರತ್ಯಕ್ಷವಾದ ಮಂತ್ರವು. ಈ ಋಷಿಯು ಭಗವಾನ್ ನಾರಾಯಣನ ಅವತಾರವೆಂದು ಪ್ರಸಿದ್ಧನಾಗಿರುತ್ತಾನೆ. ಪುರುಷಸೂಕ್ತದಲ್ಲಿ ಸ್ತುತ್ಯನಾಗಿರುವ ಪುರುಷಭಗವಾನನು ವಿಶ್ವನೆಂದೂ ವಿಶ್ವರೂಪನೆಂದೂ ವಿಶ್ವಾತ್ಮನೆಂದೂ ಪರಬ್ರಹ್ಮನೆಂದೂ ಸಮಾಜರೂಪಿಯೆಂದೂ ವರ್ಣಿಸಲ್ಪಟ್ಟಿರುತ್ತಾನೆ. ಇಲ್ಲಿರುವ ಲಕ್ಷಣಗಳೆಲ್ಲವೂ

---

* ಈ ವಿವರಣೆಯಲ್ಲಿರುವ ಅನೇಕ ವಿಷಯಗಳನ್ನು 'ಪುರುಷಸೂಕ್ತ' (1952) ಎಂಬ ಗ್ರಂಥದಲ್ಲಿರುವ ಶ್ರೀ|| ಎಂ.ಎ. ದೊರೆಸ್ವಾಮಿಅಯ್ಯಂಗಾರ್ಯರವರ ಮುನ್ನುಡಿಯಿಂದ ಸಂಗ್ರಹಿಸಿದೆ.

ಭಗವಾನ್ ನಾರಾಯಣನ ಲಕ್ಷಣಗಳೆಂದು ಹೇಳಬಹುದು. ಆದರೆ ನಾವು ರೂಪಾತೀತವಾದ ತತ್ತ್ವಕ್ಕೆ ಯಾವ ಲಕ್ಷಣವನ್ನಾಗಲಿ ಉಪಾಧಿಗಳನ್ನಾಗಲಿ ಪರಮಾರ್ಥದೃಷ್ಟಿಯಿಂದ ಹೇಳಲು ಬರಲಾರದಾದರೂ ಅಧ್ಯಾರೋಪದೃಷ್ಟಿಯಿಂದ ಹೇಳಬಹುದಾಗಿದೆ. ಸಾಧಕಾನುಗ್ರಹಾರ್ಥವಾಗಿ ಭಗವಂತನು ಇಚ್ಛಾವಶದಿಂದ ಸ್ವೀಕರಿಸಬಹುದಾದ ರೂಪಗಳಿಗೆ ಯಾವದೇ ಲಕ್ಷಣವಾದರೂ ಹೊಂದಿಯೇ ಹೊಂದುತ್ತದೆ. ತೈತ್ತಿರೀಯ ಮಹಾನಾರಾಯಣೋಪನಿಷತ್ತಿನಲ್ಲಿರುವ 'ಸಹಸ್ರಶೀರ್ಷಂ ದೇವಮ್' ಎಂದೇ ಆರಂಭವಾಗುವ ನಾರಾಯಣಾನುವಾಕವು ಈ ಪುರುಷಸೂಕ್ತದ ಪ್ರಥಮವ್ಯಾಖ್ಯಾನವಾಗಿದೆ–ಎನ್ನಬಹುದು. ಆದರೂ ಅದು ಪುರುಷಸೂಕ್ತದ ಬಹು ಸಿದ್ಧಾಂತಗಳಲ್ಲಿ ಏಕದೇಶವನ್ನು ಮಾತ್ರ ಸಂಗ್ರಹಿಸಿದೆ–ಎಂದು ಹೇಳಬೇಕಾಗಿದೆ.

ವೇದಸಾಹಿತ್ಯದಲ್ಲಿರುವ ಸಂಹಿತೆ, ಬ್ರಾಹ್ಮಣ, ಆರಣ್ಯಕ–ಎಂಬ ಮೂರು ಭಾಗಗಳು ಶೈಲಿ, ವಿಷಯ, ಅರ್ಥ–ಇವುಗಳೆಲ್ಲದರಲ್ಲಿಯೂ ಭಿನ್ನವಾಗಿವೆ. ಸಂಹಿತೆಯಲ್ಲಿ ಯಜ್ಞದೇವತೆಗಳ ಕಥನವೂ ಸ್ತುತಿಯೂ ತುಂಬಿವೆ. ಯಜ್ಞಕರ್ಮವಿಧಾನವು ಬ್ರಾಹ್ಮಣಗಳಿಗೆ ಮುಖ್ಯವಿಷಯವು. ಉಪನಿಷತ್ತುಗಳು ತತ್ತ್ವಜಿಜ್ಞಾಸೆಗೆ ಮಾತೃಸ್ಥಾನವು. ಆದರೆ ಪುರುಷಸೂಕ್ತವು ಈ ಮೂರು ವೇದಸಾಹಿತ್ಯವನ್ನೂ ಒಂದುಗೂಡಿಸಿರುವ ಸ್ವರೂಪದ್ದಾಗಿದೆ. ಹೇಗೆಂದರೆ : ವಸ್ತುತಃ ಇದು ಮಂತ್ರವೇ ಆಗಿದೆ. ಬ್ರಾಹ್ಮಣಗಳಂತೆ ಒಂದು ಯಜ್ಞವೃತ್ತಾಂತವನ್ನು ನಿರೂಪಿಸಿರುತ್ತದೆ. ಉಪನಿಷತ್ತುಗಳಲ್ಲಿರುವಂತೆ ಜ್ಞಾನಯಜ್ಞ, ಮಾನಸಿಕಯಜ್ಞಗಳು, ಇಲ್ಲಿ ನಿರೂಪಿಸಲ್ಪಟ್ಟಿವೆ. ಇಲ್ಲಿ ಹೇಳಿರುವ ಯಜ್ಞವು ಬ್ರಹ್ಮಯಜ್ಞವಾಗಿದೆ–ಎನ್ನಬಹುದು. ಒಂದು ಯಜ್ಞವು ನಡೆಯಬೇಕಾದರೆ ದೇವತೆ, ಮಂತ್ರ, ಪುರೋಹಿತ, ಕರ್ತೃ, ಉಪಕರಣಗಳು, ಹವಿಸ್ಸು– ಎಲ್ಲವೂ ಬೇಕು. ಇತರ ಯಜ್ಞಗಳು ಯಾರನ್ನು ಉದ್ದೇಶಿಸಿ ನಡೆಯುವವೋ ಅಂಥ ದೇವತೆಗಳೆಲ್ಲರೂ ಈ ಯಜ್ಞವನ್ನು ಮಾಡುವ ಕರ್ತೃರು. ಈ ಯಜ್ಞಕ್ಕೆ ದೇವತೆಯು ಪುರುಷನೆಂದೂ ಪರಬ್ರಹ್ಮನೆಂದೂ ಹೇಳಿರುತ್ತದೆ. ಈ ಯಜ್ಞೋಪಾಸ್ಯನಾದ ದೇವನು ವೇದದ ಕರ್ಮಕಾಂಡದ ದೇವತಾಸ್ವರೂಪಿಯೂ ಜ್ಞಾನಕಾಂಡಪ್ರತಿಪಾದ್ಯವಾದ ಪರಬ್ರಹ್ಮವೂ (ನಾರಾಯಣನೂ) ಇತಿಹಾಸಪುರಾಣಾಗಮಾದಿಶಾಸ್ತ್ರಗಳಲ್ಲಿ ಪ್ರತಿಪಾದ್ಯ

ನಾಗಿರುವ ಭಗವಂತನೂ ಆಗಿರುವನು. ಈ ದೇವನೇ ಪುರೋಹಿತನೆಂದೂ ಹೋಮಾಗ್ನಿಯೆಂದೂ ಹವಿಸ್ಸೆಂದೂ ಯಜ್ಞೋಪಕರಣಗಳೆಂದೂ ಇಲ್ಲಿ ವರ್ಣಿಸಲ್ಪಟ್ಟಿರುವುದನ್ನು ನೋಡಿದರೆ ಭಗವದ್ಗೀತೆಯ 'ಬ್ರಹ್ಮಾರ್ಪಣಂ ಬ್ರಹ್ಮ ಹವಿಃ' ಎಂಬ ಶ್ಲೋಕವು ನೆನಪಿಗೆ ಬರುತ್ತದೆ. ಹೀಗೆ ವೇದ ಸಾಹಿತ್ಯದ ಸಕಲಭಾಗಗಳೂ ಪುರುಷಸೂಕ್ತದಲ್ಲಿ ಸಮಷ್ಟಿಯಾಗಿ ಸಾರ್ಥಕತೆಯನ್ನು ಪಡೆಯುತ್ತವೆ.

ವೇದಯುಗಾನಂತರ ಹಿಂದೂಧರ್ಮಗ್ರಂಥರಾಶಿಯಲ್ಲಿ ಧರ್ಮಶಾಸ್ತ್ರ, ಇತಿಹಾಸ, ಪುರಾಣ, ಆಗಮ, ತಂತ್ರ, ದರ್ಶನ–ಮೊದಲಾದ ವಿವಿಧ ಜಾತಿಯ ಶಾಸ್ತ್ರಗಳು ವೇದಾರ್ಥವನ್ನು ವಿಶದೀಕರಿಸುತ್ತೇವೆಂದು ಹೇಳಿಕೊಳ್ಳುತ್ತಾ ಹೊರಟಿವೆ. ಇವುಗಳಲ್ಲಿ ಪ್ರತಿಯೊಂದೂ ತಾನು ಮಾತ್ರವೇ ಈ ಕಾರ್ಯವನ್ನು ಸಂಪೂರ್ಣವಾಗಿಯೂ ಶುದ್ಧವಾಗಿಯೂ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿವೆ. ಯಜ್ಞಮತವು ಮಾತ್ರವೇ ಶುದ್ಧವೈದಿಕಸಮ್ಮತವಾದುದು– ಎಂಬ ಅಭಿಪ್ರಾಯವು ಅತ್ಯಂತಪ್ರಾಬಲ್ಯವನ್ನು ಪಡೆದಾಗ ಯಜ್ಞಭಿನ್ನಸಾಧನಾವಲಂಬಿಗಳು ತಮ್ಮತಮ್ಮ ಸಾಧನಗಳು ಒಂದೊಂದು ಬಗೆಯಾದ ಯಜ್ಞವೇ ಆಗಿವೆ– ಎಂದು ಅರ್ಥವನ್ನು ಹೇಳಿಕೊಂಡು ಕರ್ಮಠರ ಮಧ್ಯೆ ಅವರಿಗೆ ಸಮ್ಮತವಾಗುವ ರೀತಿಯಲ್ಲಿ ತಮ್ಮ ವೈದಿಕತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟರು. ಉಪನಿಷತ್ಕಾರರು ನಿಜವಾದ ಯಜ್ಞವು ಜ್ಞಾನಯಜ್ಞವೆಂದು ನಿರೂಪಿಸಿ ಅಶ್ವಮೇಧಪುರುಷಮೇಧಯಜ್ಞಾದಿಗಳಿಗೆ ಜ್ಞಾನ (ಉಪಾಸನಾ)ರೂಪವಾಗಿ ಅರ್ಥವನ್ನು ಹೇಳತೊಡಗಿದರು. ಆಗಮಶಾಸ್ತ್ರಕಾರರು ಯಜ್ಞ ಎಂದರೆ ಭಗವದಾರಾಧನೆ– ಎಂದು ಅರ್ಥಮಾಡಿ ಭಕ್ತಿಯಜ್ಞತತ್ತ್ವವನ್ನು ಕಲ್ಪಿಸಿದರು. ಧರ್ಮಶಾಸ್ತ್ರಕಾರರುಗಳು ವರ್ಣಾಶ್ರಮಧರ್ಮಗಳಿಗೆ ಯಜ್ಞಶಬ್ದಾರ್ಥವನ್ನು ಹೊಂದಿಸಿ ಈ ವರ್ಣಾಶ್ರಮಾಚಾರವು ಯಜ್ಞಕರ್ಮದ ಪ್ರತಿರೂಪವೆಂದು ವರ್ಣಿಸಿದರು. ಹೀಗೆ ಯಜ್ಞಶಬ್ದಕ್ಕೆ ಬಗೆಬಗೆಯಾಗಿ ಹೇಳುವ ಅರ್ಥಸಂಪ್ರದಾಯಕ್ಕೆಲ್ಲ ಪುರುಷಸೂಕ್ತವೇ ಮೂಲಸ್ಥಾನವಾಗಿದೆ. ಜ್ಞಾನಯಜ್ಞತತ್ತ್ವವೂ ಭಕ್ತಿಯಜ್ಞತತ್ತ್ವವೂ ಪುರುಷಸೂಕ್ತದಲ್ಲಿ ಉದಯಗೊಂಡಿದೆ. ಧರ್ಮಶಾಸ್ತ್ರಕ್ಕೆ ಆಧಾರವಾದ ಚಾತುರ್ವರ್ಣ್ಯವ್ಯವಸ್ಥೆಯೂ ಸಾಮಾಜಿಕಕರ್ಮವ್ಯವಸ್ಥೆಯೂ

ಇಲ್ಲೇ ಅಂಕುರಿಸಿವೆ. ಮಾನವಸಮಾಜವು ಭಗವದ್ರೂಪಿಯೆಂದೂ ಅದರ ವರ್ಣವಿಭಾಗಗಳು ಅವನ ಅಂಗಗಳೆಂದೂ ಈ ಭಗವಂತನು ಮತ್ತೊಂದು ದೃಷ್ಟಿಯಿಂದ ಯಜ್ಞರೂಪನೂ ಯಜ್ಞಪಶುವೂ ಆಗಿರುವದರಿಂದ ಸಾಮಾಜಿಕ ವರ್ಣಗಳು ಯಜ್ಞಾಂಗವೆನ್ನಿಸಿ ಯಜ್ಞಾರ್ಥವಾಗಿಯೇ ಹುಟ್ಟಿವೆಯೆಂದೂ ಇಲ್ಲಿ ಸೂಚಿಸಲ್ಪಟ್ಟಿರುವದರಿಂದ ಧರ್ಮಶಾಸ್ತ್ರಮತಕ್ಕೂ ಪುರುಷಸೂಕ್ತವೇ ಮೂಲಸ್ಥಾನವಾಗಿದೆ. ಹೀಗೆ ಪುರುಷಸೂಕ್ತವು ವೇದಾರ್ಥಪ್ರತಿಪಾದಕ ವಾದ ಹಾಗೂ ವೇದೋಪಬೃಂಹಕವಾದ ಶಾಸ್ತ್ರಗಳಿಗೆಲ್ಲ ಆಧಾರವಾಗಿದೆ ಯೆಂದು ಹೇಳಬಹುದು.

ಹಿಂದೂಧರ್ಮದ ಇತಿಹಾಸದಲ್ಲಿ ವಿಶೇಷಪ್ರಸಿದ್ಧಿಯನ್ನು ಪಡೆದ ಮತ ಶಾಖೆ ಎಂದರೆ ಭಾಗವತಧರ್ಮವು. ಇದು ಮೂಲತಃ ವೈಷ್ಣವಮತ ವಾಗಿದ್ದರೂ ಇತರ ಮತಶಾಖೆಯವರೂ ಇದನ್ನು ಹಿಂಬಾಲಿಸಿದ್ದಾರೆ. ಪತಂಜಲಿಯ ವ್ಯಾಕರಣಮಹಾಭಾಷ್ಯದಲ್ಲಿ ಶೈವಭಾಗವತರು- ಎಂಬವರು ಇದ್ದ ಅಂಶವು ಕಂಡುಬಂದಿದೆ. ಜೈನ-ಬೌದ್ಧ-ಸ್ಕಾಂದ-ಶಾಕ್ತ-ಗಾಣಾ ಪತ್ಯಾದಿಗಳೂ ತಮ್ಮತಮ್ಮನ್ನು •ಭಾಗವತರೆಂದು ಕರೆದುಕೊಂಡಿರುತ್ತಾರೆ. ಭಾಗವತಪುರಾಣವು ಎಂಟು ವಿಧವಾಗಿದೆ-ಎಂಬ ಪ್ರತೀತಿಯುಂಟು. ಇಷ್ಟು ಪ್ರಸಿದ್ಧವಾದ ಭಾಗವತಮತದ ಮೂಲವಾಹಿನಿಯಲ್ಲಿ ಭಗವದ್ಗೀತೆಯೂ ಬಾದರಾಯಣಸೂತ್ರಗಳೂ ಮಹಾಭಾರತರಾಮಾಯಣಗಳೂ ಪಾಂಚರಾತ್ರ ಆಗಮವೂ ಹುಟ್ಟಿರುವದಾಗಿ ಪ್ರಸಿದ್ಧಿಯುಂಟು. ಇದರ ಮೂಲಸ್ಥಾಪಕನು ಕೃಷ್ಣಭಗವಂತನು. ಪಾಂಚರಾತ್ರದಲ್ಲಿಯೂ ಮಹಾಭಾರತದಲ್ಲಿಯೂ ಪ್ರತಿ ಪಾದಿತವಾಗಿರುವ ಭಾಗವತಧರ್ಮಕ್ಕೆ ನಾರಾಯಣನು ಮೂಲಸ್ಥಾಪಕ ನೆಂದು ಹೇಳಿದೆ. ನರನಾರಾಯಣಋಷಿಗಳಿಬ್ಬರೂ ಭಗವಾನ್ ನಾರಾಯಣನ ಅವತಾರವೆಂದು ಹೇಳುತ್ತಾರೆ. ಆಧ್ಯಾತ್ಮವಿದ್ಯೆಗೆ ನಾರಾಯಣನೇ ಪ್ರಥಮಾ ಚಾರ್ಯನೆಂದು ಬಹಳ ಕಡೆಗಳಲ್ಲಿ ಸ್ತುತ್ಯನಾಗಿರುತ್ತಾನೆ. ಮತತ್ರಯ ದವರೂ ತಮ್ಮತಮ್ಮ ಮೂಲಗುರುವು ನಾರಾಯಣನೇ ಎಂದು ಹೇಳಿಕೊಳ್ಳು ತ್ತಾರೆ. ಹೀಗೆ ನಾರಾಯಣಪ್ರೋಕ್ತವೆಂದು ಹೆಸರನ್ನು ಹೊತ್ತಿರುವ ಶಾಸ್ತ್ರಗಳು ಅಸಂಖ್ಯಾತವಾಗಿವೆಯಾದರೂ ಪ್ರಾಚೀನವಾದ ನಾರಾಯ ಣೋಪದೇಶವು ಪುರುಷಸೂಕ್ತವೇ ಆಗಿದೆ. ಭಾಗವತಧರ್ಮಕ್ಕೆ ನಿಜವಾದ ಮೂಲಸ್ಥಾನವು ಪುರುಷಸೂಕ್ತವು.

ಪುರುಷಸೂಕ್ತದಲ್ಲಿ ಪ್ರಧಾನವಾಗಿ 'ವಿಶ್ವವೆಲ್ಲವೂ ಪುರುಷನೇ' ಎಂಬ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿದೆ. ಮುಂಡಕೋಪನಿಷತ್ತಿನಲ್ಲಿಯೂ 'ಪುರುಷ ಏವೇದಂ ವಿಶ್ವಮ್' ಎಂದು ತಿಳಿಸಿರುತ್ತದೆ. ಹಾಗೆಯೇ ಪುರುಷನಿಂದಲೇ ಎಲ್ಲವೂ ಹುಟ್ಟಿಬಂದಿರುತ್ತವೆಯೆಂದೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಪುರುಷನು ವಿಶ್ವರೂಪನಾಗಿರುತ್ತಾನೆಂದೂ ತಿಳಿಸಿರುತ್ತದೆ. ಆದ್ದರಿಂದ ಪುರುಷಸೂಕ್ತಕ್ಕೂ ಮುಂಡಕೋಪನಿಷತ್ತಿಗೂ ಕೆಲವು ಅಂಶಗಳಲ್ಲಿ ಹೋಲಿಕೆಯಿದೆ- ಎನ್ನಬಹುದು. ಅಂತೂ ಪುರುಷತತ್ತ್ವ, ವಿಶ್ವತತ್ತ್ವಗಳನ್ನೂ ಪುರುಷನು ನಾರಾಯಣನೇ-ಎಂಬಿದನ್ನೂ ನಾರಾಯಣ ಎಂಬ ತತ್ತ್ವದ ವಿವರವನ್ನೂ ವಿಚಾರಮಾಡಿದಲ್ಲಿ ಪುರುಷಸೂಕ್ತದ ತಾತ್ಪರ್ಯದಲ್ಲಿ ನೆಲೆನಿಲ್ಲಬಹುದಾಗಿದೆ.

ವಿಶ್ವವೆಂದರೇನು ? ಎಂಬಿದನ್ನು ವಿಚಾರಮಾಡೋಣ. ವಿಶ್ವವು ಪ್ರಕೃತಿಮಯವಾಗಿರುವದು ಪ್ರಸಿದ್ಧವು. ಈ ಪ್ರಕೃತಿಯು ಆಧ್ಯಾತ್ಮಿಕಾದಿ ವಿಭಾಗಗಳಿಂದ ಕೂಡಿರುವದು. ಪ್ರಕೃತಿಯ ಗುಣಗಳಾದ ಸತ್ತ್ವ, ರಜಸ್ಸು, ತಮಸ್ಸುಗಳೇ ವಿಶ್ವದ ಮೂಲರೂಪವು-ಎಂದು ನಮಗೆ ಶಾಸ್ತ್ರಗಳು ತಿಳಿಸುತ್ತವೆ. ಪುರಾಣಗಳಂತೂ ತ್ರಿಗುಣಗಳ ವಿಕಾರ ವ್ಯಾಪಾರಗಳಿಂದಲೇ ಈ ಸ್ಥೂಲವಿಶ್ವದ ಆವಿರ್ಭಾವವಾಗಿರುವದನ್ನು ವಿಸ್ತಾರವಾಗಿ ವರ್ಣಿಸಿವೆ. ಆದರೆ ಪ್ರಕೃತಿಯು ತಾನಾಗಿಯೇ ವ್ಯಾಪಾರಮಾಡುವದಿಲ್ಲ. ಅದು ಜಡವು. ಆದ್ದರಿಂದ ಚೇತನನಾದ ಪುರುಷನು ಅದಕ್ಕೆ ಪ್ರೇರಕನಾಗಿದ್ದು ವ್ಯಾಪಾರ ಮಾಡಿಸುವನು. ಈ ರೀತಿಯಾಗಿ ಪ್ರಕೃತಿಯ ದ್ವಾರದಿಂದ ಭಗವಂತನು ಜಗತ್ಕಾರಣನಾಗಿರುತ್ತಾನೆ-ಎಂದು ಭಗವದ್ಗೀತೆಯೂ ಪ್ರತಿಪಾದಿಸಿದೆ. ಆದರೆ ಈ ಪ್ರಕೃತಿಯು ಅವಿದ್ಯಾಕಲ್ಪಿತವೆಂಬುದನ್ನು ಮರೆಯಬಾರದು. ಪ್ರಕೃತಿಯಿಂದ ಹೊರಬಿದ್ದಿರುವ ವಿಚಿತ್ರವಾದ ವಿಶ್ವವು ಸ್ವರೂಪದಿಂದ ಭಗವಂತನೇ ಆಗಿಯೂ, ತೋರಿಕೆಯ ರೂಪದಿಂದ ಜಗತ್ತಾಗಿಯೂ ಇದ್ದುಕೊಂಡಿದೆ. ಇದನ್ನೇ ಉಪನಿಷತ್ತಿನಲ್ಲಿ 'ಪುರುಷನೇ ವಿಶ್ವವಾಗಿರುತ್ತಾನೆ' ಎಂದು ಹೇಳಿದೆ. ಆದ್ದರಿಂದ ವಿಶ್ವತತ್ತ್ವವು ನಿಜವಾಗಿ ಪುರುಷನೇ ಆಗಿದೆ-ಎಂದರೆ ವಿಶ್ವರೂಪರೂಪನಾದ ಪುರುಷನು ವಿರಾಡ್ರೂಪನೂ ಜಗತ್ತಿಗೆ ಅಂತರ್ಯಾಮಿಯೂ ಆಗಿದ್ದುಕೊಂಡಿರುವನು. ಪುರುಷಸೂಕ್ತದಲ್ಲಿ ಈ ವಿಷಯವನ್ನು ಕುರಿತು ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.

ಈಗ ಪುರುಷನ ವಿಶ್ವರೂಪವನ್ನು ವಿಚಾರಮಾಡೋಣ. ವಿಶ್ವರೂಪ ರೂಪಶಬ್ದಕ್ಕೆ ನಾನಾರ್ಥಗಳಿವೆ. ಹೇಗೆಂದರೆ : (೧) ದೊಡ್ಡದಾದ ರೂಪವನ್ನು ಕೆಲವುವೇಳೆ ವಿಶ್ವರೂಪವೆನ್ನುವರು. ಉದಾಹರಣೆಗೆ ಸೀತಾದೇವಿಗೆ ಆಂಜನೇಯನು ತೋರಿಸಿದ ತನ್ನ ದೊಡ್ಡರೂಪ. (೨) ಜಗತ್ತನ್ನೆಲ್ಲ ವ್ಯಾಪಿಸುವಂಥ ರೂಪವೆಂದೂ ಅರ್ಥಮಾಡಬಹುದು. ಉದಾಹರಣೆಗೆ ವಾಮನನು ತ್ರಿವಿಕ್ರಮನಾದದ್ದು. ಸೂರ್ಯನು ತನ್ನ ಪ್ರಕಾಶರೂಪದಿಂದ ಜಗತ್ತನ್ನೆಲ್ಲ ಬೆಳಗುವದು–ಇತ್ಯಾದಿ: (೩) ವಿಶ್ವಾಧಿಷ್ಠಾನರೂಪವೂ ವಿಶ್ವರೂಪವೆನಿಸುವದು. ಇದು ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ. (೪) ವಿಶ್ವಗುಣರೂಪವೂ ವಿಭೂತಿರೂಪವೂ ವಿಶ್ವರೂಪ ರೂಪವಾಗಬಲ್ಲದು. ನೀರಿನಲ್ಲಿರುವ ರಸಗುಣ, ಚಂದ್ರಸೂರ್ಯರ ಪ್ರಭೆ, ಮನುಷ್ಯರೂಪದಲ್ಲಿರುವ ಪೌರುಷ, ಬುದ್ಧಿವಂತರ ಬುದ್ಧಿಗುಣ–ಇತ್ಯಾದಿ ಗೀತೆಯ ಏಳು ಮತ್ತು ಹತ್ತನೆಯ ಅಧ್ಯಾಯದಲ್ಲಿ ನಿರೂಪಿಸಲ್ಪಟ್ಟಿರುವದು. (೫) ಹೀಗೆಯೇ ವಿಶ್ವಾಂತರ್ಯಾಮಿರೂಪವನ್ನೂ ವಿಶ್ವರೂಪವೆನ್ನಬಹುದು. ಮಣಿಗಳೆಲ್ಲವೂ ದಾರದಲ್ಲಿ ಪೋಣಿಸಲ್ಪಟ್ಟಿರುವಂತೆ ಎಂಬಿದೇ ಇದಕ್ಕೆ ಉದಾಹರಣೆಯು. ಈ ಎಲ್ಲಾ ಅರ್ಥಗಳೂ ನಿಜವೇ ಆಗಿರುತ್ತವೆ. ಆದ್ದರಿಂದ ವಿಶ್ವರೂಪನೂ ವಿಶ್ವಾಂತರ್ಯಾಮಿಯೂ, ವಿಶ್ವಮಯನೂ ವಿಶ್ವಪ್ರಮಾಣನೂ ವಿಶ್ವವ್ಯಾಪಕನೂ ಆಗಿರುವ ನಾರಾಯಣನು 'ವಿಶ್ವಮ್–ವಿಷ್ಣುಃ' ಎಂದು ಸ್ತುತಿಸಿರುವಂತೆ ವಿಶ್ವವೆಂಬ ನಾಮಧೇಯವುಳ್ಳವನಾಗಿರುತ್ತಾನೆ– ಎಂದು ಮನನಮಾಡಿಕೊಳ್ಳಬೇಕಾಗಿರುತ್ತದೆ.

ವಿಶ್ವರೂಪನಾದ ಈ ಪರಮಾತ್ಮನೇ ಅನಂತನಾಗಿರುವನು. ವಿಶ್ವವು ದೊಡ್ಡದೇನೋ ನಿಜ. ಆದರೆ ಅದು ತಾನು ತೋರುತ್ತಿರುವ ರೂಪದಿಂದ ಅನಂತವಾಗಲಾರದು. ಏಕೆಂದರೆ ನಾಮರೂಪಗಳಿಗೆ ಬದ್ಧವಾಗಿರುವ ವಿಶ್ವವು ಅನಂತವಾಗಲು (ಅಂತವಿಲ್ಲದ್ದಾಗಲು) ಸಾಧ್ಯವಿಲ್ಲ. ಆದ್ದರಿಂದ ದೇಶ–ಕಾಲ–ವಸ್ತು–ಅವಸ್ಥೆ–ಗುಣ–ಮೊದಲಾದ ಪರಿಮಿತಿಗಳು ವಿಶ್ವವನ್ನು ಅಂತವುಳ್ಳದ್ದಾಗಿ ಮಾಡಿರುವವು. ಆದ್ದರಿಂದ ವಿಶ್ವವೇ ದೇವರಾದಾಗ ದೇವರೂ ಅನಂತನಲ್ಲದೆ ಹೋದಾನೆ ? ಎಂಬ ಸಂಶಯವು ಕೆಲವರಿಗೆ ಬರಲಿದೆ. ಅದಕ್ಕೆ ಉತ್ತರವೇನೆಂದರೆ : ದೇವರೆಂಬವನು ತಾನು ತೋರಿಕೊಳ್ಳುತ್ತಿರುವ

ರೂಪದಿಂದ ಪರಿಚ್ಛಿನ್ನನಾದಂತೆ ಕಂಡುಬರುತ್ತಾನೆ; ನಿಜ. ಆದರೆ ಸ್ವರೂಪ ದಿಂದ ಅನಂತನೇ ಆಗಿದ್ದಾನೆ. ಹೇಗೆ ಆಕಾಶವು ಮನೆ, ವರಾಂಡ, ಕೋಣೆ, ಗೋಡೆಬೀರು–ಮುಂತಾದ ರೀತಿಯಿಂದ ಪರಿಚ್ಛಿನ್ನವಾಗಿದ್ದಂತೆ ಕಂಡುಬರು ವದೋ ನಿಜವಾಗಿ ಹಾಗೆ ತುಂಡಾಗಿಲ್ಲವೋ ಹಾಗೆಯೇ ಆಕಾಶಕ್ಕೂ ಆತ್ಮ ನಾದ ನಿರ್ವಿಶೇಷನಿರ್ಗುಣನಿರ್ವಿಕಾರನಾದ ದೇವನು ಎಂದೆಂದಿಗೂ ಸ್ವರೂಪ ದಿಂದ ಅಪರಿಚ್ಛಿನ್ನನೇ ಆಗಿರುವನು. ಕಲ್ಪಿತರೂಪದಿಂದಲಾದರೊ, ಅಪರಿಚ್ಛಿನ್ನ ನಂತೆ ತೋರುತ್ತಾ ಎಲ್ಲವನ್ನೂ ಅಂತರ್ಯಾಮಿರೂಪದಿಂದಲೂ ವ್ಯಾಪಿಸಿ ಕೊಂಡಿರುವನು. ಹೀಗೆ ದೇವನು ವಿಶ್ವವೂ ಅನಂತವೂ ಆಗಿರುವದು ಅಸ ಮಂಜಸವೇನೂ ಅಲ್ಲ. ಭಗವಂತನನ್ನು ನಾವು ಯಾವ ಹೆಸರಿನಿಂದ ಕರೆದು ಏನೇನು ಗುಣಗಳನ್ನು ಹೇಳಿದರೂ ಅವು ಆವನ ಸ್ವರೂಪದಲ್ಲಿ ಮಾಡಿರುವ ಅಧ್ಯಾರೋಪಮಾತ್ರನಾಗಿರುತ್ತವೆ. ಆದ್ದರಿಂದ ವಿಶ್ವವೆಲ್ಲವೂ ಭಗವಂತನಲ್ಲಿ ಯೇ ತೋರುತ್ತಿದ್ದರೂ ಗುಣದೋಷಗಳೇನೂ ಆತನಿಗೆ ಅಂಟಲ್ಲದಿರುವದಾಗಿ ಅವನ ಅನಂತತ್ವಕ್ಕೆ ಹಾನಿಯಿರುವದಿಲ್ಲ.

ಈಗ ಪುರುಷತತ್ತ್ವವನ್ನು ವಿಚಾರಮಾಡಬಹುದಾಗಿದೆ. ಪುರುಷ ಶಬ್ದದ ಅರ್ಥಗಳು ಹೀಗಿವೆ: (೧) ಪುರುಷ–ಗಂಡಸು. ಜಗತ್ತಿಗೆ ಕಾರಣ ವಾದ ಪ್ರಕೃತಿಯನ್ನು ಸ್ತ್ರೀಯೆಂದೂ ಈಕೆಯು ಪರಮಾತ್ಮನ ಶಕ್ತಿರೂಪ ಗಳೆಂದೂ ಶಾಸ್ತ್ರಗಳಲ್ಲಿ ವರ್ಣಿಸಿದೆ. ಆದರೆ ಈ ಸ್ತ್ರೀತತ್ತ್ವವನ್ನು ಮಾತ್ರ ಭಾವನೆಯಿಂದ ಉಪಾಸನೆಮಾಡಿದಾಗ ಮಾತ್ರವೇ ಮಾನವನು ಉದ್ಧಾರ ವಾಗುವನು. ಹಾಗಿಲ್ಲದಿದ್ದರೆ ಮಾಯೆಯ ಸೆಳೆತವುಳ್ಳ ಈ ಪ್ರಪಂಚದಲ್ಲಿ ಅನೇಕ ಸಾಧಕರಿಗೆ ಇದು ಕಷ್ಟವಾಗಿ ಪರಿಣಮಿಸಬಹುದು. ಚಿತ್ತಶುದ್ಧಿ ಯಿಲ್ಲದವರಿಗೆ ದೇವರನ್ನು ಸ್ತ್ರೀಯೆಂದು ಚಿಂತಿಸುವಂತೆ ಹೇಳಿಕೊಟ್ಟಾಗ ಅನೇಕ ಸಮಸ್ಯೆಗಳು ಉದ್ಭವಿಸಬಹುದು. ಆದ್ದರಿಂದ ಭಗವಂತನ ಶಕ್ತಿಯನ್ನು ಪ್ರಕೃತಿಯೆಂದೆಣಿಸಿ ಆಕೆಯು ಭಗವಂತನ ಪತ್ನಿಯೂ ಲೋಕಮಾತೆಯೂ ಆಗಿದ್ದಾಳೆಂದು ತಿಳಿಸುವ ಮೂಲಕ ದೇವರನ್ನು ಗಂಡಸನ್ನಾಗಿಯೇ ಉಳಿಸುವ ಪ್ರಯತ್ನವು ಕೆಲವು ವಾದಿಗಳಲ್ಲಿ ಉಂಟಾಗಿರಬೇಕು. ಇಂಥ ಭಾವನೆಗಳಿಗೆ ಪುರುಷಸೂಕ್ತವು ಜನ್ಮಸ್ಥಳವಾಗಿದ್ದು ಪುರುಷನೆಂದರೆ ಗಂಡಸೆಂದೂ ಅರ್ಥ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. (೨) ವೀರ್ಯ ಅಥವಾ

ರೇತಸ್ಸನ್ನೂ ಪುರುಷನೆನ್ನುವರು. ಸೃಷ್ಟಿಯಜ್ಞದಲ್ಲಿ ಪೃಷದಾಜ್ಯಹೋಮ ದಿಂದ ಉತ್ತಮಪ್ರಾಣಿಗಳ ಜನನವಾಯಿತೆಂಬ ಪುರುಷಸೂಕ್ತದ ವರ್ಣನೆಯು ಈ ಅಭಿಪ್ರಾಯವನ್ನು ಸೂಚಿಸುತ್ತದೆ. (೩) 'ಪುರಿ ಶೇತೇ ಇತಿ ಪುರುಷಃ' ಎಂದೂ, ಎಲ್ಲಾ ಶರೀರಗಳಲ್ಲಿಯೂ ಇದ್ದುಕೊಂಡಿರುವ ಅಂತರ್ಯಾಮಿಯೇ ಪುರುಷನೆಂಬ ಅರ್ಥವೂ ಪ್ರಸಿದ್ಧವಾಗಿದೆ. (೪) ಪುರುಷ, ಪ್ರಗತಿಶೀಲ– ಪುರತೀತಿ ಪುರುಷಃ-ಪುರ ಅಗ್ರಗಮನೇ ಎಂಬ ಧಾತುವಿನಂತೆ 'ಅಗ್ರೇ ಗಚ್ಛತಿ' (ಮುಂದೆ ಬರತಕ್ಕವನು) ಎಂಬರ್ಥವೂ ಪುರುಷಶಬ್ದಕ್ಕೆ ಇದೆ. ಪುರುಷ ಸೂಕ್ತದ ವಿಶ್ವಪುರುಷನು ಪ್ರಗತಿಶೀಲನು ಎಂದರ್ಥ. (೫) ಪುರುಷ ಎಂದರೆ ಜೀವಾತ್ಮನೆಂದೂ ಅರ್ಥವಾಗುವದು. ಜೀವಾತ್ಮನು ಪರಮಾತ್ಮನ ಅಂಶನೇ ಆಗಿರುವದರಿಂದ ಈ ಅರ್ಥವೂ ಹೊಂದುತ್ತದೆ. (೬) ಕೊನೆಯದಾಗಿ ಪುರುಷನೆಂದರೆ ಸರ್ವಾಂತರ್ಯಾಮಿಯಾದ ನಾರಾಯಣಪರಮಾತ್ಮನೆಂಬುದೇ ಮುಖ್ಯಾರ್ಥವು. 'ಪುರುಷಾನ್ನ ಪರಂ ಕಿಂಚಿತ್' ಎಂಬ ಉಪನಿಷದ್ವಾಕ್ಯ ವೂ ಇದನ್ನು ಸಮರ್ಥಿಸುವದು. ನಮ್ಮಲ್ಲಿ ಮಹಾಪುರುಷನ ಲಕ್ಷಣವೇನೆಂಬು ದನ್ನು ನಿರ್ಣಯಿಸಲು ವೈದಿಕರೂ ಜೈನಬೌದ್ಧರೂ ಬಹಳವಾಗಿ ಪ್ರಯತ್ನಿಸಿ ರುವರು. ವೈದಿಕಪಂಥದವರು ಮಹಾಪುರುಷರೆಂದರೆ ನಾರಾಯಣನೇ ಎಂದೂ ಹೇಳುವರು. ಈ ಮಹಾಪುರುಷತತ್ತ್ವಕ್ಕೂ ನಾರಾಯಣತತ್ತ್ವಕ್ಕೂ ಪುರುಷ ಸೂಕ್ತವೇ ಮೂಲಸ್ಥಾನವಾಗಿರುವದು–ಎಂದು ತಿಳಿಯಬೇಕು.

ಈಗ ಪುರುಷಸೂಕ್ತದ ತಾತ್ಪರ್ಯಕೇಂದ್ರನಾದ ನಾರಾಯಣನ ತತ್ತ್ವ ವನ್ನು ವಿಚಾರಿಸೋಣ. ಪುರುಷಸೂಕ್ತಮಂತ್ರದ್ರಷ್ಟಾರನಾದ ಋಷಿಯೂ 'ನಾರಾಯಣ'ನೆಂದೇ ಪ್ರಸಿದ್ಧನಾಗಿರುತ್ತಾನೆ. ಶತಪಥಬ್ರಾಹ್ಮಣದಲ್ಲಿ 'ಪುರುಷನಾರಾಯಣ'ನು 'ನಾನು ಸರ್ವಭೂತಗಳನ್ನೂ ಅತಿಕ್ರಮಿಸಬೇಕು, ನಾನು ಸರ್ವವೂ ಆಗಬೇಕು–ಎಂದು ಬಯಸಿದನು ; ಅವನು ಐದು ರಾತ್ರಿ ಗಳು ನಡೆಯತಕ್ಕ ಪುರುಷಮೇಧ–ಎಂಬ ಯಜ್ಞವನ್ನು ಅವಲೋಕಿಸಿದನು. ಅದನ್ನು ತೆಗೆದುಕೊಂಡನು. ಅದರಿಂದ ಯಾಗಮಾಡಿದನು ; ಅದರಿಂದ ಅವನು ಸರ್ವಭೂತಗಳನ್ನೂ ಅತಿಕ್ರಮಿಸಿ ಸರ್ವವೂ ತಾನೇ ಆದನು' ಎಂದು ಮುಂತಾಗಿ ವಿವರಿಸಿ ಮುಂದೆ ಪುರುಷಸೂಕ್ತವನ್ನು ಉದಾಹರಿಸಲಾಗಿದೆ.

ಹೀಗೆ ಪುರುಷನಾರಾಯಣನು ಪುರುಷಯಜ್ಞವನ್ನು ಮಾಡಿದವನೂ ಅದರ ಸ್ವರೂಪವೂ ಪಶುವೂ ತಾನೇ ಆಗಿರುವನು. ಪುರುಷಸೂಕ್ತವು ಹೀಗೆಂದು ತಿಳಿಸುತ್ತಿದೆ.

ನಾರಾಯಣಶಬ್ದದಲ್ಲಿ ನಾರಾ-ಅಯನ ಎಂದು ಎರಡು ಪದಗಳಿವೆ. ನಾರಾ ಎಂಬ ಶಬ್ದಕ್ಕೆ ಜಲ, ಕಮಲ, ಯೋಗಿಗಳು, ಭಕ್ತರು ಚರಾಚರ ವಿಶ್ವ, ಭಗವಂತನ ಗುಣಗಳಾದ ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಸ್ಸು ಗಳು, ಜೀವಾತ್ಮ, ಮಾನವಸಮಾಜ- ಈ ಅರ್ಥಗಳು ಮಾಡಲ್ಪಟ್ಟಿವೆ. ಅಯನಶಬ್ದಕ್ಕೆ ನಿವಾಸಿ, ಆಕರ, ವ್ಯಾಪ್ಯ, ಅಂತರ್ಯಾಮಿ, ಆಶ್ರಯ, ಅಧಿಷ್ಠಾನ, ಪ್ರವರ್ತಕ, ಸಾಕ್ಷಿ, ಉಪಾಯ- ಇತ್ಯಾದಿ ಅರ್ಥಗಳನ್ನು ಬಲ್ಲವರು ಹೇಳುತ್ತಾರೆ. ಈ ಎರಡು ಪದಗಳ ಅರ್ಥವನ್ನು ಗುಣಿಸಿದರೆ ನಾರಾಯಣಶಬ್ದಕ್ಕೆ ಎಂಭತ್ತು ವಿಧವಾದ ಅರ್ಥಗಳು ಹುಟ್ಟುತ್ತವೆಯೆಂತ ತಿಳಿದುಬಂದಿದೆ. ನಾರಶಬ್ದಕ್ಕೆ ಮನುಸ್ಮೃತಿ-ಮುಂತಾದ ಬಹುಕಡೆಗಳಲ್ಲಿ ನೀರು ಎಂಬರ್ಥವು ಸೂಚಿಸಲ್ಪಟ್ಟಿದೆ. ವಿಶ್ವದ ಮೂಲರೂಪವು ಜಲವೆಂದು ಅನೇಕಕಡೆಗಳಲ್ಲಿ ಹೇಳಿರುವದರಿಂದ ಇಲ್ಲಿ ನಾರ ಎಂಬುದಕ್ಕೆ ವಿಶ್ವವೆಂದು ಅರ್ಥವಾಗುತ್ತದೆ. ನಾರಾಯಣತತ್ತ್ವಕ್ಕೆ ಈ ರೀತಿ ಅರ್ಥಮಾಡುವದಕ್ಕೆ ಮೂಲವು ಋಗ್ವೇದದ ವಿಶ್ವಕರ್ಮಸೂಕ್ತದಲ್ಲಿ ದೊರಕುತ್ತದೆ. ಅದರ ತಾತ್ಪರ್ಯವು ಹೀಗಿದೆ: 'ಯಾವನು ಸ್ವರ್ಗಭೂಮಿಗಳಿಗೂ ದೇವಾಸುರರಿಗೂ ಪರನಾಗಿರುವನೋ ಯಾವನ ಪ್ರಥಮಗರ್ಭವನ್ನು ಜಲವು ಪಡೆದಿದ್ದಿತೋ ಯಾರಲ್ಲಿ ಸರ್ವದೇವತೆಗಳನ್ನೂ ವಿಶ್ವವನ್ನೂ ನೋಡುವೆವೋ ಆ ಇವನಲ್ಲಿ ಎಲ್ಲವೂ ಏಕವಾಗಿರುವವು. ಏಕವಾಗಿರುವ ಈ ಪಾತ್ರವು ಅಜನಾಭಿಯಲ್ಲಿ ನೆಲೆಸಿದ್ದಿತು. ಅದರಲ್ಲಿ ಸಕಲಪದಾರ್ಥಗಳೂ ವಿಶ್ವವೂ ಇದ್ದವು' (ಋ. ೧೮-೮೨-೫-೬). ಹೀಗೆ ವಿಶ್ವಪುರುಷನು ನಾರಾಯಣನು. ವಿಶ್ವಶರೀರವು ಯಜ್ಞರೂಪವಾದ ಪರಿಣಾಮದಿಂದ ಪ್ರಗತಿಯನ್ನು ಹೊಂದಿ ಮಾನವ ಸಮಾಜದಲ್ಲಿ ಸಾರ್ಥಕ್ಯವನ್ನೂ ಪಡೆದಿದೆ. ಇಂಥ ಸಮಾಜರೂಪಿಯಾದ ಭಗವಂತನ ಆರಾಧನೆಯಿಂದ ಮಾನವನ ಸಕಲಇಷ್ಟಾರ್ಥಗಳೂ ಸಿದ್ಧಿಸುವವು -ಎಂದು ಹೇಳಿ ಪುರುಷಸೂಕ್ತವು ಸಮಾಪ್ತಿಗೊಳ್ಳುತ್ತದೆ. ಇನ್ನು ಮುಂದೆ ಬಿಡಿಬಿಡಿಯಾಗಿ ಒಂದೊಂದೇ ಋಕ್ಕಿನ ಅರ್ಥವನ್ನು ವಿಚಾರಮಾಡೋಣ.

———

# ೨. ಸಹಸ್ರಶೀರ್ಷಾ ಪುರುಷಃ

ಪುರುಷಸೂಕ್ತವನ್ನು ವ್ಯಾಖ್ಯಾನಮಾಡಲಿರುವ ಈ ಸಂದರ್ಭದಲ್ಲಿ ಯಜುರ್ವೇದಪಾಠಕ್ರಮವನ್ನು ಇಲ್ಲಿ ಸ್ವೀಕರಿಸಿರುವ ವಿಷಯವನ್ನು ವಾಚಕರಿಗೆ ಮೊದಲು ತಿಳಿಸಲಿಚ್ಛಿಸುತ್ತೇನೆ. ಏಕೆಂದರೆ ಋಗ್ವೇದಪಾಠಕ್ರಮಕ್ಕಿಂತ ಯಜುರ್ವೇದದಲ್ಲಿ 'ವೇದಾಹಮೇತಮ್' ಮತ್ತು 'ಧಾತಾ ಪುರಸ್ತಾತ್' ಎಂಬೀ ಎರಡು ಪದ್ಯಗಳು ಅಧಿಕವಾಗಿವೆ. ಈ ಪಾಠಕ್ರಮದಂತೆ ಪುರುಷಸೂಕ್ತವು ಹದಿನೆಂಟುಪದ್ಯಗಳುಳ್ಳದ್ದಾಗುತ್ತದೆ. ಮುಂದೆ 'ಉತ್ತರ-ನಾರಾಯಣ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ 'ಅದ್ಭ್ಯಃ ಸಂಭೂತಃ' ಎಂಬ ಭಾಗವನ್ನೂ ಪುರುಷಸೂಕ್ತಕ್ಕೇ ಜೋಡಿಸಿಕೊಂಡು ಹೇಳುವದು ವಾಡಿಕೆಯಲ್ಲಿದೆ. ಆದ್ದರಿಂದ ಹೆಚ್ಚಿನ ವಿಷಯಗಳು ಕೂಡಿಬರುವದರಿಂದ ಯಜುರ್ವೇದದ ಪಾಠಕ್ರಮವನ್ನೇ ಇಲ್ಲಿ ಅನುಸರಿಸಲಾಗಿದೆ. ಪುರುಷಸೂಕ್ತದ ಮೊದಲನೆಯ ಋಕ್ಕು ಹೀಗಿದೆ :–

**ಸಹಸ್ರಶೀರ್ಷಾ ಪುರುಷಃ । ಸಹಸ್ರಾಕ್ಷಃ ಸಹಸ್ರಪಾತ್ ।**
**ಸ ಭೂಮಿಂ ವಿಶ್ವತೋ ವೃತ್ವಾ । ಅತ್ಯತಿಷ್ಠದ್ದಶಾಂಗುಲಮ್ ॥೧॥**

'ಪುರುಷನು ಸಾವಿರಾರು ತಲೆಗಳುಳ್ಳವನು, ಸಾವಿರಾರು ಕಣ್ಣು, ಕಾಲುಗಳುಳ್ಳವನು, ಅವನು ಎಲ್ಲೆಲ್ಲಿಯೂ ಈ ಭೂಮಿಯನ್ನು ವ್ಯಾಪಿಸಿಕೊಂಡು ಹತ್ತು ಅಂಗುಲಗಳಷ್ಟು ಮೇಲಕ್ಕೆ ಅಕ್ರಮಿಸಿರುವನು'

ಈ ಮಂತ್ರದ ತಾತ್ಪರ್ಯಾರ್ಥವನ್ನು ವಿಚಾರಮಾಡೋಣ. ಪುರುಷನೆಂದರೆ ನಾರಾಯಣನೆಂದೇ ಇಲ್ಲಿ ಅರ್ಥಮಾಡಬೇಕು. ಭಾಷ್ಯದಲ್ಲಿ ವಿರಾಟ್ ಎಂಬ ಹೆಸರಿನ ಬ್ರಹ್ಮಾಂಡಶರೀರನಾದ ಆತ್ಮನು ಎಂದು ವಿವರಣೆಯನ್ನು ಕೊಟ್ಟದೆ. ಆಗಲೂ ನಾರಾಯಣನಿಗಿಂತ ವಿರಾಟ್‌ಪುರುಷನೇನೂ ದೊಡ್ಡವನಲ್ಲವಾದ್ದರಿಂದ ಈ ಅರ್ಥವೇನೂ ಅಸಮಂಜಸವಾಗಲಾರದು. ಉಪಾಧಿವಿಶಿಷ್ಟವಾಗಿರುವ ಬ್ರಹ್ಮವೇ ಪುರುಷನೆನಿಸಲು ಸಾಧ್ಯ. ನಿರ್ವಿಶೇಷಬ್ರಹ್ಮದಲ್ಲಿ ವ್ಯವಹಾರವಿಲ್ಲದಿರುವದರಿಂದ ಇಲ್ಲಿ ಪುರುಷನೆಂದರೆ ಸಗುಣಬ್ರಹ್ಮವನ್ನೇ ಸ್ವೀಕರಿಸಬೇಕು. ಇಂಥ ಬ್ರಹ್ಮವು ನಾರಾಯಣಶಬ್ದವಾಚ್ಯವೂ ಹೌದು. 'ಬ್ರಹ್ಮೈವೇದಂ ವಿಶ್ವಮ್' ಎಂಬ ಶ್ರುತಿಯಂತೆ ಈ ಪುರುಷನು ವಿಶ್ವವನ್ನೆಲ್ಲ

ವ್ಯಾಪಿಸಿಕೊಂಡಿರುತ್ತಾನೆ. ಹೀಗೆ ವ್ಯಾಪಿಸಿರುವಷ್ಟೇ ಇವನ ಸ್ವರೂಪವಲ್ಲ. ವಿಶ್ವವನ್ನೂ ಮೀರಿ ವಿಶ್ವಾತೀತರೂಪದಿಂದಲೂ ಪುರುಷನು ಇದ್ದುಕೊಂಡಿರುತ್ತಾನೆ–ಎಂಬುದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ. ಈ ಪುರುಷನ ಮಹತ್ತ್ವವನ್ನು ಮಂತ್ರದ ಪೂರ್ವಾರ್ಧದಲ್ಲಿ ವಿವರಿಸಿದೆ, ಸಾವಿರ ತಲೆಗಳುಳ್ಳವನು, ಮುಂತಾದ ವರ್ಣನೆಯು ಉಪಲಕ್ಷಣವು; ಎಂದರೆ ಸಾವಿರ ಎಂಬಿದು ಸಂಖ್ಯಾವಾಚಕವೇನೂ ಅಲ್ಲ. ಅನಂತವಾದ ತಲೆಗಳುಳ್ಳವನು ಎಂದರ್ಥ. ಹೀಗೆ ತಲೆ, ಕಣ್ಣು, ಪಾದಗಳನ್ನು ಎಲ್ಲೆಲ್ಲಿಯೂ ನಾಲ್ಕು ದಿಕ್ಕುಗಳಿಗೂ ಚಾಚಿಕೊಂಡಿರುವ ಪುರುಷನು ಗೀತೆಯಲ್ಲಿ ಹನ್ನೊಂದನೆಯ ಅಧ್ಯಾಯದಲ್ಲಿ ವರ್ಣಿಸಿರುವ ವಿರಾಡ್ರೂಪವನ್ನು ನೆನಪಿಗೆ ತರುತ್ತಾನೆ. ಉಪನಿಷತ್ತಿನಲ್ಲಿಯೂ ಒಂದುಕಡೆ 'ವಿಶ್ವತಶ್ಚಕ್ಷುರುತ ವಿಶ್ವತೋ ಮುಖಃ' ಇತ್ಯಾದಿ ವರ್ಣನೆಯಿದೆ. ಇಂಥ ಸ್ಥೂಲವಾದ ವಿರಾಡ್ರೂಪವು ಎಲ್ಲರಿಗೂ ಗೋಚರವಾದುದಾಗಿದೆ. ಒಂದು ರೀತಿಯಲ್ಲಿ ನಾವು ನೋಡುತ್ತಿರುವ ವಿಶ್ವನೆಲ್ಲವೂ ಪುರುಷನ ಶರೀರಾವಯವಗಳಾಗಿಯೆ ಇವೆಯಾದರೂ ಪುರುಷನ ಸ್ವರೂಪಜ್ಞಾನವು ನಮಗಿಲ್ಲದಿರುವದು ಈ ವಿಶ್ವರೂಪನಾದ ಆತ್ಮನ ದರ್ಶನಕ್ಕೆ ಕೊರತೆಯಾಗಿದೆ. ಆದ್ದರಿಂದ ಶಾಸ್ತ್ರಗಳ ಉಪದೇಶಗಳಿಂದ ಈ ವಿಶ್ವವ್ಯಾಪಕಪುರುಷನನ್ನು ಕಾಣುವ ದೃಷ್ಟಿಯನ್ನು ಸಂಪಾದಿಸಿಕೊಂಡು ಈ ಕೊರತೆಯನ್ನು ತುಂಬಿಕೊಳ್ಳಬೇಕು.

ಪುರುಷನ ಈ ಸ್ಥೂಲರೂಪವನ್ನು ಅಧ್ಯಾತ್ಮತತ್ತ್ವದ ದೃಷ್ಟಿಯಿಂದ ಸಮನ್ವಯಮಾಡಿಕೊಳ್ಳಬೇಕಾದದ್ದು ಅಗತ್ಯವಾಗಿದೆ. ಬ್ರಹ್ಮಸೂತ್ರಭಾಷ್ಯದಲ್ಲಿ ಶಂಕರಭಗವತ್ಪಾದರು ಹೀಗೆಂದಿರುತ್ತಾರೆ. : 'ಬ್ರಹ್ಮಕ್ಕೆ ಎರಡು ರೂಪಗಳಿವೆ. ಆದರೆ ಬ್ರಹ್ಮವೇ ಎರಡಿಲ್ಲ. ಇರುವ ಒಂದೇ ಬ್ರಹ್ಮವೇ ನಾಮರೂಪೋಪಾಧಿಗಳಿಂದ ಕೂಡಿದ್ದಾಗ ಸಗುಣವಾಗಿ ತೋರಿಕೊಂಡು ಉಪಾಸ್ಯವೆನಿಸಿರುವದು. ಅದೇ ಬ್ರಹ್ಮವು ವಿಚಾರಕನ ದೃಷ್ಟಿಯಿಂದ ನೋಡಿದಾಗ ಪ್ರಮಾತೃವಿನ ಆತ್ಮನೇ ಆಗಿದ್ದು ನಾಮರೂಪವೇ ಮುಂತಾದ ವಿಶೇಷಗಳಿಲ್ಲದ ನೇತಿ–ಎಂಬ ಸ್ವರೂಪದ್ದಾಗಿರುವದು.' ಹೀಗೆ ಅರೂಪವೂ ಸರೂಪವೂ ಆಗಿದ್ದರೂ ಅದು ಸಗುಣನಿರ್ಗುಣಕಲ್ಪನೆಗಳನ್ನೂ ಮೀರಿದ್ದಾಗಿದೆ. ಆದ್ದರಿಂದಲೇ 'ಅತ್ಯತಿಷ್ಠತ್ ದಶಾಂಗುಲಮ್' ಎಂದು ಹೇಳಿದೆ. ಯಾವನೇ ಆಗಲಿ, ಕಲ್ಪಿತಗಳೊಳಗೆ ಬ್ರಹ್ಮವನ್ನು ಸೇರಿಸಿದನಾದರೆ ಅದು ಅಬ್ರಹ್ಮ

ವಾಗುವದು. ಎಷ್ಟೇ ದೊಡ್ಡದಾಗಿಯೂ ನಿರತಿಶಯವಾಗಿಯೂ ಬ್ರಹ್ಮದ ಸ್ವರೂಪವನ್ನು ನಾವು ಕಲ್ಪಿಸಿದರೂ ಅದು ಕಲ್ಪಕನಿಗಿಂತ ಕಿರಿದಾಗಿಯೇ ಬಿಡುವದು. ಆದ್ದರಿಂದ ಕಲ್ಪಕನ ನಿಜಸ್ವರೂಪವೇ ಬ್ರಹ್ಮವೆಂದು ಶ್ರುತಿಯು ಹೇಳುತ್ತಿರುವದು. ಈ ಅರ್ಥದಲ್ಲಿ ಬ್ರಹ್ಮಕ್ಕಿಂತ ಮಿಗಿಲಾದುದಿಲ್ಲ. ಇಂಥ ಬ್ರಹ್ಮವೇ ಸಗುಣರೂಪದಿಂದ ಪುರುಷನೆಂದು ಇಲ್ಲಿ ಸ್ತುತಿಸಲ್ಪಟ್ಟಿರುತ್ತದೆ. ಇದರ ಕೈಕಾಲುಗಳೆಂಬಿವೆಲ್ಲವೂ ಅವಯವಗಳೆಂದು ಹೇಳುವದಕ್ಕಿಂತ 'ಎಲ್ಲವೂ ಇದೇ ಆಗಿದೆ' ಎಂಬುದೇ ಸೂಕ್ತವು. ಸಕ್ಕರೆಯಿಂದ ಮಾಡಿದ ಗಣಪತಿಯ ಕೈಕಾಲು ಸೊಂಡಿಲು ಹೊಟ್ಟೆಗಳೆಲ್ಲ ಸಕ್ಕರೆಯೇ ಆಗಿರುವಂತೆ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವು ತಾನೊಂದೇ ಇದ್ದುಕೊಂಡು ಜಗತ್ತೂ ಆಗಿ ತೋರುತ್ತಿದೆ–ಎಂದಭಿಪ್ರಾಯ. 'ಸಚ್ಚ ತ್ಯಚ್ಚಾಭವತ್....ಸತ್ಯಮಭವತ್' ಎಂಬ ಉಪನಿಷದ್ವಾಕ್ಯಗಳು ಈ ವಿಷಯವನ್ನು ಸ್ಪಷ್ಟಗೊಳಿಸಿವೆ. ಆದ್ದರಿಂದ ನಾವು ಬ್ರಹ್ಮಜಿಜ್ಞಾಸೆಗೆ ಸಹಾಯವಾಗಿ ಬ್ರಹ್ಮದ ಸಗುಣರೂಪವನ್ನು ಸ್ಥೂಲವಾಗಿ ಕಲ್ಪಿಸಿಕೊಂಡು ಈ ಪುರುಷನ ಮಹಿಮೆಯ ವರ್ಣನೆಯನ್ನು ತಿಳಿಯಬೇಕಾಗಿದೆ. ಪ್ರಾರಂಭಕ್ಕೆ ಸ್ಥೂಲರೂಪದಲ್ಲಿ ಮನಸ್ಸನ್ನು ನಿಲ್ಲಿಸುವದು ನಿರ್ಗುಣ ನಿರಾಕಾರಕ್ಕಿಂತ ಸುಲಭ. ಆದರೆ ಈ ನಮ್ಮ ಕಲ್ಪನೆಗಳಿಂದ ಬ್ರಹ್ಮದಲ್ಲಿ ಮಾತ್ರ ಏನೂ ಹೆಚ್ಚುಕಡಿಮೆಗಳಾಗುವದಿಲ್ಲ. ಅಂತೂ ಪುರುಷನೆಂದರೂ ನಿರ್ಗುಣಬ್ರಹ್ಮವೇ–ನಾರಾಯಣನೇ ಎಂದು ಅಭಿಪ್ರಾಯ.

ಈಗ ಎರಡನೆಯ ಮಂತ್ರವನ್ನು ವಿಚಾರಮಾಡೋಣ.

**ಪುರುಷ ಏವೇದಗ್ಂ ಸರ್ವಮ್ । ಯದ್ಭೂತಂ ಯಚ್ಚ ಭವ್ಯಮ್ ।**
**ಉತಾಮೃತತ್ವಸ್ಯೇಶಾನಃ । ಯದನ್ನೇನಾತಿರೋಹತಿ ॥೨॥**

**'ಹಿಂದೆ ಯಾವದು ಇದ್ದಿತೋ ಮುಂದೆ ಯಾವದು ಉಂಟಾಗಬಹುದೋ ಈಗಿರುವದು ಯಾವದೋ ಇದೆಲ್ಲವೂ ಪುರುಷನೇ. ಮತ್ತು ಈ ಪುರುಷನು ಅಮೃತತ್ವಕ್ಕೆ ಒಡೆಯನು, ಹಾಗೂ ಯಾವದು ಅನ್ನದಿಂದ ಮೀಯಾಗದೆ ಇರುವದೋ ಅದೂ ಪುರುಷನೇ'**

ಈ ಋಕ್ಕಿನಲ್ಲಿ ಪುರುಷನೇ ಎಲ್ಲವೂ ಎಂಬಿದನ್ನು ತಾತ್ಪರ್ಯದಿಂದ ಪ್ರತಿಪಾದಿಸಿದೆ. ಕಾಲಪ್ರವಾಹದಲ್ಲಿ ಹಿಂದೆ, ಈಗ, ಮುಂದೆ–ಎಂಬ ಕಲ್ಪನೆ

ಗಳಿರುವವಷ್ಟೆ! ಈ ಅರ್ಥದಲ್ಲಿ ಎಷ್ಟೋ ಪ್ರಾಣಿಗಳು ಅಥವಾ ಬ್ರಹ್ಮಾಂಡ ಗಳೇ ಹಿಂದೆ ಆಗಿಹೋಗಿರುವವು. ಈಗೊಂದು ಬ್ರಹ್ಮಾಂಡವು ಗೋಚರ ವಾಗುತ್ತಿರುವದು. ಮುಂದಿನ ಕಲ್ಪಗಳಲ್ಲಿಯೂ ಬ್ರಹ್ಮಾಂಡಗಳು ಹುಟ್ಟಿ ತೋರಲಿರುವವು. ತ್ರಿಕಾಲಗಳಲ್ಲಿಯೂ ಹೀಗೆ ತೋರಿ ಮರೆಯಾಗುತ್ತಿರುವ ಇಡಿಯ ಸೃಷ್ಟಿಯೆಲ್ಲವೂ ವಿಶ್ವವೆಲ್ಲವೂ ಈ ಪುರುಷನೇ-ಎಂದಭಿಪ್ರಾಯ. ಮುಂಡಕೋಪನಿಷತ್ತಿನಲ್ಲಿಯೂ 'ಪುರುಷ ಏವೇದಂ ವಿಶ್ವಮ್' ಎಂದೇ ತಿಳಿಸಿದೆ. ಅಂತೂ ಪುರುಷನು ಕಾಲತ್ರಯಗಳಲ್ಲಿಯೂ ಇದ್ದುಕೊಂಡಿರು ವವನಾದ್ದರಿಂದ ಅವಿನಾಶಿಯು. ಈ ಪುರುಷನ ಜಗದ್ರೂಪವು ಮಾತ್ರ ತೋರಿ ಮರೆಯಾಗುತ್ತಿದ್ದರೂ ಪುರುಷನು ತನ್ನ ಆತ್ಮಸ್ವರೂಪದಿಂದ ಯಾವಾಗಲೂ ಇದ್ದುಕೊಂಡೇ ಇರುವನು. ಹೇಗೆ ಬಳೆ, ಸರ, ಕಡಗ-ಮುಂತಾದ ಆಭರಣಗಳು ತೋರಿ ಮರೆಯಾಗುತ್ತಿದ್ದರೂ ಚಿನ್ನವು ತಾನು ತಾನಾಗಿಯೇ ಇದ್ದುಕೊಂಡಿರುವದೋ ಹಾಗೆ ಪುರುಷನೂ ನಿತ್ಯವಾಗಿದ್ದು ಕೊಂಡಿರುವನು. ಆದ್ದರಿಂದಲೇ ಈತನು ಅಮೃತನು ಹಾಗೂ ಅಮೃತದ ಒಡೆಯನು. ಇವನ ಸಂಪರ್ಕದಿಂದಲೇ ಎಲ್ಲಕ್ಕೂ ಅಮೃತತ್ವವು ಬರ ಬೇಕಾಗಿದೆ. ಒಂದರ ಮುಂದಿರುವ ಸೊನ್ನೆಗಳಿಗೆಲ್ಲ ಒಂದು ಎಂಬ ಸಂಖ್ಯೆಯ ಸಾನ್ನಿಧ್ಯದಿಂದಲೇ ಎಲ್ಲಾ ಕಾಲಕ್ಕೂ ಬೆಲೆಯಿರುವಂತೆ ಪುರುಷನ ಇರುವಿಕೆ, ಜ್ಞಾನ, ಆನಂದಗಳ ನೆರಳಿನಲ್ಲಿಯೇ ತ್ರಿಕಾಲದಲ್ಲಿಯೂ ತೋರುವ ಈ ಜಗತ್ತೂ ಸಚ್ಚಿದಾನಂದವೆನಿಸುವದು. ಆದ್ದರಿಂದ ಪುರುಷನೇ ಅಮೃತತ್ವಕ್ಕೆ ಒಡೆಯನು- ಎಂದು ಸಿದ್ಧವಾಗುತ್ತದೆ.

ಈಗ 'ಯದನ್ನೇನಾತಿರೋಹತಿ' ಎಂಬ ವಾಕ್ಯವನ್ನು ವಿಚಾರ ಮಾಡೋಣ. ಅನ್ನ ಎಂದರೆ ಸೃಷ್ಟಿ-ಎಂದರ್ಥ. ಎಲ್ಲಾ ಪ್ರಾಣಿಗಳೂ ಅನ್ನದಿಂದಲೇ ಹುಟ್ಟಿರುವದು ಪ್ರಸಿದ್ಧವು. ಹೀಗೆ ಅನ್ನಮಯವಾಗಿ ಜಗತ್ತು ತೋರಿಕೊಂಡಾಗ ಇದು ಪುರುಷನಿಂದ ಬಂದಿದೆ-ಎಂಬ ತತ್ತ್ವವು ನಮಗೆ ಮರೆಯಾಗಿರುತ್ತದೆ. ತಿರೋಧಾನವೆಂದರೆ ಇದೇ. ಆದರೆ ಈ ಮಂತ್ರದಲ್ಲಿ 'ತಿರೋಹತಿ' ಎಂದು ಪರಿಚ್ಛೇದಮಾಡಲು ಬರುವದಿಲ್ಲವಾದರೂ ಅರ್ಥ ಸ್ವಾರಸ್ಯಕ್ಕಾಗಿ 'ಅನ್ನೇನಾ' ಎಂಬಿದು 'ಅನ್ನೇನ' ಎಂಬ ಶಬ್ದದ ವೈದಿಕ ಪ್ರಯೋಗವೆಂತ ಭಾವಿಸಿ 'ತಿರೋಹತಿ' ಎಂದು ಪದವನ್ನು ಬಿಡಿಸಿಕೊಂಡರೆ

ಈ ವಿಶ್ವವು ಅನ್ನವೆಂಬ ಹೊದಿಕೆಯಿಂದ ಮರೆಮಾಡಲ್ಪಟ್ಟು ಪುರುಷತತ್ತ್ವವನ್ನು ಕಾಣದೆ ಇದೆ-ಎಂದು ಅರ್ಥಮಾಡಬಹುದಾಗಿದೆ. ಈಗಿನ ನಮ್ಮ ಜೀವನ, ಚಿಂತನ, ಹಾಗೂ ಭೌತಿಕವಿಜ್ಞಾನದ ಪ್ರಭಾವದಿಂದ ನಾವು ಶರೀರ ಸುಖವನ್ನೇ ಮುಂದಿಟ್ಟುಕೊಂಡು ಮಾಡುತ್ತಿರುವ ಪುರೋಭಿವೃದ್ಧಿ, ನಾಗರಿಕತೆಯ ಲಕ್ಷಣಗಳನ್ನು ನೋಡಿದರೆ ಅನ್ನದಿಂದ ನಮ್ಮ ಆತ್ಮ (ಪುರುಷ) ತತ್ತ್ವವು ತಿರೋಹಿತವಾಗಿರುವದು ಸ್ಪಷ್ಟವಾಗಿ ಗೋಚರವಾಗುವದು. ಆದರೆ ಪುಷುಷತತ್ತ್ವವು ನಿಜವಾಗಿ 'ಅತಿರೋಹಿತ'ವಾಗಿಯೇ ಇದೆ. 'ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ' ಎಂಬ ಗೀತಾವಾಕ್ಯದಂತೆ ನಿತ್ಯಪ್ರಕಾಶವಾಗಿರುವ ಪುರುಷತತ್ತ್ವವು ಅತಿರೋಹಿತವಾಗಿಯೇ ಇದ್ದುಕೊಂಡು ಜ್ಞಾನಿಗಳಿಗೆ ಗೋಚರವಾಗುತ್ತಿದೆ. ಹೀಗೆ ಒಂದೇ ಜಗತ್ತನ್ನು ಜ್ಞಾನಿಗಳು ಬ್ರಹ್ಮವಾಗಿಯೂ ಅನ್ನಜೀವಿಗಳು ಅನ್ನಮಯವಾಗಿಯೂ ಒಮ್ಮೆಗೇ ಕಂಡುಕೊಳ್ಳುತ್ತಿರುವದೊಂದು ಸೋಜಿಗವಾಗಿಯೇ ಇರುತ್ತದೆ. ಈ ದೃಷ್ಟಿಭೇದದಲ್ಲಿ ಬ್ರಹ್ಮದ ಕೈವಾಡವೇನೂ ಇರುವದಿಲ್ಲ. ಆದ್ದರಿಂದ ನಾವು ಶಾಸ್ತ್ರಾಚಾರ್ಯರ ಉಪದೇಶಗಳನ್ನು ಅನುಸರಿಸಿ ಅನ್ನಮಯವಿಕಾರದಿಂದ ಆಚ್ಛಾದಿತವಾದಂತೆ ಇರುವ ಈ ಪುರುಷತತ್ತ್ವವನ್ನು ವಿವೇಚಿಸಿ ಚಿಂತಿಸಿ ತಿಳಿಯಬೇಕಾಗಿರುತ್ತದೆ.

ಈಗ 'ಅ-ತಿರೋಹತಿ' ಎಂದೇ ಪದವಿಭಾಗಮಾಡಿ ಅರ್ಥಮಾಡೋಣ. ಅನ್ನದಿಂದ ಮರೆಯಾಗದಿರುವ ಈ ತತ್ತ್ವವೇ ಅಮೃತತ್ತ್ವಸಾಧನವು-ಎಂದು ಗೊತ್ತಾಗುತ್ತದೆ. ಈ ಅಭಿಪ್ರಾಯದಲ್ಲಿ ವಾಕ್ಯದ ತಾತ್ಪರ್ಯವು ವಿಶ್ವಕ್ಕಿಂತಲೂ ಪುರುಷಪ್ರಧಾನವಾಗಿರುತ್ತದೆ. ವಿಶ್ವವೆಲ್ಲವೂ ಅನ್ನದಿಂದ ಆವರಿಸಲ್ಪಟ್ಟದೆಯಾದರೂ ಪುರುಷನು ಅದನ್ನು ಮೀರಿ ಅಮೃತಸ್ವರೂಪನಾಗಿರುವನು- ಎಂದರೆ ಮಾಯೆಯಿಂದ ಅವನು ದೂರನಾಗಿದ್ದು ಮುಚ್ಚಲ್ಪಡದೆ ಇರುವನು-ಎಂದಭಿಪ್ರಾಯ. ಸೂರ್ಯನಿಗೆ ಮೋಡವು ಮುಚ್ಚಿಕೊಂಡಿದೆ-ಎಂದು ಭೂಮಿಯಲ್ಲಿರುವ ಜನರು ಹೇಳುತ್ತಾರಷ್ಟೆ! ಆದರೆ ನಿಜವೇನೆಂದರೆ : ಆಕಾಶದಲ್ಲಿ ಮೋಡವಿರುವದೂ ಸೂರ್ಯನ ಬೆಳಕಿನಿಂದಲೇ ನಮಗೆ ತಿಳಿದುಬರುತ್ತಿದೆ. ಈ ತತ್ತ್ವವನ್ನು ನಾವು ಮರೆತಿರುತ್ತೇವೆ. ಸೂರ್ಯನಿಗೂ ಮೋಡಕ್ಕೂ ಲಕ್ಷಗಟ್ಟಲೆ ಮೈಲಿಗಳ ಅಂತರವಿರುವದು.

ಅಲ್ಪವಾದ ಮೋಡವು ಸೂರ್ಯನನ್ನು ಮುಚ್ಚಬಲ್ಲದೆ ? ಆದರೆ ಭೂಮಿಯ ಮೇಲಿನ ಜನರ ದೃಷ್ಟಿಯಿಂದ 'ಸೂರ್ಯನಿಗೆ ಮೋಡವು ಮುಚ್ಚಿದೆ' ಎಂದಂತೆ ಅಜ್ಞರ ದೃಷ್ಟಿಯಿಂದ ಅನ್ನದಿಂದ ಆವೃತವಾಗಿರುವ ವಿಶ್ವವು ನಿಜವಾಗಿ ಪುರುಷನೇ ಆಗಿದ್ದು ಅತಿರೋಹಿತವೇ (ಮುಚ್ಚಲ್ಪಡದ್ದು) ಆಗಿದೆ ಎಂದರ್ಥ. ಅತಿ–ರೋಹತಿ ಎಂದು ಬಿಡಿಸಿದರಂತೂ ಬ್ರಹ್ಮವು ಎಲ್ಲಾ ವಿಶ್ವಪ್ರಪಂಚವನ್ನೂ ದಾಟಿ ಮೇಲೇರುತ್ತದೆ– ಎಂದರೆ ಪ್ರಾಪಂಚಿಕವಾದ ಯಾವ ಉತ್ಪತ್ತಿವಿನಾಶಾದಿಧರ್ಮಗಳೂ ಇಲ್ಲದೆ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾಗಿದೆ– ಎಂದೂ ಅರ್ಥಮಾಡಬಹುದಾಗಿದೆ. ಈ ರೀತಿಯಾಗಿ ಪುರುಷತತ್ತ್ವವು ವಿಶ್ವವನ್ನು ವ್ಯಾಪಿಸಿ ಅದನ್ನೂ ಮೀರಿದ ಸ್ವರೂಪದ್ದಾಗಿದೆ –ಎಂದು ಇಲ್ಲಿ ತಿಳಿಸಿರುತ್ತದೆ.

---

## ೩. ಏತಾವಾನಸ್ಯ ಮಹಿಮಾ

ಪುರುಷಸೂಕ್ತದ ಮೂರನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ.

**ಏತಾವಾನಸ್ಯ ಮಹಿಮಾ । ಅತೋ ಜ್ಯಾಯಾಗ್ಂಶ್ಚ ಪೂರುಷಃ |**
**ಪಾದೋಽಸ್ಯ ವಿಶ್ವಾ ಭೂತಾನಿ । ತ್ರಿಪಾದಸ್ಯಾಮೃತಂ ದಿವಿ ||**

'ಈ ಪುರುಷನ ಮಹಿಮೆಯೇ ಇದೆಲ್ಲವೂ ಆಗಿರುವದು. ಆದರೂ ಪುರುಷನು ಈ ವಿಭೂತಿಗಳಿಗೂ ಹೆಚ್ಚಿನವನು. ಹೇಗೆಂದರೆ: ಸೃಷ್ಟಿಯಲ್ಲಿರುವ ಎಲ್ಲಾ ಚೇತನಾಚೇತನಪ್ರಾಣಿಗಳೂ ಈತನ ನಾಲ್ಕನೆಯ ಒಂದು (ಕಾಲು ಭಾಗವು, ಉಳಿದ ಭಾಗವು–ಮುಕ್ಕಾಲು ಅಂಶವು ದ್ಯುಲೋಕದಲ್ಲಿರುವದು.'

ವೇದಮಂತ್ರಗಳಿಗೆ ಅಕ್ಷರಾರ್ಥವನ್ನು ಹೇಳುವದಕ್ಕಿಂತ ಭಾವಾರ್ಥವನ್ನು ಹೇಳಿದರೇ ಹೆಚ್ಚು ಸಮಂಜಸವಾಗುವದು. ಆದರಂತೆ ಇಲ್ಲಿಯೂ ಪುರುಷನ ಮಹಿಮೆಯನ್ನು ವರ್ಣಿಸಿರುವ ಈ ಋಕ್ಕನ್ನು ವ್ಯಾಖ್ಯಾನಮಾಡಬೇಕಾಗಿದೆ. ಇಲ್ಲಿ ಪುರುಷನನ್ನು ನಾಲ್ಕು ಭಾಗಮಾಡಿ ಒಂದಂಶವನ್ನು ಜಗತ್ತೆಂದು ತಿಳಿಸುವದು ಶ್ರುತಿಯ ಮುಖ್ಯ ತಾತ್ಪರ್ಯವಲ್ಲ. ಏಕೆಂದರೆ ನಿರಾಕಾರನೂ, ನಿರ್ವಿಕಾರನೂ ಅನಂತನೂ ಆಗಿರುವ ಪುರುಷನನ್ನು ವಿಭಾಗ

ಮಾಡುವದಾದರೂ ಹೇಗೆ ಸಾಧ್ಯ? ದೇಶ ಕಾಲ-ಪರಿಚ್ಛೇದಗಳನ್ನು ಮೀರಿರುವ ಈ ಪುರುಷನು ಸ್ವರೂಪದಿಂದ ಅವಿಭಕ್ತನಾಗಿರುವನು. ಆದರೆ ಭೂತಗಳಲ್ಲಿ ವಿಭಕ್ತನಾದಂತೆ ತೋರುತ್ತಿರುವನು. 'ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್' ಎಂದೇ ಗೀತೆಯಲ್ಲಿ ಉಪದೇಶಮಾಡಿರುತ್ತದೆ. ಆದ್ದರಿಂದ ವಿಭಕ್ತನಾಗಿರುವಂತೆ ಪ್ರಪಂಚದ ಅಪೇಕ್ಷೆಯಿಂದ ತೋರುವಾಗ ಮಾತ್ರ ತಾನು ತ್ರಿಪಾದನೂ ಭೂತಗಳೆಲ್ಲ ಸೇರಿ ಏಕಪಾದವೂ ಆಗಿರುವನು-ಎಂದು ಅಭಿಪ್ರಾಯ. ಹೇಗೆ ವ್ಯವಹಾರದಲ್ಲಿ ಒಂದು ರೂಪಾಯಿಯನ್ನು ಮುರಿಸುವದು-ಎಂದರೆ ವ್ಯಾಪಾರಸೌಕರ್ಯಕ್ಕಾಗಿ 25 ಪೈಸೆಗಳ ನಾಲ್ಕು ಭಾಗವಾಗಿ ವಿಂಗಡಿಸಲಾಗುವದೋ, ರೂಪಾಯಿಯನ್ನೇ ಚಚ್ಚಿ ನಾಲ್ಕು ತುಂಡುಗಳಾಗಿ ಯಾರೂ ಮಾಡುವದಿಲ್ಲವೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ನಿಜವೇನೆಂದರೆ : ಇಡಿಯ ಚರಾಚರಜಗತ್ತನ್ನೆಲ್ಲ ಒಂದುಗೂಡಿಸಿದರೂ ಪುರುಷನ ಮಹಿಮೆಯ ಕಾಲುಭಾಗವಾದೀತು. ಇನ್ನು ಪುರುಷನೆಂಬುವನು ಎಷ್ಟು ದೊಡ್ಡವನಿರಬಹುದು ? ಎಂದು ಅಭಿಪ್ರಾಯ. ಆಗಲೂ ಪುರುಷನ ಮಹಿಮೆಯನ್ನು ಮಟ್ಟಿಗೆ ಅಳೆದಂತಾಯಿತೇ ಹೊರತು ಮಹಿಮಾವಂತನಾದ ಆತನನ್ನೇನೂ ಅಳೆಯಲಾಗಲಿಲ್ಲ. ಆದ್ದರಿಂದಲೇ ಪುರುಷನಿಗೆ 'ಅಪ್ರಮೇಯ'ನೆಂದೂ ಹೆಸರಿದೆ. ಇಂಥ ಅಪರಿಚ್ಛಿನ್ನನಾದ ಅನಂತನಾದ ಅಪಾರನಾದ ಪುರುಷನನ್ನು ನಾವು ತಿಳಿಯಲು ಮೊದಲು ಅವನ ಮಹಿಮೆಯ ಪರಿಚಯವನ್ನು ಮಾಡಿಕೊಳ್ಳಬೇಕು.

ಈಗ ಪುರುಷನ ಒಂದು ಪಾದವೆನಿಸಿರುವ ಜಗತ್ತಿನ ವಿವರವನ್ನು ತಿಳಿಯೋಣ. ಜಗತ್ತು ಎಂದರೆ ಅದರಲ್ಲಿ ದೇಶ, ಕಾಲ, ಕಾರ್ಯಕಾರಣಗಳೂ ಸೇರಿಹೋಗುತ್ತವೆ. ಸೌಕರ್ಯಕ್ಕಾಗಿ ದೇಶಕಾಲಗಳಲ್ಲಿಯೇ ಕಂಡು ಮರೆಯಾಗುತ್ತಿರುವ ಜಗತ್ತನ್ನು ತೆಗೆದುಕೊಳ್ಳೋಣ. ಕಾಲವೆಂಬುದು ಭೂತಭವಿಷ್ಯದ್ವರ್ತಮಾನಗಳೆಂದು ವಿಂಗಡಿಸಲ್ಪಟ್ಟಿರುವದು. ಎಷ್ಟೋ ಜನರು ಕಾಲವನ್ನು ನಿತ್ಯವೆಂದೇ ಭಗವಂತನ ಜೊತೆಗೆ ಒಂದು ಪದಾರ್ಥವೆಂದು ಭಾವಿಸುತ್ತಾರೆ. ಇದು ಹಾಗಿರಲಿ ; ಹಿಂದಿನ, ಇಂದಿನ, ಮುಂದಿನ ಕಾಲಪ್ರವಾಹದಲ್ಲಿ ನಾವು ಕಾಣುತ್ತಿರುವ, ಕೇಳುತ್ತಿರುವ, ಊಹಿಸುತ್ತಿರುವ ಪ್ರಪಂಚವು ಎಷ್ಟು ವಿಸ್ತಾರವಾಗಿದೆ ? ಎಂದರೆ ಅದು ನಮ್ಮ ಬುದ್ಧಿಗೆ

ಎಟಕುವಂತೆಯೇ ಇಲ್ಲ. ನಮ್ಮ ಊಹೆಗೂ ನಿಲುಕದ ಸೃಷ್ಟಿಯೂ ಇನ್ನೂ ಇರಬಹುದಾಗಿದೆ. ಹೀಗಿರುವಲ್ಲಿ ತಿಳಿಯದಿರುವ ಭಾಗವನ್ನು ಬಿಟ್ಟರೂ ತಿಳಿದಿರುವ ಸೃಷ್ಟಿಯಲ್ಲಿ ಕೂಡ ಒಂದೊಂದು ಮಹಾಭೂತಗಳ ವಿಸ್ತಾರವನ್ನು ಕುರಿತು ಚಿಂತಿಸಿದಾಗಲೂ ನಮ್ಮ ಬುದ್ಧಿಯೇ ಮಂಕಾಗಿಬಿಡುತ್ತದೆ. ಇಂದ್ರಿಯಗಳೂ ಮನಸ್ಸೂ ಸೋತುಹೋಗಿಬಿಡುವವು. ಹೀಗೆ ಭಗವಂತನ ಮಹಿಮೆಯಾಗಿರುವ ಸೃಷ್ಟಿಯ ಏಕದೇಶವನ್ನು ಕೂಡ ವಿಷಯವಾಗಿಸಿ ಕೊಳ್ಳುವಲ್ಲಿ ನಮ್ಮ ಶಕ್ತಿಯು ಕುಂಠಿತವಾಗುವದಾದರೆ ಪೂರ್ಣಪುರುಷನನ್ನು ಹೇಗೆ ತಾನೆ ನಾವು ಈ ಪರಿಚ್ಛಿನ್ನಸಾಧನಗಳಿಂದಲೂ ಕರಣಗಳಿಂದಲೂ ತಿಳಿಯಲಾದೀತು ? ಆದ್ದರಿಂದಲೇ ಶ್ರುತಿಯು 'ಮಾತು, ಮನಸ್ಸುಗಳು ಈತನನ್ನು ಅರಿಯದೆ ಹಿಂದಿರುಗುವವು' ಎಂದೇ ಹೇಳುತ್ತಿದೆ. ಹೀಗೆ ಚಿಂತಿಸಿ ದಾಗಲೇ ಪುರುಷನ ಮಹಿಮೆಯ ಅರಿವು ನಮಗಾಗಲಿದೆ. ಆದ್ದರಿಂದ ವೇದವು ನಮಗೆ ಪುರುಷನನ್ನು ತಿಳಿಯಲು ಉಪಾಯವಾಗಿ ಅವನ ಮಹಿಮೆ ಯನ್ನೇ ಮೊದಲು ತಿಳಿಯುವಂತೆ ಎಚ್ಚರಿಸುತ್ತಿದೆ. ಇದೆಲ್ಲವೂ (ಈ ಜಗತ್ತೆಲ್ಲ ವೂ) ಆತನ ಮಹಿಮೆಯೇ ಎಂಬಿದು ವೇದದ ಉಪದೇಶವು.

ಆದರೆ ಅಜ್ಞಜನರು ತಾವು ತಿಳಿದಿರುವಷ್ಟೇ ದೇವರು ಎಂದು ಭಾವಿಸುವ ಸಂದರ್ಭವೂ ಇರುತ್ತದೆ. ಹೇಗೆಂದರೆ : ನಾವು ಒಂದು ಬೆಟ್ಟದ ಮೇಲಿರುವ ದೇವಾಲಯಕ್ಕೆ ದೇವರ ದರ್ಶನಕ್ಕಾಗಿ ಹೋಗುತ್ತೇವೆಂದು ಇಟ್ಟುಕೊಳ್ಳೋಣ. 'ವಿಷ್ಣುಃ ಪರ್ವತಾನಾಮಧಿಪತಿಃ' ಎಂಬ ವೇದವಾಕ್ಯದಂತೆ ಸಾಮಾನ್ಯವಾಗಿ ವಿಷ್ಣುದೇವಾಲಯಗಳು ಬೆಟ್ಟದಮೇಲೆಯೇ ಇರುವವು. ಬೆಟ್ಟವನ್ನು ಪೂರ ಹತ್ತಿ ದೇವಾಲಯವನ್ನು ಪ್ರವೇಶಿಸಿ ಗರ್ಭಗುಡಿಯೊಳಗೆ ಒಂದು ಭಾಗ ದಲ್ಲಿರುವ ವಿಗ್ರಹವನ್ನು ನೋಡಿದಾಗ ಮಾತ್ರ ದೇವರ ದರ್ಶನವಾಯಿತು– ಎಂದು ನಮಗೆ ಅನಿಸುತ್ತದೆ. ಆಗ ನಮಗೆ 'ಗಿರಿಯಶ್ಚ ವಿಷ್ಣುಃ' (ಬೆಟ್ಟ ಗಳೆಲ್ಲ ವಿಷ್ಣುವೇ)– ಆದ್ದರಿಂದ ಇಡಿಯ ಬೆಟ್ಟವೇ ದೇವರು ಎಂಬ ಭಾವನೆ ಯು ಬರುವದೇ ಇಲ್ಲ. ಹಾಗೆ ಬಂದಿದ್ದರೆ ಗರ್ಭಗುಡಿಗೆ ಹೋಗಿ ನೂಕು ನುಗ್ಗಲಲ್ಲಿ ದೇವರನ್ನು ಕಾಣುವ ಆವಶ್ಯಕತೆ ಇರುತ್ತಿರಲಿಲ್ಲ. ಇಂಥ ದಡ್ಡರು ನಾವು. ಈಗ ಶ್ರುತಿಮಾತೆಯು ನಮ್ಮ ಮೂರ್ಖತನವನ್ನು ಪರಿಹರಿಸಲು 'ಅತೋ ಜ್ಯಾಯಾಂಶ್ಚ ಪೂರುಷಃ' ಎಂದು ಉಪದೇಶಿಸುತ್ತಿದ್ದಾಳೆ.

ಇದರ ತಾತ್ಪರ್ಯವೇನೆಂದರೆ : ನಾವು ಕಾಣುತ್ತಿರುವ ಜಗತ್ತು ಎಷ್ಟೇ ದೊಡ್ಡದಾಗಿದ್ದರೂ ಪುರುಷನಿಗೆ ಹೋಲಿಸಿದರೆ ಇದು ಅಲ್ಪವೇ. ಏಕೆಂದರೆ ಪುರುಷನು ಈ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿ ಅದಕ್ಕೂ ಆಚೆಯಿರುತ್ತಾನೆ. ಆತನು ಇಂಥ ಬ್ರಹ್ಮಾಂಡಕೋಟಿಗಳನ್ನೆಲ್ಲ ತನ್ನ ಹೊಟ್ಟೆಯೊಳಗೇ ಅಡಗಿಸಿಕೊಂಡಿರುತ್ತಾನೆ. 'ಅಂತಸ್ಥಂ ಯಸ್ಯ ವಿಶ್ವಮ್' ಎಂಬ ಶ್ಲೋಕಭಾಗವನ್ನು ನೆನಪುಮಾಡಿಕೊಳ್ಳಿರಿ. ಹೀಗೆ ಪುರುಷನು ಜ್ಯಾಯಾನ್ ಎಂದರೆ ಎಲ್ಲಕ್ಕೂ ಮಿಗಿಲಾದವನು– ಎಂದಭಿಪ್ರಾಯ.

ಈಗ 'ಪಾದೋಽಸ್ಯ ವಿಶ್ವಾ ಭೂತಾನಿ' ಎಂಬಿದನ್ನು ವಿಚಾರ ಮಾಡೋಣ. ಪಾದವೆಂದರೆ ಕಾಲುಭಾಗವೆಂದರ್ಥ. ಸಮಸ್ತಭೂತಗಳನ್ನೂ ಒಂದುಗೂಡಿಸಿದರೂ ಪುರುಷನ ನಾಲ್ಕನೆಯ ಒಂದು ಭಾಗವಾದೀತು. ಇನ್ನೂ ಮೂರು ಭಾಗಗಳಷ್ಟು ಪುರುಷನು ಅಧಿಕವಾಗಿ ಇದ್ದುಕೊಂಡಿರುವನು. ಇದರ ಅಭಿಪ್ರಾಯವೇನೆಂದರೆ : ಇಡಿಯ ಪುರುಷತತ್ತ್ವದಲ್ಲಿಯೇ ಈ ಪಾದಗಳು ಕಲ್ಪಿತವಾಗಿರುತ್ತವೆ– ಎಂದರೆ ಪ್ರಾಣಿಗಳೆಲ್ಲವೂ ಪುರುಷ ಭಗವಂತನ ಆಶ್ರಯದಲ್ಲಿಯೇ ತೋರಿಕೊಳ್ಳುತ್ತಿರುವವು. ಅವನಿಂದಲೇ ಹೊರಬಂದು ಅವನಲ್ಲಿಯೇ ತೋರಿಕೊಂಡು ಕಡೆಗೆ ಅವನಲ್ಲಿಯೇ ಲಯವಾಗುತ್ತಿರುವವು. ಆದ್ದರಿಂದ ಪುರುಷನೊಬ್ಬನೇ ಸತ್ಯನು. ಉಳಿದ ವಿಶ್ವವೆಲ್ಲವೂ ಪುರುಷನಲ್ಲಿ ಕಲ್ಪಿತವು, ಅನಿತ್ಯವು ಎಂದಾಗುತ್ತದೆ. ಮತ್ತೊಂದು ರೀತಿಯಿಂದ ನೋಡಿದರೆ ಚಿನ್ನದಲ್ಲಿಯೇ ಹುಟ್ಟಿ, ಚಿನ್ನವಾಗಿಯೇ ಇದ್ದು ಕಡೆಗೆ ಚಿನ್ನವೇ ಆಗಿ ಉಳಿಯುವ ಪ್ರತಿಮೆಯಂತೆ ವಿಶ್ವವೆಲ್ಲವೂ ಪುರುಷನಿಂದಲೇ ಹುಟ್ಟಿ ಪುರುಷನಾಗಿಯೇ ಬಾಳಿ ಕಡೆಗೆ ಪುರುಷತತ್ತ್ವವೇ ಆಗಿಬಿಡುವದು. ಆದ್ದರಿಂದ ಪುರುಷರೂಪದಿಂದ ವಿಶ್ವವು ಸತ್ಯವು ಎಂದು ಅಭಿಪ್ರಾಯವಾಗುತ್ತದೆ. ಆದರೆ ಪುರುಷ–ವಿಶ್ವ–ಎಂದು ಎರಡು ತತ್ತ್ವಗಳಿರುವದಿಲ್ಲ. ವಿಶ್ವ ಎಂಬಿದು ನಮಗೆ ಕಾಣುತ್ತಿರುವ ಪ್ರಪಂಚವನ್ನು ಅನುವಾದಮಾಡಿಕೊಂಡು ಹೇಳಿದ್ದಾಗಿದೆ. ವಿಶ್ವವು ಇದೆ–ಎಂಬಿದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲ; ಮತ್ತೇನೆಂದರೆ ಪುರುಷನಿಗಿಂತ ಬೇರೆಯಾಗಿರುವಂತೆ ತೋರುತ್ತಿರುವ ಈ ವಿಶ್ವವು ನಿಜವಾಗಿ ನೋಡಿದರೆ ಪುರುಷನಾಗಿಯೇ ಇದೆ. ಆದ್ದರಿಂದ ಪುರುಷನೊಬ್ಬನೇ ಸತ್ಯವು. ವಿಶ್ವವೆಲ್ಲವೂ ಪುರುಷನೇ–ಎಂದು ಶ್ರುತಿಯ ಅಭಿಪ್ರಾಯ.

ಈಗ "ತ್ರಿಪಾದಸ್ಯಾಮೃತಂ ದಿವಿ" ಎಂಬಿದನ್ನು ವಿಚಾರ ಮಾಡೋಣ. ಇಲ್ಲಿ ದಿವಿ ಎಂದರೆ ದ್ಯುಲೋಕದಲ್ಲಿ ಎಂದು ಅರ್ಥವಲ್ಲ. ದಿವ್ ಧಾತುವಿಗೆ ಪ್ರಕಾಶ ಎಂಬರ್ಥವೂ ಇರುವದರಿಂದ ದಿವಿ ಎಂದರೆ ನಿತ್ಯಪ್ರಕಾಶ ಸ್ವರೂಪದಲ್ಲಿ ಎಂದರ್ಥ. ಈ ಪ್ರಕಾಶವು ಸ್ವಯಂಪ್ರಕಾಶವೂ ಹೌದು. ಪುರುಷನ ಬೆಳಕಿನಿಂದಲೇ ಉಳಿದದ್ದೆಲ್ಲವೂ ಬೆಳಗುತ್ತಿರುವದು. "ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂದೇ ಉಪನಿಷತ್ತು ತಿಳಿಸುತ್ತದೆ. ಹೀಗೆ ಸ್ವಯಂ ಪ್ರಕಾಶರೂಪವಾದ ಪುರುಷತತ್ತ್ವವೇ ತ್ರಿಪಾತ್ ಎಂದರೆ ಮೂರು ಪಾದ ಗಳಂತಿರುವ ವಿಕಾರಶೂನ್ಯವಾದ ತತ್ತ್ವವು ಎಂದಭಿಪ್ರಾಯ. ಆದರೆ ಪುರುಷತತ್ತ್ವದಲ್ಲಿ ಕಾಲುಭಾಗ ಸುಳ್ಳೆಂದೂ ಮುಕ್ಕಾಲುಭಾಗ ನಿಜವೆಂದೂ ಇದರ ಅರ್ಥವೆಂತ ತಿಳಿಯಬಾರದು. ಏಕೆಂದರೆ ಅವಿಭಕ್ತಸ್ವರೂಪವಾದ ಪುರುಷತತ್ತ್ವದಲ್ಲಿ ಭಾಗಗಳೇ ಇಲ್ಲ, ಅದು ಭಾಗಮಾಡಲು ಬರುವಂಥದ್ದಲ್ಲ-ಎಂಬುದು ಆಗಲೇ ಹೇಳಿದೆ. ಹೀಗೆ ಭಾಗಗಳೇ ಇಲ್ಲದ್ದರಲ್ಲಿ ಕಲ್ಪಕರು ವಿಭಾಗ ಗಳನ್ನು ವಿಕಲ್ಪಿಸಿದರೆ ವಿಕಲ್ಪಿಸಿದ್ದೆಲ್ಲವೂ ಮಿಥ್ಯೆಯೇ ಆಗಿರುವದರಿಂದ ದೋಷವೇನೂ ಬರಲಾರದು. ಆದ್ದರಿಂದ ಪುರುಷತತ್ತ್ವವು ಯಾವಾಗಲೂ ಎಂದೆಂದೂ ಪೂರ್ಣವೇ ಆಗಿರುವದು. ಪೂರ್ಣವಾಗಿರುವದರಿಂದಲೇ ಅಮೃತವೂ ಆಗಿರುವದು. ಅಂತೂ ಒಳಗೂ ಹೊರಗೂ ಕಲ್ಪಿತವಿಭಾಗ ಗಳಿದ್ದೂ ಪೂರ್ಣವೂ ಅಮೃತವೂ ಆಗಿರುವ ಪುರುಷತತ್ತ್ವವು ತನ್ನ ಮಹಿಮೆಯನ್ನು ಹೊರಪಡಿಸಿದಾಗ ಪ್ರಾಪಂಚಿಕದೃಷ್ಟಿಯಿಂದ ಪಾದಗಳುಳ್ಳ ದ್ದರಂತೆ ಕಂಡುಬರುವದು. ಆಗಲೂ ಅದರ ಏಕದೇಶವು ಮಾತ್ರವೇ ಆಗಿರುವ ವಿಶ್ವಕ್ಕಿಂತಲೂ ಮಿಗಿಲಾಗಿ ಪ್ರಕಾಶರೂಪವಾಗಿ ಕಾಣಬರುವ ಪುರುಷ ತತ್ತ್ವವು ಅಪಾರಮಹಿಮಾನ್ವಿತವಾಗಿ ಇದ್ದುಕೊಂಡಿರುತ್ತದೆ. ಇದನ್ನು ಕಂಡುಕೊಳ್ಳುವವರು ಸಹ ಸಾಮಾನ್ಯರಲ್ಲ. ಪುರುಷಭಗವಂತನನ್ನು ಸದಾ ಕಾಲವೂ ಚಿಂತಿಸುತ್ತಾ ತದ್ಬುದ್ಧಿಗಳೂ ತದಾತ್ಮರೂ ತನ್ನಿಷ್ಠರೂ ತತ್ಪ ರಾಯಣರೂ ಆದವರೇ ಆಗಿರುತ್ತಾರೆ. ಇಂಥ ತತ್ತ್ವದರ್ಶಿಗಳ ಅನುಭವದಂತೆ ಪುರುಷನ ಮಹಿಮೆಯು ಈ ಸೂಕ್ತದಲ್ಲಿ ವರ್ಣಿಸಲ್ಪಟ್ಟಿರುವದು.

ಜನಸಾಮಾನ್ಯರಿಗೆ ಈ ಪುರುಷತತ್ತ್ವವು ತಾನು ಇದ್ದಂತೆ–ಎಟುಕದೆ ಹೋದರೂ ಅದರ ಪಾದಭಾಗವಾಗಿ ಕಲ್ಪಿತವಾಗಿರುವ ವಿಶ್ವವು ಪ್ರತ್ಯಕ್ಷ

ಗೋಚರವೇ ಆಗಿದ್ದು ಪುರುಷನ ಮಹಿಮೆಯನ್ನು ಎತ್ತಿ ಹಿಡಿಯುತ್ತಿದೆ. ಆದ್ದರಿಂದ ಸರ್ವಭೂತಗಳನ್ನೂ ಪುರುಷನ ವಿಭೂತಿಯಾಗಿಯೇ ಚಿಂತಿಸುವದೂ ಪುರುಷತತ್ತ್ವಸಾಕ್ಷಾತ್ಕಾರಕ್ಕೆ ಸಾಧನವೇ ಸರಿ. ಇಲ್ಲಿ ಪುರುಷ ಮಹಿಮೆಯನ್ನು ಗುರುತಿಸಲು ಅಂತರ್ದೃಷ್ಟಿಯು ಅಗತ್ಯವಾಗಿದೆ. ಬಾಹ್ಯ ದೃಷ್ಟಿಯಿಂದ ನೋಡಿದರೆ ತಾರತಮ್ಯಗಳೇ ಎದ್ದುಕಾಣುವದರಿಂದ ಪುರುಷ ತತ್ತ್ವವನ್ನು ಗುರುತಿಸುವದು ಕಷ್ಟವಾಗಿರುತ್ತದೆ. ಈಗ ನಾವು ಒಳಸರಿದು ಪುರುಷನೆಂಬ ಆತ್ಮನನ್ನೇ ಹುಡುಕಲಾರಂಭಿಸಬೇಕು. "ಭೂತೇಷು ಭೂತೇಷು ವಿಚಿತ್ಯ ಧೀರಾಃ" ಎಂದು ಹೇಳಿರುವಂತೆ ಪುರಗಳಲ್ಲಿ ಅಡಗಿರುವ ಪುರುಷನನ್ನು ಎಲ್ಲಾ ಭೂತಗಳಲ್ಲಿಯೂ ಹುಡುಕಿ ಗುರುತಿಸುವ ಕೆಲಸವನ್ನು ಕೈಗೊಳ್ಳಬೇಕು. ಇದೇ ಅಧ್ಯಾತ್ಮಸಾಧನವು. ಪುರುಷಸೂಕ್ತದ ಪಠನದಿಂದ ನಮಗೆ ಇಂಥ ಪ್ರಯೋಜನವು ದೊರಕುವಂತಾದರೆ ನಾವು ಧನ್ಯರು.

---

## ೪. ತ್ರಿಪಾದೂರ್ಧ್ವ ಉದೈತ್ ಪುರುಷಃ

ಪುರುಷಸೂಕ್ತದ ನಾಲ್ಕನೆಯ ಋಕ್ಕನ್ನು ಈಗ ವಿಚಾರಮಾಡಬೇಕಾಗಿದೆ. ಅದು ಈ ರೀತಿಯಾಗಿದೆ :

**ತ್ರಿಪಾದೂರ್ಧ್ವ ಉದೈತ್ ಪುರುಷಃ ।**
**ಪಾದೋಽಸ್ಯೇಹಾಭವಾತ್ ಪುನಃ ।**
**ತತೋ ವಿಷ್ವಙ್ ವ್ಯಕ್ರಾಮತ್ ।**
**ಸಾಶನಾನಶನೇ ಅಭಿ ॥**

"ಪುರುಷನು ಮೂರು ಪಾದಗಳಿಂದ ಮೇಲಕ್ಕೆದ್ದನು. ಒಂದು ಪಾದವು ಮತ್ತೆ ಇಲ್ಲಿ ಹುಟ್ಟಿ ತೋರಿಕೊಂಡಿತು. ಹಾಗೂ ಸರ್ವತ್ರವೂ ವ್ಯಾಪಿಸಿತು. ಎಂದರೆ ಚೇತನಾಚೇತನಗಳೆಲ್ಲವನ್ನೂ ಆವರಿಸಿತು."

ಈ ಮಂತ್ರದಲ್ಲಿ ಮತ್ತೊಮ್ಮೆ ಪುರುಷನ ಮೂರು ಪಾದಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಹಿಂದೆ ತಿಳಿಸಿದಂತೆ ಬೋಧಸೌಕರ್ಯಕ್ಕಾಗಿ ನಾಲ್ಕು ಪಾದಗಳೆಂದು ವಿಭಾಗಮಾಡಿದ್ದ ಪರಬ್ರಹ್ಮದಲ್ಲಿ ಹೆಚ್ಚಿನ ಮೂರು ಪಾದಗಳು ಸಂಸಾರಕ್ಷೇತ್ರವನ್ನೇ ಮೀರಿರುತ್ತವೆ ; ಎಂದರೆ ಪುರುಷನ ಬಹು

ಭಾಗವೆಲ್ಲ ಜಗತ್ತಿನ ಜನರಿಗೆ ಅಗೋಚರವಾಗಿಯೇ ಇದೆ-ಎಂದಭಿಪ್ರಾಯ. ಇದನ್ನೇ **ಊರ್ಧ್ವ ಉದೈತ್**-(ಮೇಲಕ್ಕೆ ಎದ್ದಿತು) ಎಂದು ತಿಳಿಸಲಾಗಿದೆ. ಪುರುಷನೆಂಬ ಮಹಾವಿಷ್ಣುವು ತನ್ನ ಸ್ವರೂಪದಿಂದ ಅಚ್ಯುತನೂ ಅನಂತನೂ ಶಾಶ್ವತನೂ ಪೂರ್ಣನೂ ಅಖಂಡನೂ ಆಗಿರುವದರಿಂದ ಅವನನ್ನು ನಾಲ್ಕು ಪಾದಗಳಿಂದಲೂ ಪೂರ್ತಿಯಾಗಿ ತಿಳಿಯುವದೆಂದರೆ ಕಲ್ಪಿತವಾದ ಪಾದಗಳಿಂದ ನಾವೂ ಮೇಲೇಳಲೇ ಬೇಕು ; ಎಂದರೆ 'ನಾನು' ಎಂಬಿದನ್ನೂ ಲಯಮಾಡಿಕೊಂಡು ಪುರುಷನ ಸ್ವರೂಪದಲ್ಲಿಯೇ-ನದಿಯು ಸಮುದ್ರದಲ್ಲಿ ಒಂದಾಗುವಂತೆ ಐಕ್ಯವಾಗಲೇಬೇಕಾಗುವದು. ಈ ಸ್ಥಿತಿಯಲ್ಲಿ ಮಾತ್ರ ಪೂರ್ಣಪುರುಷನನ್ನು ಅರಿಯಲು ಸಾಧ್ಯವಾಗುವದು. (ಮೂರುಪಾದ ಗಳನ್ನರಿತರೆ ನಾಲ್ಕನ್ನೂ ಅರಿತಂತೆಯೇ ಸರಿ). ಆದರೆ ಹೀಗೆ ಅರಿತವನು ಮತ್ತೆ ಸಂಸಾರಕ್ಕೆ ಹಿಂದಿರುಗುವ ಸಂಭವವಿರುವದಿಲ್ಲ. ಇದಿರಲಿ. ಈ ಪುರುಷನು ಮತ್ತೆ ಒಂದು ಪಾದವಾಗಿ ಇಲ್ಲಿ ತೋರಿಕೊಂಡನು-ಎಂಬಿದನ್ನು ವಿಚಾರಮಾಡೋಣ. ಇಹ-ಎಂದರೆ ಸೃಷ್ಟಿಯಲ್ಲಿ **ಅಸ್ಯ**-ಈ ಪುರುಷನ **ಪಾದಃ**-ನಾಲ್ಕನೆಯ ಒಂದು ಭಾಗವಾಗಿ ಕಲ್ಪಿಸಲ್ಪಟ್ಟಿರುವ ಬ್ರಹ್ಮಾಂಡವು **ಪುನಃ**-ಮತ್ತೆ **ಅಭವಾತ್**-ಉಂಟಾಯಿತು-ಎಂದು ಶ್ರುತಿಯು ತಿಳಿಸು ವದನ್ನು ಕೇಳಿರಿ. ಅಭವತ್ ಎಂಬುದೇ ವೈದಿಕಪ್ರಯೋಗದಲ್ಲಿ ದೀರ್ಘವಾಗಿ ಉಚ್ಚರಿಸಲ್ಪಟ್ಟಿದೆ. ಬೇರೊಂದು ಶ್ರುತಿಯಲ್ಲಿ 'ಆ ಪರಬ್ರಹ್ಮವು ತಾನೇ ಬಹುವಾಗುವೆನು-ಎಂದು ಸಂಕಲ್ಪಿಸಿತು. ಅನಂತರ ಇದೆಲ್ಲವನ್ನೂ ಸೃಜಿಸಿತು' ಎಂದು ತಿಳಿಸಿರುತ್ತದೆ. ಹಾಗೆಯೇ ಇಲ್ಲಿಯೂ ಪುರುಷನು ತನ್ನ ಇಚ್ಛಾ ಮಾತ್ರದಿಂದ ಚೇತನಾಚೇತನರೂಪವಾದ ಜಗತ್ತಾಗಿ ತೋರಿಕೊಂಡನು- ಎಂಬಿದನ್ನು 'ಪಾದೋಽಸ್ಯೇಹಾಭವಾತ್ ಪುನಃ' ಎಂದು ವರ್ಣಿಸಿದೆ. ಈ ಪಾದರೂಪವಾದ ಪುರುಷನ ಅಂಶವು ಎಷ್ಟು ವಿಸ್ತಾರವಾದುದು ? ಏನೇನು ವಿಶೇಷಗಳುಳ್ಳದ್ದು ? ಎಂಬಿದನ್ನು ಈಗ ನೋಡೋಣ.

ಜಗತ್ತು ಉಂಟಾದಾಗಲೇ ಚೇತನಾಚೇತನಗಳ ವಿಭಾಗವು ಕಾಣಿಸಿ ಕೊಂಡಿತು. ಚೇತನನಾದ ಪುರುಷನಿಂದ ಸೃಷ್ಟಿಸಲ್ಪಟ್ಟುದೆಲ್ಲವೂ ಚೇತನ ಗಳಾಗಿಯೇ ಇರಬೇಕಿತ್ತಲ್ಲವೆ ? ಎಂಬ ಪ್ರಶ್ನೆಗೆ ಉತ್ತರವಾಗಿ ಮುಂಡಕೋಪ ನಿಷತ್ತಿನಲ್ಲಿ ಮನುಷ್ಯ ಶರೀರದಿಂದ ಹುಟ್ಟುವ ಕೂದಲು, ಉಗುರುಗಳು

ಹಾಗೂ ಜೇಡರಹುಳುವಿನ ಹೊಟ್ಟೆಯಿಂದ ಹೊರಬರುವ ಬಲೆಯ ದಾರಗಳು –ಅಚೇತನವಾಗಿರುವಂತೆ ಅಕ್ಷರಪುರುಷನ ಸ್ವರೂಪದಿಂದ ಅಚೇತನವೂ ಚೇತನವೂ ಆಗಿರುವ ಉಭಯವಿಧವಾದ ಸೃಷ್ಟಿಯೂ ಹೊರಬಂದಿದೆ-ಎಂದು ತಿಳಿಸಲಾಗಿದೆ. ಅದನ್ನೇ ಇಲ್ಲಿ 'ಸಾಶನಾನಶನೇ ಅಭಿ' ಎಂದು ವರ್ಣಿಸ ಲಾಗಿದೆ. ಸಾಶನವು ಎಂದರೆ ಅಶನದಿಂದ ಬದುಕಿರುವವುಗಳು ಎಂದರ್ಥ. ಅಶನ ಎಂದರೆ ಊಟ, ತಿನ್ನುವದು ಎಂದು ಅಭಿಪ್ರಾಯ. ಚೇತನಪ್ರಾಣಿ ಗಳೆಲ್ಲವೂ ಏನನ್ನಾದರೂ ತಿಂದೇ ಬದುಕಬೇಕಾಗಿದೆ. ಏನನ್ನೂ ತಿನ್ನದೆ ಯಾವ ಪ್ರಾಣಿಯೂ ಬದುಕಿರಲಾರದು. ಹೀಗೆ ಅಶನದಿಂದ ಕೂಡಿದವು ಗಳನ್ನು ಸೃಷ್ಟಿಯಲ್ಲಿ 'ಸಾಶನ'ಗಳೆಂದು ಕರೆಯುವರು. ಇನ್ನು ಅನಶನ– ಎಂದರೆ ಏನನ್ನೂ ತಿನ್ನದೆ ಇದ್ದುಕೊಂಡಿರುವವುಗಳು. ಕಲ್ಲು, ಮರ, ಲೋಹ ಗಳು ಇತ್ಯಾದಿ. ಇವು ಅಚೇತನಗಳೆನಿಸಿರುವವು. 'ವಿಜ್ಞಾನಂ ಚಾವಿಜ್ಞಾನಂ ಚ' ಎಂಬ ಶ್ರುತಿವಾಕ್ಯವೂ ಬ್ರಹ್ಮವೇ ಚೇತನಾಚೇತನರೂಪವಾಗಿ ಸೃಷ್ಟಿ ಯನ್ನು ಹೊಂದಿತು-ಎಂದು ತಿಳಿಸುತ್ತದೆ. ಇಂಥ ಸಾಶನಾನಶನಗಳಾದ ಭೂತಗಳೆಲ್ಲವನ್ನೂ ಅಭಿ ಎಂದರೆ ಸುತ್ತಲೂ ವ್ಯಾಪಿಸಿಕೊಂಡು ಅನಂತರ ವಿಷ್ವಕ್ ಎಂದರೆ ಕಡೆಕಡೆಗೂ ಅದೇ ಬ್ರಹ್ಮವೇ ವ್ಯಾಪಿಸಿಕೊಂಡಿತು. ವಿಷ್ವಕ್‌ಶಬ್ದಕ್ಕೆ ನಾಲ್ಕೂ ಕಡೆಯಿಂದ–ಎಂದೂ ಅರ್ಥಮಾಡಬಹುದು. ಹೀಗೆ ಪುರುಷನೇ ಎಲ್ಲವೂ ಆಗಿರುವನು ಎಂಬಿದು ಇದರ ತಾತ್ಪರ್ಯವು.

ಇಲ್ಲೊಂದು ಸಂಶಯವುಂಟಾಗಬಹುದು. ಏನೆಂದರೆ ಕಲ್ಪಿತವಾದ ಪಾದಗಳುಳ್ಳ ಪುರುಷತತ್ತ್ವವು ಹೀಗೆಲ್ಲ ತನ್ನ ಒಂದು ಪಾದದ ರೂಪದಿಂದ ಚೇತನಾಚೇತನಗಳಾಗಿ ತೋರಿಕೊಳ್ಳುವದೇಕೆ ? ಶ್ರುತಿಗಳಲ್ಲಿಯೂ ಈ ನೆಪ ದಿಂದ ಸೃಷ್ಟಿಪ್ರಕ್ರಿಯೆಯನ್ನು ಪ್ರಸ್ತಾಪಿಸಿರುವದೇಕೆ ? ಜೊತೆಗೆ ಒಂದೊಂದು ಶ್ರುತಿಯಲ್ಲಿಯೂ ಒಂದೊಂದು ವಿಧವಾಗಿ ಸೃಷ್ಟಿಯನ್ನು ವರ್ಣಿಸಿರುವದರಿಂದ ಒಂದಕ್ಕೊಂದು ಹೊಂದಾಣಿಕೆಯೂ ಇಲ್ಲದೆ ಜಿಜ್ಞಾಸುಗಳಿಗೆ ಸಂಶಯವೇ ಬಲವಾಗುತ್ತದೆಯಲ್ಲ ? ಎಂಬಿದೇ ಈ ಆಕ್ಷೇಪವು ಉತ್ತರವೇನೆಂದರೆ : ಎಲ್ಲಾ ಶ್ರುತಿಗಳಲ್ಲಿಯೂ ಸೃಷ್ಟಿಪ್ರಕ್ರಿಯೆಯು ವಿವಿಧವಾಗಿಯೇ ವರ್ಣಿಸಲ್ಪ ಟ್ಟಿದ್ದರೂ ಕಾರಣವಸ್ತುವು ಮಾತ್ರ ಬ್ರಹ್ಮವೇ ಎಂಬ ವಿಷಯದಲ್ಲಿ ಅಭಿಪ್ರಾಯಭೇದವಿರುವದೇ ಇಲ್ಲ. ಇನ್ನು ಸೃಷ್ಟಿಯನ್ನು ವರ್ಣಿಸಿರುವದು

ಮಂದಮಧ್ಯಮಾಧಿಕಾರಿಗಳಿಗೆ ಬ್ರಹ್ಮವನ್ನು ತಿಳಿಸಲು ಉಪಾಯಮಾತ್ರ ವಾಗಿಯೇ ಹೊರತು ಅದರಲ್ಲಿಯೇ ಶ್ರುತಿಗೆ ತಾತ್ಪರ್ಯವಿರುವದಿಲ್ಲ. ಏಕೆಂದರೆ ಸೃಷ್ಟಿಯನ್ನು ಕುರಿತು ಚಿಂತಿಸುವವರಿಗೆ ಯಾವ ಫಲಶ್ರುತಿಯನ್ನೂ ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಈ ಉತ್ಪತ್ತಿವರ್ಣನೆಯೆಲ್ಲವೂ ಬ್ರಹ್ಮಪ್ರತಿಪತ್ತಿಗೆ ಉಪಾಯಮಾತ್ರವೇ- ಎಂದು ಗೌಡಪಾದಾಚಾರ್ಯರು ತಿಳಿಸಿರುತ್ತಾರೆ. ಅದನ್ನೇ ಇಲ್ಲಿಯೂ ಅನುಸಂಧಾನಮಾಡಿಕೊಳ್ಳಬೇಕು.

ಈಗ ಸಾಶನಾನಶನಗಳ ವಿವರವನ್ನೂ ಸ್ವಲ್ಪ ತಿಳಿಯೋಣ. ಲೋಕ ದಲ್ಲಿ ನಮಗೆ ಕಣ್ಣಿಗೆ ಕಾಣಿಸುವ ಚೇತನಾಚೇತನವಿಭಾಗಗಳಂತೂ ಸರಿ ಯಷ್ಟೆ. ಆದರೆ ಸೃಷ್ಟಿಯು ವ್ಯಾಪ್ತಿಯು ಅಷ್ಟೇ ಎಂದೂ ತಿಳಿಯಬಾರದು: ಏಕೆಂದರೆ ದೃಗ್ಗೋಚರವಾಗದೆ ಇದ್ದರೂ ಬುದ್ಧಿಗೋಚರವೂ ಪ್ರತ್ಯಗನುಭವ ಗೋಚರವೂ ಆದ ಸೃಷ್ಟಿಯೂ ಇದ್ದುಕೊಂಡಿರುವದು. ಉದಾಹರಣೆಗೆ ದೇವತೆಗಳೆಂಬುವರಲ್ಲಿ ಸೂರ್ಯ, ಚಂದ್ರ, ವಾಯು-ಮುಂತಾದ ಕೆಲವರನ್ನು ಬಿಟ್ಟರೆ ಇಂದ್ರ, ಯಮ, ಭಗ- ಮುಂತಾದವರು ಪ್ರತ್ಯಕ್ಷಗೋಚರರಲ್ಲ. ಆದರೆ ಅವರುಗಳೂ ಪುರುಷನ ಸೃಷ್ಟಿಗೇ ಸೇರಿರುತ್ತಾರೆ, ಇವರೆಲ್ಲ ಸಾಶನರು. ಇಜ್ಯವೆಂಬ ಆಹಾರವನ್ನು ಸ್ವೀಕರಿಸುವವರು. ಇನ್ನು ದ್ಯುಲೋಕ, ಅಂತರಿಕ್ಷ, ಸ್ವರ್ಗವೇ ಮುಂತಾದ ಲೋಕಗಳೂ ಅಲ್ಲಿರಬಹುದಾದ ಗೃಹಾ ರಾಮಾದಿಭೋಗಸಾಮಗ್ರಿಗಳೂ ಅನಶನವಾದ ಹಾಗೂ ಶಾಸ್ತ್ರಬುದ್ಧಿ ಗೋಚರವಾದ ಅಚೇತನಸೃಷ್ಟಿವರ್ಗವು. ಹಾಗೆಯೇ ಪಾತಾಳಾದಿಲೋಕ ಗಳಲ್ಲಿ ವಾಸಿಸುವ ಜೀವಿಗಳೂ ನಿರ್ಜೀವಿಗಳೂ ಇದ್ದಾರೆ. ಅಂತೂ ಸಾಶನ, ಅನಶನ-ವಸ್ತುಗಳಿಂದ ಬ್ರಹ್ಮಾಂಡವೆಲ್ಲ ತುಂಬಿತುಳುಕುತ್ತಿದೆ. ಇದರಲ್ಲಿ ಬಹುಭಾಗವು ಮನುಷ್ಯನಿಗೆ ಇನ್ನೂ ತಿಳಿದೇಇರುವದಿಲ್ಲ. ಅವನ ಆಯುಷ್ಯವೂ ಶಕ್ತಿಯೂ ಪರಿಮಿತವಾಗಿರುವದರಿಂದ ಪುರುಷನ ಪಾದಭಾಗವಾದ ಸಾಶನಾ ನಶನಸೃಷ್ಟಿಯಲ್ಲಿ-ಕೋಟಿಯಲ್ಲಿ ಒಂದಂಶವು ಕೂಡ ಮಾನವನಿಗೆ ಎಟುಕಿರು ವದಿಲ್ಲ. ಹೀಗಿರುವಲ್ಲಿ ಪುರುಷನನ್ನು ಅರಿಯುವದಾದರೂ ಎಂತು ? ಆದ್ದ ರಿಂದ ಪುರುಷನ ಸಾಶನಾನಶನಸೃಷ್ಟಿಯಲ್ಲಿ ಏಕದೇಶವನ್ನೇ ನಾವು ಅರಿಸಿ ಕೊಂಡು ಅದನ್ನು ನೆಪಮಾಡಿಕೊಂಡು ಏಕವಿಜ್ಞಾನದಿಂದ ಸರ್ವವಿಜ್ಞಾನ ವನ್ನು ಸಂಪಾದಿಸಿಕೊಳ್ಳುವ ಉಪಾಯದಿಂದ ಪುರುಷತತ್ತ್ವದಲ್ಲಿ ನೆಲೆಗೊಳ್ಳ ಬೇಕು. ಹೀಗಿದೆ ಸಾಶನಾನಶನಗಳ ಮಹಿಮೆ !

ಆದರೂ ಪುರುಷನನ್ನು ಅರಿತುಕೊಳ್ಳಲಿಚ್ಛಿಸುವವರಿಗೆ ನಿಜವಾದ ಜಿಜ್ಞಾಸೆಯೂ ಪುರುಷನಲ್ಲಿಯೇ ಭಕ್ತಿಶ್ರದ್ಧೆಗಳೂ ಇದ್ದುದೇ ಆದರೆ 'ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್' (ಅಂಥವನಿಗೆ ಈ ಆತ್ಮನು ತನ್ನ ಶರೀರವನ್ನು ಬಿಚ್ಚಿತೋರಿಸುವನು) ಎಂಬ ವಾಕದಂತೆ ಪುರುಷನು ತನ್ನ ತತ್ತ್ವವನ್ನು ತಿಳಿಸಿಕೊಡುವನು. ಹಾಗೆ ಭಗವದನುಗ್ರಹ ಪಾತ್ರರಾಗಿ ವಿಶ್ವವನ್ನು ತಮ್ಮ ದಿವ್ಯದೃಷ್ಟಿಯಿಂದ ಕಂಡ ಋಷಿಗಳು ಹಾಡಿರುವ ಪುರುಷಸೂಕ್ತದ ಮುಂದಿನ ಮಂತ್ರವನ್ನು ಈಗ ವಿಚಾರಮಾಡೋಣ.

---

## ೫. ತಸ್ಮಾದ್ವಿರಾಡಜಾಯತ

ಪುರುಷಸೂಕ್ತದ ಐದನೆಯ ಮಂತ್ರವನ್ನು ಇನ್ನು ವಿಚಾರಮಾಡಬೇಕಾಗಿದೆ. ಅದು ಹೀಗಿದೆ :

**ತಸ್ಮಾದ್ವಿರಾಡಜಾಯತ । ವಿರಾಜೋ ಅಧಿ ಪೂರುಷಃ ।**
**ಸ ಜಾತೋ ಅತ್ಯರಿಚ್ಯತ । ಪಶ್ಚಾದ್ಭೂಮಿಮಥೋ ಪುರಃ ॥೫॥**

'ಆ ಆದಿಪುರುಷನಿಂದ ವಿರಾಜನು ಉಂಟಾದನು. ಪುರುಷನು ವಿರಾಜನಿಗಿಂತ ಮೇಲಿದ್ದನು. ಆ ಹುಟ್ಟಿದ ವಿರಾಜನು ಹರಡಿಕೊಂಡನು. ಅನಂತರ ಭೂಮಿಯನ್ನು ಮುಂದೆಯೂ ಹಿಂದೆಯೂ ಸೃಷ್ಟಿಸಿದನು.'

ಈ ಮಂತ್ರದಲ್ಲಿಯೂ ಹಿಂದೆ ತಿಳಿಸಿದ ಸೃಷ್ಟಿಯನ್ನೇ ವರ್ಣಿಸಲಾಗಿದೆ. ಈ ವರ್ಣನೆಯು ಇನ್ನೂ ಮುಂದುವರೆಯಲಿದೆ. ಪ್ರಕೃತ-ಆ ನಾರಾಯಣ ಪುರುಷನಿಂದ ವಿರಾಜನೆಂಬುವನು ಹುಟ್ಟಿದನು, ವಿರಾಜ ಎಂದರೆ 'ವಿವಿಧಂ ರಾಜತೇ ಇತಿ ವಿರಾಟ್' ಎಂಬ ವ್ಯುತ್ಪತ್ತಿಯಂತೆ ನಾನಾವಿಧವಾಗಿ ಹರಡಿಕೊಂಡಿರುವ ಚೇತನಾಚೇತನಭೂತವರ್ಗಗಳು ಎಂದರ್ಥ. ಈ ಭೂತವರ್ಗಗಳ ಒಟ್ಟು ಶರೀರಕ್ಕೆ-ಅಭಿಮಾನಿಯಾಗಿರುವವನನ್ನು ವಿರಾಟ್‌ಪುರುಷನೆನ್ನುವರು. ನಿರ್ಗುಣವಾದ ಪರಬ್ರಹ್ಮವು ಸೃಷ್ಟಿಕಾರಣವಾಗಲಾರದು. ಏಕೆಂದರೆ ಅದರಲ್ಲಿ ವಿಭಾಗಗಳಾಗಲೀ ವಿಶೇಷಗಳಾಗಲೀ ಇರುವದಿಲ್ಲ. ಆದರೆ ಬ್ರಹ್ಮವನ್ನು ಬಿಟ್ಟರೆ ಜಗತ್ತಿಗೆ ಬೇರೆಯ ಕಾರಣವನ್ನು ಹೇಳಲು ಬರುವಂತಿಲ್ಲ.

ಆದ್ದರಿಂದ ಜಗತ್ಕಾರಣತ್ವವನ್ನು ಬ್ರಹ್ಮದಲ್ಲಿ ಆರೋಪಿಸಿದಾಗ ಅದೇ ಈಶ್ವರ, ನಾರಾಯಣ-ಮುಂತಾದ ಯಾವದಾದರೊಂದು ಹೆಸರಿನಿಂದ ವ್ಯವಹರಿಸಲ್ಪಡುವದು. ಈ ಜಗತ್ಕಾರಣವನ್ನೇ "ಸತ್" ಎಂದು ಉಪನಿಷತ್ತುಗಳಲ್ಲಿ ತಿಳಿಸಲಾಗಿದೆ. ಸದ್ಬ್ರಹ್ಮದ ಎರಡು ಶಕ್ತಿಗಳಾದ ಜ್ಞಾನ-ಕ್ರಿಯೆಗಳನ್ನು ಕ್ರಮವಾಗಿ ಹಿರಣ್ಯಗರ್ಭ-ಸೂತ್ರಾತ್ಮ(ವಾಯು)ನೆಂದು ಕರೆಯುವರು. ಹಿರಣ್ಯಗರ್ಭನು ಸಮಷ್ಟಿಸೂಕ್ಷ್ಮಶರೀರಾಭಿಮಾನಿಯು. ಈತನ ಮುಂದಿನ ಆವಿರ್ಭಾವವೇ ವಿರಾಜನು. ಈ ವಿರಾಜನ ವಿಚಾರವಾಗಿಯೇ 'ತಸ್ಮಾದ್ವಿರಾಡಜಾಯತ'-ಎಂದು ಇಲ್ಲಿ ಪ್ರಸ್ತಾಪಿಸಲಾಗಿದೆ.

ಈಗ ವಿರಾಜನು ಹುಟ್ಟಿದನು-ಎಂದರೆ ಭಗವಂತನ ಜ್ಞಾನಕ್ರಿಯಾ ಶಕ್ತಿಗಳೆರಡೂ ಒಂದುಗೂಡಿ ಸ್ಥೂಲವಾಗಿ ಹೊರತೋರಿಕೊಂಡಿತು-ಎಂದರ್ಥ. ಹೀಗೆ ವಿರಾಜನು ಹುಟ್ಟಿದಮೇಲೂ ಪುರುಷನು ತಾನು ತಾನಾಗಿಯೇ ಉಳಿದುಕೊಂಡಿರುತ್ತಾನೆ-ಎಂಬುದನ್ನು "ವಿರಾಜೋ ಅಧಿ ಪೂರುಷಃ" ಎಂಬ ವಾಕ್ಯದಿಂದ ತಿಳಿಸಿದೆ. ಹೇಗೆಂದರೆ : ಒಂದು ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವು ತೋರಿದ ಮಾತ್ರಕ್ಕೆ ನಮ್ಮ ಸ್ವರೂಪದಲ್ಲ ಹೇಗೆ ಏನೂ ಮುಕ್ಕಾಗುವದಿಲ್ಲವೋ ಹಾಗೆ ಪುರುಷನ ಸ್ವರೂಪದಿಂದ ಶಕ್ತಿಗಳ ಆವಿರ್ಭಾವವಾದರೂ ಆ ಶಕ್ತಿಗಳು ಎಷ್ಟೇ ವಿಚಿತ್ರವಾಗಿ ಸಾವಿರಾರು ರೂಪಗಳಿಂದ ತೋರಿಕೊಂಡರೂ ಸ್ವರೂಪದಲ್ಲಿ ಏನೂ ವ್ಯತ್ಯಾಸವಾಗುವದಿಲ್ಲ. ಸೂರ್ಯಕಿರಣಗಳು ಎಲ್ಲಾ ದಿಕ್ಕುಗಳಿಗೂ ಪ್ರತಿದಿನವೂ ಹರಡಿಕೊಂಡು ಸಪ್ತವರ್ಣಗಳನ್ನು ಉಂಟುಮಾಡುತ್ತಿದ್ದರೂ ಸೂರ್ಯನಲ್ಲಿ ಹೇಗೆ ಯಾವ ಬದಲಾವಣೆಗಳೂ ಸಂಭವಿಸುವದಿಲ್ಲವೋ ಹಾಗೆ ಎಂದು ತಿಳಿಯಬೇಕು. ಈ ಮೂಲಕ ಪುರುಷನ ಅವ್ಯಯವೂ ಅಚ್ಯುತವೂ ಶಾಶ್ವತವೂ ಆದ ಸ್ವರೂಪವನ್ನು ತಿಳಿಸಿದಂತಾಗಿದೆ. ಇರಲಿ. ಈಗ ವಿರಾಟ್‌ಪುರುಷನ ಶರೀರವನ್ನು ಅವಲೋಕಿಸೋಣ. 'ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ' ಎಂಬ ವಚನದಂತೆ ಆ ಪುರುಷಭಗವಂತನ ಪರಾಶಕ್ತಿಯ ಪ್ರತಿನಿಧಿಯಾದ ವಿರಾಜನು ತಾನು ಹುಟ್ಟಿ ಎಲ್ಲೆಲ್ಲೂ ಹರಡಿಕೊಂಡನು. ಅದನ್ನೇ 'ಸ ಜಾತೋ ಅತ್ಯರಿಚ್ಯತ' ಎಂದು ತಿಳಿಸಲಾಗಿದೆ. ಎಲ್ಲೆಲ್ಲೂ ಎಂದರೆ ಪುರಃ-ಮುಂದಕ್ಕೂ, ಪಶ್ಚಾತ್- ಹಿಂದಕ್ಕೂ ಆಕ್ರಮಿಸಿಕೊಂಡನು. ಅನಂತರ ಭೂಮಿಯನ್ನು ಸೃಷ್ಟಿಸಿದನು. ಹೀಗೆ ತೋರಿಕೊಂಡ

ವಿರಾಟ್‌ಪುರುಷನ ಒಳವೈಯನ್ನು ಪರೀಕ್ಷಿಸಲಾಗಿ ದೇವತೆ, ಮನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಾದಿಗಳು, ಬ್ರಹ್ಮ, ಇಂದ್ರಾದಿದೇವತೆಗಳು, ಯಕ್ಷ ರಾಕ್ಷಸಾದಿಗಳು, ನಾಗಾದಿಗಳು, ಅಚೇತನವಾದ ಪರ್ವತ, ನದಿ, ಬಂಡೆ– ಮುಂತಾದವುಗಳು– ಹೀಗೆ ನಾನಾವಿಧವಾದ ಸ್ಥಾವರಜಂಗಮಾತ್ಮಕವಾದ ಚತುರ್ವಿಧಭೂತಗ್ರಾಮಗಳಾಗಿ ತಾನೇ ಮಾರ್ಪಟ್ಟಿರುವನು– ಎಂದು ತಿಳಿದು ಬರುತ್ತದೆ. ಮನುಷ್ಯರೇ ಮೊದಲಾದ ದ್ವಿಪಾತ್–ಚತುಷ್ಪಾತ್ ಪ್ರಾಣಿಗಳ ನಿವಾಸಕ್ಕಾಗಿ ಆತನು ಭೂಮಿಯನ್ನು ಮೊದಲು ಸೃಷ್ಟಿಸಿದನು; ಅನಂತರವೇ ಸೃಷ್ಟಿಯ ಪ್ರಕಾರಗಳು ಮುಂದೆ ವರ್ಣಿಸಲ್ಪಡುವವು.

ಇಲ್ಲಿ ತಿಳಿಯಬೇಕಾದದ್ದೇನೆಂದರೆ : ವಿವಿಧವಾದ ಶರೀರಗಳನ್ನು ಉಂಟು ಮಾಡಿದ್ದರಿಂದ ವಿರಾಜನ ಸೃಷ್ಟಿಯು ಪೂರ್ಣವಾಗಲಿಲ್ಲ. ಏಕೆಂದರೆ ಆಯಾ ಶರೀರಾಭಿಮಾನಿಗಳಾದ ಜೀವಾತ್ಮರುಗಳ ಸೃಷ್ಟಿಯೂ ಆಗತ್ಯವಾಗಿದೆ. ಆದ್ದರಿಂದ ವಿರಾಜನು ತಾನೇ ನಾನಾವಿಧವಾದ ಶರೀರೋಪಾಧಿಗಳಲ್ಲಿ– ಸೂರ್ಯನು ಕೆರೆ, ಕುಂಟೆ ಮುಂತಾದ ಜಲಪ್ರದೇಶಗಳಲ್ಲಿ ಪ್ರವೇಶಿಸುವಂತೆ– ಪ್ರವೇಶಿಸಿದನು. ತೈತ್ತಿರೀಯೋಪನಿಷತ್ತಿನ 'ತತ್ ಸೃಷ್ಟ್ವಾ | ತದೇವಾನು ಪ್ರಾವಿಶತ್' ಎಂಬ ಶ್ರುತಿಯೂ ಈ ತೀರ್ಮಾನಕ್ಕೆ ಆಧಾರವಾಗಿರುತ್ತದೆ. ಹೀಗೆ ಜೀವಾತ್ಮರುಗಳಾಗಿಯೂ ತೋರಿಕೊಂಡು ವ್ಯಷ್ಟಿಶರೀರಗಳಾಗಿಯೂ ವಿಂಗಡಿಸಿಕೊಂಡಿರುವ ವಿರಾಜನ ಮಹಿಮೆಯು ವರ್ಣಿಸಲು ಅಸಾಧ್ಯ ವಾದುದು. ಇಂಥ ವಿರಾಜನೂ ಆ ಪುರುಷಭಗವಂತನ ಶಕ್ತಿಯ ಏಕದೇಶ ವೆಂದಮೇಲೆ ಪುರುಷನ ಮಹಿಮೆಯು ಇನ್ನೆಂಥದ್ದಿರಬಹುದು ?

ಈಗ ಮುಂದಿನ ಮಂತ್ರವನ್ನು ನೋಡೋಣ :....

**ಯತ್ಪುರುಷೇಣ ಹವಿಷಾ | ದೇವಾ ಯಜ್ಞಮತನ್ವತ ।**
**ವಸಂತೋ ಅಸ್ಯಾಸೀದಾಜ್ಯಮ್ । ಗ್ರೀಷ್ಮ ಇಧ್ಮಃ ಶರದ್ಧವಿಃ ॥**

'ಯಾವ ಪುರುಷನೆಂಬ ಹವಿಸ್ಸಿನಿಂದ ದೇವತೆಗಳು ಯಜ್ಞವನ್ನು ಮಾಡಿದರೋ ಆ ಯಜ್ಞಕ್ಕೆ ವಸಂತವು ತುಪ್ಪವೂ ಗ್ರೀಷ್ಮವು ಇಧ್ಮವೂ ಶರದ್ ಹವಿಸ್ಸೂ ಆಯಿತು.''

ಈ ಮಂತ್ರದಿಂದ ಮುಂದಕ್ಕೆ ಸೃಷ್ಟಿಯು ಮುಂದುವರಿದು ವಿಸ್ತಾರವಾಗಿ ಹರಡಿಕೊಂಡಿದ್ದರ ಪ್ರಸ್ತಾಪವಿದೆ. ಸೃಷ್ಟಿಯು ಬೆಳೆಯಲು ವೈದಿಕ ಕರ್ಮವಾದ ಯಜ್ಞವು ಕಾರಣವಾಯಿತು–ಎಂದು ತಿಳಿಸಲು ಪ್ರಾರಂಭಿಸಲಾಗಿದೆ. ಯಜ್ಞವೆಂಬ ಶ್ರೌತಕರ್ಮದ ವಿಚಾರವು ಈಗಿನ ಕಾಲಕ್ಕೆ ಅನೇಕರಿಗೆ ತಿಳಿಯದು. ಅಷ್ಟೇ ಅಲ್ಲದೆ ಅದೊಂದು ವ್ಯರ್ಥವಾದ, ಹಾಗೂ ಆಹಾರದ್ರವ್ಯಗಳನ್ನು ಪೋಲುಮಾಡುವ ಕೆಲಸವೆಂಬ ದುರ್ಬುದ್ಧಿಯೂ ವಿದ್ಯಾವಂತರೆನಿಸಿಕೊಂಡವರಿಗೂ ಇದ್ದುಕೊಂಡಿದೆ. ಆದ್ದರಿಂದ ಯಜ್ಞದ ವಿಚಾರವಾಗಿ ನಿಜವನ್ನು ಅರಿಯುವದು ಅವಶ್ಯ. ಒಂದು ಉದಾಹರಣೆಯಿಂದ ನೋಡೋಣ. ಒಬ್ಬ ಮನುಷ್ಯನು ಕೆಲವೇ ಕಾಳುಕಡ್ಡಿಗಳನ್ನು ಹೊಂದಿದ್ದರೆ ಅವನಿಗೆ ಅವುಗಳನ್ನು ಮುಗಿಯದಂತೆ ಮಾಡುವದು ಹೇಗೆ ? ಎಂಬ ಆಲೋಚನೆಯುಂಟಾಗುವದು. ಆಗ ಅವನು ಜಾಣನಾದರೆ ತಾನು ತಿನ್ನುವದರಲ್ಲಿ ಉಳಿಸಿಯಾದರೂ ಸಕಾಲದಲ್ಲಿ ಮಳೆ ಬಂದಾಗ ವ್ಯವಸಾಯ ಮಾಡಿದ ಭೂಮಿಯಲ್ಲಿ ಆ ಕಾಳುಗಳನ್ನು ಬಿತ್ತಬೇಕು. ಆಗ ಅದು ಮೊಳಕೆಯಾಗಿ ಪೈರಾಗುವದು. ಒಂದಕ್ಕೆ ನೂರರಷ್ಟು ಅಭಿವೃದ್ಧಿ ಹೊಂದುವದು. ಇದನ್ನು ಕೃಷಿಯಜ್ಞವೆಂದು ಕರೆಯಬಹುದು. ಇದೇ ಉದಾಹರಣೆಯಂತೆ ಸೃಷ್ಟಿಯ ಆರಂಭದಲ್ಲಿ ಇನ್ನೂ ಯಾವ ಸೌಕರ್ಯಗಳಾಗಲಿ, ವ್ಯವಸ್ಥೆಗಳಾಗಲಿ, ಇಲ್ಲದಿದ್ದಾಗ ವಿರಾಟ್‌ಪುರುಷನಿಂದ ಹೊರಬಂದ ಜೀವರುಗಳಲ್ಲಿ ಉತ್ತಮರಾದ ದೇವತೆಗಳಿಗೆ ಈ ಸೃಷ್ಟಿಯನ್ನು ಬೆಳೆಸಬೇಕೆಂಬ ಸಂಕಲ್ಪವುಂಟಾಯಿತು. ಆಗ ಅವರು ಯಜ್ಞವನ್ನು ಮಾಡಬೇಕೆಂದು ಉಪಕ್ರಮಿಸಿದರು– ಎಂದು ಇಲ್ಲಿ ತಿಳಿಸಿರುತ್ತದೆ.

ಹಾಗಾದರೆ ಏನಾದರೊಂದನ್ನು ಬೆಳೆಯಬೇಕಾದರೆ ಯಜ್ಞವನ್ನೇ ಮಾಡಬೇಕೆ ? ಎಂಬ ಪ್ರಶ್ನೆಯು ಹುಟ್ಟುತ್ತದೆ. ನಿಜ. ಯಜ್ಞಶಬ್ದದ ಪೂರ್ಣಾರ್ಥವು ತಿಳಿಯುವವರೆಗೂ ನಮಗೆ ಈ ಸಂಶಯವು ನಿವಾರಣೆಯಾಗುವದಿಲ್ಲ. ಯಜ್ಞವೆಂದರೆ ದೇವತೆಗಾಗಿ ಉದ್ದೇಶಿಸಿದ ದ್ರವ್ಯವನ್ನು ತ್ಯಾಗಮಾಡುವದು– ಎಂದರ್ಥ. ಹಾಗೆ ಪದಾರ್ಥವನ್ನು ಕೊಟ್ಟಮೇಲೂ 'ನ ಮಮ' (ನನಗೆ ಅಲ್ಲ) ಎನ್ನಬೇಕು. ಅಂತೂ ತ್ಯಾಗವಿಲ್ಲದೆ ಬೆಳವಣಿಗೆಯಿಲ್ಲ– ಎಂಬುದು ಸಾಮಾನ್ಯನಿಯಮವು. ಲೋಕದಲ್ಲಿ ತಾಯಿಯಾಗ

ಲಿರುವವಳು ತನ್ನ ಶರೀರಸುಖವನ್ನು ತ್ಯಾಗಮಾಡಿದಲ್ಲದೆ ಮಗುವನ್ನು ಪಡೆಯಲಾಗುವದಿಲ್ಲ. ಆ ಮಗುವಿಗಾಗಿ ಪಾಲನೆಪೋಷಣೆಗಳನ್ನು ಕೈಗೊಂಡು ತನ್ನ ಕಷ್ಟವನ್ನು ಬದಿಗಿರಿಸಿ ಸ್ವಸುಖವನ್ನು ಬಲಿಗೊಡದೆ ಅದು ಬೆಳೆಯುವಂತಿಲ್ಲ. ಹೀಗೆಯೇ ಜಗತ್ತಿನಲ್ಲಿ ಎಲ್ಲಾ ವಸ್ತುಗಳೂ ತ್ಯಾಗದಿಂದಲೇ ಬದುಕಿರುವವು. ಗಿಡಮರಗಳು ಹೂ ಹಣ್ಣುಗಳನ್ನೂ ಸೌದೆಯನ್ನೂ ದನಗಳು ಹಾಲನ್ನೂ, ತ್ಯಾಗಮಾಡದಿದ್ದರೆ ನಾವು ಬದುಕು ವದು ಹೇಗೆ ಸಾಧ್ಯ ? ಆದ್ದರಿಂದ ಪ್ರಕೃತಿಯೇ ಮನುಷ್ಯನಿಗೆ ತ್ಯಾಗದಕಡೆಗೆ ಪಾಠಕಲಿಸುತ್ತಿದೆ. ಈ ತ್ಯಾಗವನ್ನು ದೇಶಕಾಲಪಾತ್ರಗಳನ್ನು ಅರಿತು ಮಾಡಿದಲ್ಲಿ ಅಭಿವೃದ್ಧಿಯಾಗುವಂಥ ಉಪಾಯಗಳನ್ನು ವೇದಗಳು ತಿಳಿಸಿರು ವವು. ಇವೇ ಯಜ್ಞಗಳೆನಿಸಿರುವವು. ವೇದಗಳನ್ನು ತಿರಸ್ಕರಿಸಿ ಯಜ್ಞ ಗಳನ್ನೂ ದೂಷಿಸಿ ಮನುಷ್ಯನು ನಾಸ್ತಿಕನಾದರೆ ತ್ಯಾಗವಂತೂ ಅನಿವಾರ್ಯ ವಾಗಿದ್ದು ಫಲವು ಮಾತ್ರ ಸೊನ್ನೆಯಾಗಲಿದೆ. ಇದನ್ನು ನಾವು ತಿಳಿಯಬೇಕು.

ಯಜ್ಞವನ್ನು ತಿರಸ್ಕರಿಸಿ ಲೌಕಿಕಜೀವನವನ್ನು ಮಾತ್ರವೇ ಗುರಿ ಯಾಗಿ ಹೊಂದಿದವನೂ ತ್ಯಾಗಮಾಡುವದನ್ನೇನೂ ತಪ್ಪಿಸಿಕೊಳ್ಳುವಂತಿಲ್ಲ. ಸಮಷ್ಟಿಯಾಗಿ ಯಜ್ಞವನ್ನು ಕೈಬಿಟ್ಟವರು ತಮ್ಮ ಕ್ಷೇತ್ರಗಳಲ್ಲಿ ಸಂಭವಿಸುವ ಅಗ್ನಿಯ ಅಪಘಾತಗಳನ್ನು ಎದುರಿಸಬೇಕಾಗುವದು ; ಅತಿವೃಷ್ಟಿ ಅಥವಾ ಅನಾವೃಷ್ಟಿಯ ಫಲವನ್ನೂ ಪ್ರಜಾಕ್ಷೋಭೆಯನ್ನೂ ಅನುಭವಿಸಬೇಕಾ ಗುವದು. ವೈಯಕ್ತಿಕವಾಗಿಯೂ ಇಂಥ ಫಲಗಳಾಗಬಹುದು. ಹೇಗೆಂದರೆ : ಏಕಾದಶ್ಯುಪವಾಸವನ್ನು ಹಾಸ್ಯಮಾಡುವವನು ಖಾಯಿಲೆಬಿದ್ದು ಜ್ವರದಿಂದ ನರಳುವಾಗ ಬಲವಂತವಾಗಿ ಉಪವಾಸಮಾಡಬೇಕಾಗುವದು. ಆದರೆ ಉಪವಾಸದ ಫಲವು ಮಾತ್ರ ಸಿಗುವಂತಿಲ್ಲ. ಹೀಗೆ ನಾಸ್ತಿಕರಿಗೆ ಯಾವಾಗ ಲೂ ನಷ್ಟವು ಕಟ್ಟಿಟ್ಟದ್ದೇ ಆಗಿದೆ. ಇರಲಿ. ಈಗ ನಾವು ಆಸ್ತಿಕ್ಯಬುದ್ಧಿ ಯಿಂದ ಕೂಡಿ ವಿಚಾರಮಾಡಿದರೆ ಸೃಷ್ಟಿಯ ಆರಂಭದಲ್ಲಿ ಜಗತ್ತಿನ ಅಭ್ಯುದಯಕ್ಕಾಗಿ ದೇವತೆಗಳು ಯಜ್ಞವನ್ನು ಕೈಗೊಂಡರೆಂಬುದು ಗೊತ್ತಾಗುವದು. ಆದರೆ ಈ ಯಜ್ಞಕ್ಕೆ ತಕ್ಕ ಸಾಮಗ್ರಿಗಳು ಆಗ ಇನ್ನೂ ಸೃಷ್ಟಿಯಾಗಿರಲಿಲ್ಲವಾಗಿ ದೇವತೆಗಳು ತಮ್ಮಲ್ಲಿದ್ದ ವಸ್ತುಗಳಿಂದಲೇ ಯಜ್ಞವನ್ನು ಮಾಡಿದರು. ಅದರ ವಿವರವನ್ನು ಈಗ ನೋಡೋಣ.

ಮುಖ್ಯವಾಗಿ ಯಜ್ಞಕ್ಕೆ ತುಪ್ಪವು ಬೇಕು. ಹವಿಸ್ಸು, ಸಮಿತ್ತುಗಳು ಮುಂತಾದವುಗಳೂ ಅಗತ್ಯವು. ಆದ್ದರಿಂದ ದೇವತೆಗಳು ಈ ವಿರಾಟ್ ಪುರುಷನನ್ನೇ ಹವಿಸ್ಸಾಗಿ ಮಾಡಿಕೊಂಡರು ಎಂದರೆ ವಿರಾಜನ-ಅವಯವ ಗಳೆಲ್ಲವೂ ಯಜ್ಞಕ್ಕೆ ಯೋಗ್ಯವಾದ ವಸ್ತುಗಳೇ ಆದವು- ಎಂದರ್ಥ. ಹೀಗೆ ದೇವತೆಗಳು ಕೈಗೊಂಡ ಈ ಯಜ್ಞಕ್ಕೆ ವಸಂತಋತುವು ತುಪ್ಪವಾಯಿತು. ಗ್ರೀಷ್ಮಋತುವೇ ಇಧ್ಮವಾಯಿತು. ಇಧ್ಮವೆಂದರೆ ಯಜ್ಞಾರಂಭದಲ್ಲಿ ಅಗ್ನಿಗೆ ಒಟ್ಟಿಗೆ ಅರ್ಪಿಸುವ ಸಮಿತ್ತುಗಳ ಕಟ್ಟು- ಈ ಕಟ್ಟಿನಲ್ಲಿ ೨೧ ಕಡ್ಡಿ ಗಳಿರುವವು. ಇವುಗಳ ವಿವರವನ್ನು ಮುಂದೆ ಕೊಡಲಾಗುವದು. ಶರದ್ ಋತುವು ಹವಿಸ್ಸಾಯಿತು. ಮೊದಲು ಸಾಮಾನ್ಯವಾಗಿ ವಿರಾಟ್‌ಪುರುಷ ನನ್ನೇ ಹವಿಸ್ಸಾಗಿ ಮಾಡಿದ ಅನಂತರ ವಿಶೇಷವಾಗಿ ಶರದ್‌ಋತುವನ್ನು ಹವಿಸ್ಸಾಗಿ ಸ್ವೀಕರಿಸಿದರು- ಎಂದಭಿಪ್ರಾಯ.

ಯಜ್ಞವು ಮಾನಸಿಕ, ಹಾಗೂ ದ್ರವ್ಯರೂಪ- ಎಂದು ಎರಡುಬಗೆ ಯಾಗಿದೆ. ಸೃಷ್ಟಿಯ ಪ್ರಾರಂಭದಲ್ಲಿ ದೇವತೆಗಳು ಶುದ್ಧಾಂತಃಕರಣರಾಗಿದ್ದು ದರಿಂದ ಅವರು ಮಾನಸಿಕಯಜ್ಞವನ್ನೇ ಕೈಗೊಂಡರೆಂದೂ ಹೇಳಬಹುದು. ಇದು ದ್ರವ್ಯಯಜ್ಞಕ್ಕಿಂತ ಶ್ರೇಷ್ಠವೂ ಹೌದು. ದ್ರವ್ಯಯಜ್ಞದಲ್ಲಿ ಸಂಭವಿಸ ಬಹುದಾದ ನ್ಯೂನತೆಗಳಿಗೆ ಇಲ್ಲಿ ಅವಕಾಶವಿಲ್ಲ. ಹೀಗೆ ಮಾನಸಿಕವಾಗಿ ದೇವತೆಗಳು ಕೈಗೊಂಡ ಯಜ್ಞದ ವಿವರವನ್ನೂ ಅದರಿಂದ ದೇವತೆಗಳು ಪಡೆದುಕೊಂಡ ಫಲವನ್ನೂ ಈಗ ವಿಚಾರಮಾಡೋಣ.

---

# ೬. ದೇವಾ ಯಜ್ಞಮತನ್ವತ

ಪುರುಷಸೂಕ್ತದ ಆರನೆಯ ಋಕ್ಕನ್ನು ಈವರೆಗೆ ವಿಚಾರಮಾಡಿ ದ್ದಾಗಿದೆ. ಆದರೆ ಅದರಲ್ಲಿ ಪರಾಮೃಷ್ಟವಾಗಿರುವ ದೇವತೆಗಳ ಯಜ್ಞದ ವಿಚಾರವು ಇನ್ನೂ ಈಗತಾನೆ ಪ್ರಾರಂಭವಾಗುತ್ತಿದೆ. ಯಜ್ಞದ ವಿವರ ಗಳನ್ನು ಕುರಿತು ಮುಂದಿನ ಋಕ್ಕುಗಳನ್ನು ಅನುಸಂಧಾನಮಾಡಬೇಕಾಗಿದೆ ಯಾದ್ದರಿಂದ ಏಳನೆಯ ಋಕ್ಕನ್ನು ಈಗ ವಿಚಾರಕ್ಕೆ ತೆಗೆದುಕೊಳ್ಳೋಣ.

**ಸಪ್ತಾಸ್ಯಾಸನ್ ಪರಿಧಯಃ । ತ್ರಿಃ ಸಪ್ತ ಸಮಿಧಃ ಕೃತಾಃ ।**
**ದೇವಾ ಯದ್ಯಜ್ಞಂ ತನ್ವಾನಾಃ । ಅಬಧ್ನನ್ ಪುರುಷಂ ಪಶುಮ್ ॥**

"ಈ ಯಜ್ಞಕ್ಕೆ ಏಳು ವಸ್ತುಗಳು ಪರಿಧಿಗಳಾದವು. ಇಪ್ಪತ್ತೊಂದು ವಸ್ತುಗಳು ಸಮಿತ್ತಾಗಿ ಮಾಡಲ್ಪಟ್ಟವು. ಯಜ್ಞವನ್ನು ಮಾಡಹೊರಟ ದೇವತೆಗಳು ವಿರಾಟ್‌ಪುರುಷನನ್ನು ಪಶುವಾಗಿ ಮಾಡಿ ಯೂಪದಲ್ಲಿ ಕಟ್ಟಿದರು."

ಈ ಮಂತ್ರವು ಯಜ್ಞವನ್ನು ವಿವರಿಸಹೊರಟಿದೆ. ಯಜ್ಞವೆಂಬ ಶ್ರೌತಕರ್ಮವು ನಾನಾವಿಧವಾದ ದ್ರವ್ಯಗಳಿಂದ ಮಾಡಲ್ಪಡತಕ್ಕದ್ದೂ ಅಂಗೋಪಾಂಗಗಳಿಂದ ಕೂಡಿದುದೂ ಆಗಿದೆ. 'ಯಜ್ಞಾಧ್ಯಯನ'ವೆಂಬ ಒಂದು ವಿಶೇಷ ಅಭ್ಯಾಸವಿಭಾಗವೇ ಶ್ರೌತಕರ್ಮಗಳ ತಿಳಿವಳಿಕೆಗೇ ಮೀಸಲಾಗಿದೆ. ಆದ್ದರಿಂದ ಜನಸಾಮಾನ್ಯರಿಗಂತೂ ಈ ಯಜ್ಞಕರ್ಮದ ವಿವರವೇ ಅರ್ಥವಾಗಲಾರದು. ಆದರೂ ಇಲ್ಲಿ ನಾವು ಅದನ್ನೇ ವಿಚಾರಮಾಡಬೇಕಾಗಿರುವದರಿಂದ ಕೆಲವು ಮುಖ್ಯ ವಿವರಗಳನ್ನಾದರೂ ಮನದಟ್ಟುಮಾಡಿಕೊಳ್ಳಬೇಕಾಗಿದೆ. ಕೆಲವರು ಮೂಢರು ಯಜ್ಞವೆಂದರೆ ಒಂದು ಪ್ರಾಣಿಯನ್ನು ವಧೆಮಾಡುವ ಏರ್ಪಾಡೆಂತ ಭಾವಿಸಿದ್ದಾರೆ. ಆದರೆ ಒಂದು ಪ್ರಾಣಿಯನ್ನು ಕೊಲ್ಲುವದು ಮಾತ್ರವೇ ಯಜ್ಞದ ಉದ್ದೇಶವಾಗಿದ್ದರೆ ಇಷ್ಟೊಂದು ಸಿದ್ಧತೆಗಳೇನೂ ಆಗತ್ಯವಾಗಿರಲಿಲ್ಲ. ಈಗಿನ ಕಾಲಕ್ಕೆ ಯಾವ ಯಜ್ಞವೂ ಇಲ್ಲದೆ ಸಹಸ್ರಾರು ಸಾಕುಪ್ರಾಣಿಗಳು ಮನುಷ್ಯನ ಆಹಾರಕ್ಕಾಗಿ ನಿತ್ಯವೂ ಕೊಲ್ಲಲ್ಪಡುತ್ತಿವೆ. ಅದನ್ನು ಯಾರೂ ಆಕ್ಷೇಪಿಸುವವರೇ ಇಲ್ಲ. ಆದ್ದರಿಂದ ನಾಸ್ತಿಕರ ವಾದಕ್ಕೆ ವಿವೇಕಿಗಳು ಎಂದೂ ಕಿವಿಗೊಡಬಾರದು. ಇರಲಿ. ಪ್ರಕೃತ-ಯಜ್ಞಸಂಭಾರಗಳ ವರ್ಣನೆಯನ್ನು ತಿಳಿಯೋಣ. ಅಗ್ನಿಯಲ್ಲಿ ಹೋಮಮಾಡುವ ಮುಂಚೆ ಅಗ್ನಿಯ ಸುತ್ತಲೂ ದರ್ಭೆಗಳನ್ನು ಹರಡಿ ಕೆಲವು ಕಡ್ಡಿಗಳನ್ನು ಇಡುತ್ತಾರೆ. ಇದಕ್ಕೆ 'ಪರಿಧಿ' ಎನ್ನುವರು. ಈ ಯಜ್ಞಕಾಲಕ್ಕೆ ಇನ್ನೂ ವನಸ್ಪತಿಗಳ ಸೃಷ್ಟಿಯಾಗಿರಲಿಲ್ಲವಾದ್ದರಿಂದ ಏಳು ಛಂದಸ್ಸುಗಳನ್ನೇ ಪರಿಧಿಯಾಗಿ ಮಾಡಲಾಯಿತು. ವೇದಗಳೆಲ್ಲವೂ ಈ ಏಳು ಛಂದಸ್ಸುಗಳಲ್ಲಿ ಮಾತ್ರವೇ ಹೆಣೆಯಲ್ಪಟ್ಟಿವೆ. ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ–ಎಂಬಿವೇ

ಆ ಏಳು ಆಗಿರುತ್ತವೆ. ಆರು ಅಕ್ಷರಗಳ ಪಾದಗಳುಳ್ಳ ಛಂದಸ್ಸನ್ನು ಗಾಯತ್ರೀ ಎನ್ನುವರು. ಹೀಗೆ ಆರರಿಂದ ಹನ್ನೆರಡು ಪೂರ ಒಂದೊಂದು ಅಕ್ಷರವು ಹೆಚ್ಚಾದಂತೆ ಜಗತೀ–ವರೆಗಿನ ಛಂದಸ್ಸುಗಳಾಗುವವು. ವೇದದಲ್ಲಿರುವ ಪದ್ಯಭಾಗಸಾಹಿತ್ಯವೆಲ್ಲ ಈ ಏಳು ಛಂದಸ್ಸುಗಳಲ್ಲಿಯೇ ಅಡಕವಾಗಿರುತ್ತವೆ. "ಸಪ್ತ ರೇಭಾ ಅಭಿಸಂನವಂತೇ" ಎಂಬೀ ವೇದವಾಕ್ಯವೇ ಇದಕ್ಕೆ ಪ್ರಮಾಣವು. ಈ ಏಳು ಛಂದಸ್ಸುಗಳನ್ನೇ ದೇವತೆಗಳು ಪರಧಿಗಳಾಗಿ ಭಾವಿಸಿದರು–ಎಂದಭಿಪ್ರಾಯ.

ಈಗ ಸಮಿತ್ತುಗಳನ್ನು ವಿಚಾರಮಾಡೋಣ. ಕೆಲವೇ ಗೊತ್ತಾದ ಮರಗಳ ಒಣಗಿದ ಕಡ್ಡಿಗಳನ್ನು ವೈದಿಕರು ಸಮಿತ್ತುಗಳೆಂದು ಕರೆಯುವರು. ಎಕ್ಕ, ಮುತ್ತುಗ, ಕಗ್ಗಲಿ, ಉತ್ತರಣಿ, ಅರಳಿ, ಅತ್ತಿ, ಬನ್ನಿ, ಗರಿಕೆ, ದರ್ಭೆ–ಈ ಒಂಭತ್ತನ್ನು ಮಾತ್ರ ಸಮಿತ್ತುಗಳೆಂದು ಗೊತ್ತುಮಾಡಲಾಗಿದೆ. ಶ್ರೌತಯಜ್ಞನಲ್ಲಿ ಇಪ್ಪತ್ತೊಂದು ಸಂಖ್ಯೆಯ ಸಮಿತ್ತುಗಳು ಹೇಳಲ್ಪಟ್ಟಿವೆಯಾಗಿ ದೇವತೆಗಳು– ಚೈತ್ರವೇ ಮೊದಲಾದ ಹನ್ನೆರಡು ತಿಂಗಳುಗಳು, ವಸಂತ ಮುಂತಾದ ಐದು (ಶಿಶಿರವನ್ನು ವೈದಿಕರು ಹೇಮಂತದಲ್ಲಿಯೇ ಅಡಕಮಾಡುವರು) ಋತುಗಳು, ಮೂರು ಲೋಕಗಳು, ಸೂರ್ಯ– ಹೀಗೆ ೧೨ + ೫ + ೩ + ೧ = ತ್ತುಗಳನ್ನು ಮಾಡಿಕೊಂಡರು. ಭಾವನಾರೂಪವಾದ ಯಜ್ಞಕ್ಕೆ ಎಲ್ಲವೂ ಸಾಮಗ್ರಿಗಳಾಗಬಹುದು. 'ಕಾಮವನ್ನೇ ತುಪ್ಪವಾಗಿ ಮಾಡಿ ಕೋಪವನ್ನೇ ಪಶುವಾಗಿ ಮಾಡಿ ತಪಸ್ಸೆಂಬ ಅಗ್ನಿಯಲ್ಲಿ ಹೋಮಮಾಡಬೇಕು'–ಎಂದು ಬೇರೊಂದು ಕಡೆಯಲ್ಲಿ ಹೇಳಿರುತ್ತದೆ. ಹಾಗೆಯೇ ಇಲ್ಲಿಯೂ ತಿಳಿಯಬೇಕು. ಈ ಸಮಿತ್ತುಗಳ ಗುಂಪಿಗೇ "ಇಧ್ಮ"ವೆಂದೂ ಹೆಸರಿದೆ. ಹೀಗೆ ದೇವತೆಗಳು ಯಾವ ಯಜ್ಞವನ್ನಾರಂಭಿಸಿದರೋ ಅದಕ್ಕೆ ಮುಖ್ಯವಸ್ತುವಾದ ಪಶುವಾಗಿ ಪುರುಷನೇ ನಿಯೋಜಿಸಲ್ಪಟ್ಟನು. ಆ ವಿರಾಟ್‌ಪುರುಷನನ್ನು ಪಶುವಾಗಿ ಮಾಡಿ ಯೂಪದಲ್ಲಿ ಕಟ್ಟಿದರು. ಯಜ್ಞದಲ್ಲಿ ಪಶುವನ್ನು ಕಟ್ಟುವ ಗೂಟವನ್ನು "ಯೂಪ"ವೆಂದು ಕರೆಯುತ್ತಾರೆ.

ಇಲ್ಲಿ "ದೇವಾ ಯಜ್ಞಮತನ್ವತ"– ಎಂಬಿದನ್ನು ಸ್ವಲ್ಪ ವಿಚಾರಮಾಡೋಣ. ದೇವತೆಗಳೆಂದರೆ ಬ್ರಹ್ಮನ ಮಾನಸಪುತ್ರರಾಗಿ ಸೃಷ್ಟಿಯ

ಆದಿಯಲ್ಲಿ ಹೊರಬಂದ ಮರೀಚಿ ಪುಲಸ್ತ್ಯಾದಿಗಳು, ಪ್ರಜಾಪತಿಯ ಶರೀರ ದೊಳಗೆ ಸಂಚರಿಸುವ ಮುಖ್ಯಪ್ರಾಣ, ಇಂದ್ರಿಯಾಭಿಮಾನಿದೇವತೆಗಳು– ಇವರುಗಳನ್ನೆಲ್ಲ ಹೆಸರಿಸಬಹುದಾಗಿದೆ. ದೇವತೆಗಳು ಮಾನಸಿಕವಾದ ಯಜ್ಞವನ್ನು ಮಾಡಿದರೆಂದು ಅರ್ಥಮಾಡುವಾಗ ದೇವತೆಗಳೆಂದರೆ ಜ್ಞಾನಿಗಳು–ಎಂದೂ ಅಭಿಪ್ರಾಯಪಡಬಹುದಾಗಿದೆ. ಆಗ ಅಂಥ ಜ್ಞಾನಿಗಳು ರುದ್ರನನ್ನು ಪಶುವಾಗಿ ಮಾಡಿಕೊಂಡು ನಾರಾಯಣನ ಪ್ರೀತ್ಯರ್ಥವಾಗಿ ಪುರುಷಮೇಧವೆಂಬ ಪ್ರಸಿದ್ಧವಾದ ಯಜ್ಞವನ್ನು ಮಾಡಿದರು– ಎಂದು ಕೆಲವರು ವೈಷ್ಣವರು ಇಲ್ಲಿ ಅರ್ಥಮಾಡುತ್ತಾರೆ. ಇದನ್ನೂ ಒಪ್ಪಬಹುದು. ರುದ್ರನು ಕೋಪಕ್ಕೆ ಪ್ರತಿನಿಧಿಯೆಂದು ಭಾವಿಸಿದಾಗ ಕೋಪವನ್ನು ಜ್ಞಾನಿಗಳು ಗೆದ್ದರು– ಎಂದು ಈ ಯಜ್ಞವರ್ಣನೆಯ ವಿಷಯಕ್ಕೆ ಅಭಿಪ್ರಾಯ ಪಡಬಹುದಾಗಿದೆ. ಇರಲಿ. ಇನ್ನು ವಸಂತ, ಗ್ರೀಷ್ಮ, ಶರದ್-ಋತುಗಳನ್ನು ಯಜ್ಞಾಂಗಸಂಭಾರಗಳಾಗಿ ದೇವತೆಗಳು ಸ್ವೀಕರಿಸಿರುವದರಲ್ಲಿಯೂ ಒಂದು ವೈಶಿಷ್ಟ್ಯವಿದೆ. ಈ ಮೂರು ಋತುಗಳೂ ತ್ರೈವರ್ಣಿಕರಿಗೆ ಕ್ರಮವಾಗಿ ಯಜ್ಞಮಾಡಲು ಪ್ರಶಸ್ತಕಾಲಗಳೆಂತ ಪರಿಗಣಿಸಲ್ಪಟ್ಟವೆ. ಹೇಗೆಂದರೆ : ವೇದದಲ್ಲಿ ಹೇಳಿರುವಂತೆ ಬ್ರಾಹ್ಮಣನು ವಸಂತಕಾಲದಲ್ಲಿಯೂ ಕ್ಷತ್ರಿಯನು ಗ್ರೀಷ್ಮಕಾಲದಲ್ಲಿಯೂ ವೈಶ್ಯನು ಶರತ್ಕಾಲದಲ್ಲಿಯೂ ಅಗ್ನ್ಯಾಧಾನ ಮಾಡಬೇಕೆಂದು ತಿಳಿದುಬರುತ್ತದೆ. ಆದ್ದರಿಂದ ಈ ಮೂರು ಋತುಗಳೂ ದೇವತೆಗಳು ಕೈಗೊಂಡ ಯಜ್ಞದಲ್ಲಿ ಸಂಭಾರಗಳಾಗಿ ವಿನಿಯೋಗಿಸಲ್ಪಟ್ಟದ್ದು ಅರ್ಥಪೂರ್ಣವಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರುಗಳು ಯಜ್ಞಾಧಿಕಾರ ವುಳ್ಳವರೆಂದು ಇದರಿಂದ ಸಿದ್ಧವಾಗುತ್ತದೆ. ದೇವತೆಗಳಿಗೂ ಈ ತ್ರೈವರ್ಣಿಕರಿಗೂ ಮುಂದೆ ಸೃಷ್ಟಿಯಲ್ಲಿ ಯಜ್ಞದ ಮೂಲಕವೇ ನಿಕಟಸಂಬಂಧವೇರ್ಪಟ್ಟದ್ದು ಅದೇ ಜಗತ್ತಿನ ಕ್ಷೇಮಕ್ಕೆ ಕಾರಣವಾಗಿರುತ್ತದೆ. ಯಜ್ಞಾಧಿಕಾರವು ತ್ರೈವರ್ಣಿಕರಿಗೆ ಮೀಸಲಾದರೂ ಯಜ್ಞದ ಫಲವು ಸರ್ವರಿಗೂ ಉಂಟೇ ಉಂಟು. ಅಧಿಕಾರಿಗಳ ಮೂಲಕ ಸರ್ಕಾರದವರು ಒದಗಿಸುವ ಸೌಕರ್ಯಗಳ ಪ್ರಯೋಜನವು ಸಾರ್ವಜನಿಕರಿಗೆಲ್ಲ ಹೇಗೆ ಸಮಾನವೋ– ಹಾಗೆ ಎಂದು ಇಲ್ಲಿಯೂ ತಿಳಿಯಬೇಕು.

ಈಗ ಪುರುಷಸೂಕ್ತದ ಎಂಟನೆಯ ಋಕ್ಕನ್ನು ವಿಚಾರಮಾಡೋಣ.

**ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ । ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜನ್ತ । ಸಾಧ್ಯಾ ಋಷಯಶ್ಚ ಯೇ ॥೮॥**

'ಮೊದಲು ಉಂಟಾದವನಾದ ಆ ವಿರಾಟ್‌ಪುರುಷನನ್ನು ಯಜ್ಞದಲ್ಲಿ ಪ್ರೋಕ್ಷಿಸಿದರು. ಸಾಧ್ಯರೂ ಋಷಿಗಳೂ ಆದ ದೇವತೆಗಳು ಅವನಿಂದ (ದ್ರವ್ಯದಿಂದ) ಹೋಮಮಾಡಿದರು.'

ಈ ಮಂತ್ರದಲ್ಲಿಯೂ ಯಜ್ಞದ ವಿವರವನ್ನು ಕೊಡಲಾಗಿದೆ. ಯಜ್ಞಕ್ಕೆ ಉಪಯೋಗಿಸುವ ವಸ್ತುವು ಪರಿಶುದ್ಧವಾಗಿಯೂ ಉತ್ತಮವಾದುದಾಗಿಯೂ ಇರಬೇಕು. ಆದ್ದರಿಂದಲೇ ಧರ್ಮದಿಂದ ಸಂಪಾದಿಸಿದ ವಸ್ತುಗಳು ಮಾತ್ರವೇ ಯಜ್ಞಕ್ಕೆ ದೊರಕಲು ಸಾಧ್ಯ. ಈಗಿನ ಕಾಲದಲ್ಲಿ ಬೇಕಾದಷ್ಟು ಐಶ್ವರ್ಯವುಳ್ಳವರು ಕೆಲವರಿದ್ದಾರೆ. ಆದರೆ ಅವರೆಲ್ಲರಿಗೂ ಯಜ್ಞಕ್ಕೆ ಧನವನ್ನು ವಿನಿಯೋಗಿಸುವ ಬುದ್ಧಿಯಿರುವದಿಲ್ಲ. ಕೆಲವರು ಕೃಪಣರೇ ಆಗಿದ್ದು ಹಣವನ್ನು ಸಂಗ್ರಹಿಸುವದರಲ್ಲಿಯೇ ಜೀವನವನ್ನು ಕಳೆಯುವರು. ಮತ್ತೆ ಕೆಲವರು ದುರ್ವಿನಿಯೋಗಕ್ಕೆ ಹೆಚ್ಚಾಗಿ ಹಣವನ್ನು ಸುರಿಯುವರು. ಏಕೆಂದರೆ ಈ ಧನಗಳೆಲ್ಲವನ್ನೂ ಅವರು ನ್ಯಾಯದಿಂದ ಸಂಪಾದಿಸಿರುವದಿಲ್ಲ. ಐಶ್ವರ್ಯವಂತರಾದರೂ ಔದಾರ್ಯವೂ ಧಾರ್ಮಿಕ ಬುದ್ಧಿಯೂ ಕೆಲವರಿಗೆ ಏಕೆ ಇರುವದಿಲ್ಲವೆಂಬುದಕ್ಕೆ ಇದೇ ಕಾರಣವಾಗಿರುತ್ತದೆ. ಆದ್ದರಿಂಥ ನಾವು ನ್ಯಾಯವಾಗಿ ಸಂಪಾದಿಸಿದ್ದಾದರೆ ಮಾತ್ರ ನ್ಯಾಯವಾಗಿ–ಧಾರ್ಮಿಕವಾಗಿ ವಿನಿಯೋಗಮಾಡಲು ಪ್ರೇರಣೆಯುಂಟಾಗುತ್ತದೆ. ಇದೇ ದ್ರವ್ಯಶುದ್ಧಿಯು; ಇರಲಿ. ಈ ಯಜ್ಞದಲ್ಲಿ ಭಾಗವಹಿಸಿದ್ದ ಸಾಧ್ಯರು, ಋಷಿಗಳೆಂಬ ದೇವತೆಗಳು ಯಜ್ಞಪಶುವನ್ನು ಪ್ರೋಕ್ಷಿಸಿ ಶುದ್ಧಿಗೊಳಿಸಿದರು. ಎಂಥ ಪವಿತ್ರವಾದ ದ್ರವ್ಯವಾದರೂ ಯಜ್ಞಕ್ಕೆ ವಿನಿಯೋಗಿಸುವಾಗ ಮಂತ್ರಗಳಿಂದ ಶುದ್ಧೀಕರಿಸಲ್ಪಡಬೇಕು. ಇಲ್ಲದಿದ್ದರೆ ಅದು ಯಜ್ಞಪುರುಷನಿಗೆ ಮುಟ್ಟಲಾರದು. ಯಜ್ಞವೆಂಬ ಶಬ್ದವನ್ನು ವಿಶಾಲವಾದ ಅರ್ಥದಲ್ಲಿ ದಾನ, ಪೂಜೆ, ಸತ್ಕಾರಗಳೆಂಬ ಕರ್ಮಗಳಿಗೂ ಅನ್ವಯಿಸಿದರೆ ನಾವು ಕೊಡುವ ದಾನವಸ್ತುಗಳು, ಪೂಜಾಸಾಮಗ್ರಿಗಳು, ಸಂತರ್ಪಣೆಗೆ ವಿನಿಯೋಗಿಸುವ ಆಹಾರಪದಾರ್ಥಗಳು–ಎಲ್ಲವೂ ಉತ್ಕೃಷ್ಟವಾದದ್ದೇ ಆಗಿರಬೇಕು–ಎಂದಾಗುವದು. ಆದರೂ ದಾನದ ಪಂಚೆ, ದಾನದ ಪಾತ್ರೆ, ಕರ್ಚಿ

ವಿಳ್ಳೆದೆಲೆ, ಅಡಿಕೆ, ಚಿಲ್ಲರೆ ದುಡ್ಡು-ಇತ್ಯಾದಿ ರೀತಿಯಲ್ಲಿ ನಾವು ಮಾಡು ತ್ತಿರುವ ಅಲ್ಪಸ್ವಲ್ಪ ದೇವಪಿತೃಯಜ್ಞಗಳಲ್ಲಿಯೂ ಏತಕ್ಕೂ ಬೇಡದ ನಿಕೃಷ್ಟ ವಾದ ಅಗ್ಗವಾದ ವಸ್ತುಗಳನ್ನು ಉಪಯೋಗಿಸುವೆವು. ಇದು ಖಂಡಿತ ತಪ್ಪು. ಯಾವಾಗಲೂ ದೇವತೆಗಳಿಗೂ ಬ್ರಾಹ್ಮಣರಿಗೂ ಅರ್ಪಿಸಲ್ಪಡುವ ಪದಾರ್ಥಗಳು ಕಡೆಯಪಕ್ಷ ನಾವು ಉಪಯೋಗಿಸುವದಕ್ಕಿಂತ ಕಡಿಮೆ ಗುಣ ಮಟ್ಟದ್ದಾಗಿರಬಾರದು. ಇನ್ನೂ ಹೆಚ್ಚು ಬೆಲೆಬಾಳತಕ್ಕದ್ದಾಗಿದ್ದರಂತೂ ಒಳ್ಳೆಯದೇ ಆದೀತು. ಕನ್ಯಾದಾನಮಾಡುವವನು ಅಳಿಯನನ್ನು ದೇವರಂತ ಭಾವಿಸಿ ಪೂಜಿಸಿ ಅವನಿಗೆ ಕನ್ಯೆಯ ಜೊತೆಗೆ ಇನ್ನೂ ಕೆಲವು ಉತ್ಕೃಷ್ಟ ವಸ್ತುಗಳನ್ನು ಕೊಡುವದು ಪ್ರಸಿದ್ಧವಾಗಿದೆ. ದಾನಕ್ಕೆ ಇದೊಂದು ಉದಾ ಹರಣೆ. ಎಲ್ಲಾ ದಾನಗಳೂ ಹೀಗೆಯೇ ಇರಬೇಕು. ಇರಲಿ. ಈ ಯಜ್ಞ ದ್ರವ್ಯಗಳು ಯಾವದೇ ಆದರೂ ಮಂತ್ರಗಳಿಂದ ಶುದ್ಧೀಕರಿಸಲ್ಪಡಬೇಕು. ಆಗಲೇ ಅದು 'ಹವಿರ್ಯೋಗ್ಯ'ವಾಗುವವು. ದೇವತೆಗಳು ಈ ರೀತಿಯಾಗಿ ಪುರುಷನನ್ನು ಪ್ರೋಕ್ಷಿಸಿದರು. ಪುರುಷನು ಪ್ರಥಮಜನಾಗಿದ್ದು ಪವಿತ್ರನೇ ಆಗಿದ್ದನು. ಆದರೂ ಮಂತ್ರಪೂತನನ್ನಾಗಿ ಮತ್ತೆ ಮಾಡಿದರು. "ಪೂತಂ ಬ್ರಹ್ಮ ಪುನೀಮಹೇ' (ಪವಿತ್ರವೇ ಆಗಿರುವದನ್ನು ಮತ್ತೆ ಮಂತ್ರದಿಂದ ಪವಿತ್ರಗೊಳಿಸುವೆವು) ಎಂಬ ಶ್ರುತಿಯೂ ಇದಕ್ಕೆ ಪ್ರಮಾಣ.

ಇಲ್ಲಿ ಸಾಧ್ಯರು, ಋಷಿಗಳು- ಎಂಬುವರ ಪ್ರಸ್ತಾಪವಿರುವದರಿಂದ ಸಾಧ್ಯರೆಂದರೆ ಕರ್ಮವನ್ನು ಮಾಡಿ ಸಿದ್ಧಿಯನ್ನು ಪಡೆಯಬೇಕಾದ ವರ್ಗದ ಅಧಿಕಾರಿಗಳು- ಎಂದೂ ಅರ್ಥಮಾಡಬಹುದು. ಆಗ ದ್ರವ್ಯಯಜ್ಞಕ್ಕೆ ನಾವು ಹೆಚ್ಚು ಒಲವನ್ನು ತೋರಿಸಬೇಕಾಗುತ್ತದೆ. ಆದರೆ ಋಷಿಗಳೆಂಬ ಶಬ್ದವಿದೆಯಾದ್ದರಿಂದ ಮಂತ್ರದ್ರಷ್ಟಾರರಾದ ಋಷಿಗಳು ತಮ್ಮ ಮಂತ್ರ ಪ್ರಭಾವದಿಂದ ಸಾಮಗ್ರಿಗಳನ್ನು ಯಜ್ಞಾರ್ಹವಾಗಿ ಮಾಡಿಕೊಂಡು ಯಜ್ಞ ಮಾಡಿದರು-ಎಂಬರ್ಥವೂ ಕಂಡುಬರುತ್ತದೆ. ಋಷಿಗಳಲ್ಲಿ ದ್ರವ್ಯಯಜ್ಞರು ತಪೋಯಜ್ಞರು, ಧ್ಯಾನಯಜ್ಞರು-ಮುಂತಾಗಿ ನಾನಾವಿಧವಾದ ಯಜ್ಞಗಳ ಅನುಷ್ಠಾತೃಗಳೂ ಇರುತ್ತಾರೆ. ಆದ್ದರಿಂದ ಕರ್ಮ-ಹಾಗೂ ಉಪಾಸನೆ ಗಳೆರಡನ್ನೂ ಇಲ್ಲಿ ಸ್ವೀಕರಿಸಬೇಕು. ಉಪಾಸನೆಗೆ ದ್ರವ್ಯಶುದ್ಧಿಯೆಂದರೆ

ಆಧ್ಯಾತ್ಮವಾದ ಶರೀರೇಂದ್ರಿಯಮನೋಬುದ್ಧಿಗಳ ಶುದ್ಧಿಯನ್ನೂ ಗ್ರಹಿಸ ಬೇಕು. ಹೀಗೆ ದೇವತೆಗಳು ಕೈಗೊಂಡ ಯಜ್ಞವು ವಿರಾಟ್‌ಪುರುಷನೆಂಬ ಪಶುವಿನ ಅರ್ಪಣೆಯ ಮೂಲಕ ಮುಂದುವರೆಯಿತು. ಇದರ ಫಲವನ್ನು ಕುರಿತು ಮುಂದಿನ ಮಂತ್ರಗಳಲ್ಲಿ ತಿಳಿಸಲಾಗುವದು.

---

## ೭. ಋಚಃ ಸಾಮಾನಿ ಜಜ್ಞಿರೇ

ಪುರುಷಸೂಕ್ತದ ಒಂಭತ್ತನೆಯ ಋಕ್ಕನ್ನು ಈಗ ವಿಚಾರಮಾಡ ಬೇಕಾಗಿದೆ. ಅದು ಹೀಗಿದೆ :

ತಸ್ಮಾದ್ಯಜ್ಞಾತ್ ಸರ್ವಹುತಃ ।
ಸಂಭೃತಂ ಪೃಷದಾಜ್ಯಮ್ ।
ಪಶೂಗ್‌ಂಸ್ತಾಗ್‌ಶ್ಚಕ್ರೇ ವಾಯವ್ಯಾನ್ ।
ಆರಣ್ಯಾನ್ ಗ್ರಾಮ್ಯಾಶ್ಚ ಯೇ ॥

"ಸರ್ವಹುತನಾದ ಆ ಯಜ್ಞದಲ್ಲಿ ಪೃಷದಾಜ್ಯವು (ಜಗತ್ಕಾರಣಭೂತ ವಾದ ವೀರ್ಯವು) ಉಂಟಾಯಿತು. ವಾಯುಸಂಚಾರಿಗಳಾದ ಪಕ್ಷಿಗಳನ್ನೂ ಗ್ರಾಮ್ಯಾರಣ್ಯಪಶುಗಳನ್ನೂ ಸೃಷ್ಟಿಸಲಾಯಿತು."

ಈ ಮಂತ್ರದಲ್ಲಿ ದೇವತೆಗಳು ಕೈಗೊಂಡ ಯಜ್ಞದ ಫಲವಾಗಿ ಉಂಟಾದ ಜಗತ್‌ಸೃಷ್ಟಿಯನ್ನು ವರ್ಣಿಸಲಾಗಿದೆ. ಸರ್ವಹುತವೆಂಬ ಯಜ್ಞವು ಪರ ಮಾತ್ಮನ ಆರಾಧನಾರೂಪವಾದದ್ದು. ಯಾವ ಯಜ್ಞದಲ್ಲಿ ಎಲ್ಲವನ್ನೂ ಯಜ್ಞನೆಂಬ ಹೆಸರಿನ ಪರಮಾತ್ಮನಿಗೆ ಅರ್ಪಿಸಲಾಗುವದೋ ಅದು ಸರ್ವ ಹುತವು. ಇದರ ಫಲವೇನೆಂದರೆ : ನೀರಿನಲ್ಲಿ ಒಂದು ಹನಿ ಎಣ್ಣೆಯನ್ನು ಹಾಕಿದರೆ ಅದು ನೀರನ್ನೇ ಹರಡಿಕೊಳ್ಳುವಂತೆ ಭಗವದರ್ಪಿತವಾದ ದ್ರವ್ಯವು ಇಡಿಯ ಜಗತ್ತಿನ ಸೃಷ್ಟಿಗೇ ಕಾರಣವಾದ ವೀರ್ಯವಾಗಿ ಪರಿಣಮಿಸಿತು. ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಸ್ಸುಗಳೆಂಬ ಷಡ್ಗುಣೈಶ್ವರ್ಯಗಳಿಂದ ಸಂಪನ್ನನಾದ ಭಗವಂತನ ಸತ್ಯಸಂಕಲ್ಪವೇ ಈ ವೀರ್ಯದ ಆವಿರ್ಭಾವವು. ಇದು ಚೇತನಾಚೇತನಾತ್ಮಕವಾದ ಪ್ರಪಂಚಕ್ಕೆಲ್ಲ ಬೀಜವಾಗಿರುವದು. ವೈದಿಕಭಾಷೆಯಲ್ಲಿ 'ಪೃಷದಾಜ್ಯ'ವೆಂದು ಇದನ್ನು ಹೆಸರಿಸಿರುತ್ತಾರೆ.

ಮೊಸರಿನೊಡನೆ ಸೇರಿದ ತುಪ್ಪದಂತಿರುವದರಿಂದ ಈ ವೀರ್ಯವನ್ನು ಹಾಗೆ ಕರೆಯಲಾಗಿದೆ. ಇದರಿಂದ ಮುಂದೆ ಅಂಡಜಗಳಾದ ಪಕ್ಷಿಗಳು ಮೊದಲು ಉಂಟಾದವು. ಅನಂತರ ಆರಣ್ಯಪಶುಗಳೂ ಗ್ರಾಮ್ಯಪಶುಗಳೂ ಉಂಟಾದವು. ವೇದದಲ್ಲಿ ಬಹಳಕಡೆ ಸೃಷ್ಟಿವಿಚಾರವು ಪ್ರಸ್ತಾಪಿಸಲ್ಪಡುತ್ತದೆ. ಒಂದೊಂದು ಕಡೆ ಒಂದೊಂದು ರೀತಿಯ ವರ್ಣನೆಯಿರುತ್ತದೆ. ಆದ್ದರಿಂದ ವೇದಕ್ಕೆ ಸೃಷ್ಟಿಯನ್ನು ಪ್ರತಿಪಾದಿಸುವದರಲ್ಲಿ ಪರಮತಾತ್ಪರ್ಯವು ಇರುವದಿಲ್ಲ. ಮತ್ತೇನೆಂದರೆ 'ತಸ್ಮಾತ್' ಎಂದು ಬಹಳಸಲ ಪುನರುಕ್ತವಾಗಿರುವ ತಚ್ಛಬ್ದದಲ್ಲಿಯೇ ವೇದದ ತಾತ್ಪರ್ಯವು ನೆಲಸಿದೆ. 'ಆ ಪರಮಾತ್ಮನಿಂದಲೇ ಎಲ್ಲವೂ ಉಂಟಾಯಿತು' ಎಂಬಲ್ಲಿ 'ಉಂಟಾಯಿತು' ಎಂಬುದಕ್ಕಿಂತಲೂ 'ಆ ಪರಮಾತ್ಮನಿಂದಲೇ' ಎಂಬುದರಲ್ಲಿಯೇ ಹೆಚ್ಚಿನ ಅವಧಾರಣೆಯಿರುತ್ತದೆ. 'ಸರ್ವಂ ವಾಕ್ಯಂ ಸಾವಧಾರಣಮ್' ಎಂಬ ನ್ಯಾಯದಂತೆ ಇಲ್ಲಿ ವೇದದ ತಾತ್ಪರ್ಯವನ್ನು "ಭಗವಂತನ ಸ್ವರೂಪಪ್ರತಿಪಾದನೆಗೆ ಉಪಾಯವಾಗಿ ಮಾತ್ರವೇ ಸೃಷ್ಟಿವಿಚಾರವು ಪ್ರಸ್ತಾಪಿಸಲ್ಪಟ್ಟಿದೆ" ಎಂದೇ ತಿಳಿಯಬೇಕು. ಆದ್ದರಿಂದ ಇನ್ನುಮುಂದೆ 'ತಸ್ಮಾತ್' ಎಂಬ ಕೇಂದ್ರವನ್ನು ನೆನಪಿಟ್ಟುಕೊಳ್ಳಬೇಕು.

ಈಗ ಪಶುಗಳ ಸೃಷ್ಟಿಯನ್ನು ವಿಚಾರಮಾಡೋಣ. ಜಗತ್ತಿನಲ್ಲಿರುವ ಪ್ರಾಣಿಗಳನ್ನೆಲ್ಲ-ಅವು ನಾಲ್ಕುಕಾಲಿನವಾಗಿರಲಿ, ಎರಡು ಕಾಲಿನವಾಗಿರಲಿ-ಎಲ್ಲವನ್ನೂ ಪಶುಗಳೆಂದೇ ವೇದದಲ್ಲಿ ವ್ಯವಹರಿಸಲಾಗಿದೆ. "**ತಸ್ಮಾನ್ನಾನಾರೂಪಾಃ ಪಶವಃ । ಬಹುರೂಪಾ ಭವಂತಿ ।**" ಎಂದೂ ವೇದದಲ್ಲಿ ಮತ್ತೊಂದು ಕಡೆಯಲ್ಲಿ ವರ್ಣಿಸಿರುತ್ತದೆ. ಹೀಗೆ ಸೃಷ್ಟವಾದ ಪಶುಗಳಲ್ಲಿ ವಾಯವ್ಯಗಳು ಎಂದರೆ ವಾಯುವಿನಲ್ಲಿ ಸಂಚರಿಸುವ ಹಕ್ಕಿಗಳು ಮೊದಲುಂಟಾದವು. ಅಥವಾ ಪಶುಗಳಿಗೆಲ್ಲ ವಾಯುವೇ ದೇವತೆಯೆಂದು ಪ್ರಸಿದ್ಧವಾಗಿರುವದರಿಂದ ವಾಯುವ್ಯಶಬ್ದವನ್ನು ಪಶು ಎಂಬ ಶಬ್ದಕ್ಕೆ ವಿಶೇಷಣವಾಗಿಯೂ ಸೇರಿಸಿ ಅರ್ಥಮಾಡಬಹುದು. ಆಗ ಆರಣ್ಯಗ್ರಾಮ್ಯಗಳೆಂಬಿವು ಪಶುಶಬ್ದದ ವಿವರಣೆಯೆಂದಾಗುವದು. ಹೇಗೆ ಇರಲಿ-ವಾಚ್ಯವಾಗಿ ಹೇಳದೆ ಇದ್ದರೂ ಪಶು ಎಂಬುದರಿಂದ ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ್ಜಗಳೆಂಬ ಚತುರ್ವಿಧಭೂತಗ್ರಾಮಗಳನ್ನೂ ಸ್ವೀಕರಿಸಬಹುದಾಗಿದೆ. ಜಲಚರ

ಪ್ರಾಣಿಗಳಿಗಿಂತ ಜಲ- ಹಾಗೂ ಸ್ಥಲಚರ ಪ್ರಾಣಿಗಳು ಶ್ರೇಷ್ಠವೆಂದೂ ಅವಕ್ಕಿಂತ ಚತುಷ್ಪಾದಗಳೂ ಅವುಗಳಿಗಿಂತ ದ್ವಿಪಾತ್ ಪ್ರಾಣಿಗಳೂ ಶ್ರೇಷ್ಠ ವೆಂದೂ, ಹೀಗೆ ಸೃಷ್ಟಿಯು ಮುಂದುವರಿದಂತೆಲ್ಲ ಹೆಚ್ಚುಹೆಚ್ಚಾಗಿ ಸುಧಾರಿ ಸುತ್ತಾ ಹೋಗಿದೆಯೆಂದೂ ಹೇಳಬಹುದಾಗಿದೆ. ಇದು ವಿಕಾಸವಾದಕ್ಕೂ ಅವಕಾಶವನ್ನು ಕೊಡುತ್ತದೆ. ಆದರೆ ನಾನು ಮೊದಲೇ ತಿಳಿಸಿರುವಂತೆ ವೇದದ ತಾತ್ಪರ್ಯವು ಸೃಷ್ಟಿಯನ್ನು ನಿಜವೆಂದು ಹೇಳುವದರಲಿಲ್ಲವಾದ್ದ ರಿಂದ ಈ ಚರ್ಚೆಗಳು ಅನವಶ್ಯಕ. ಪ್ರಕೃತ, ಪಕ್ಷಿಗಳಿಂದಾರಂಭಿಸಿ ಆರಣ್ಯ-ಗ್ರಾಮ್ಯಪಶುಗಳ ಸೃಷ್ಟಿಯೆಲ್ಲವೂ ಯಜ್ಞದ ಫಲವಾಗಿ ಹೊರಬಂದಿತು-ಎಂದಭಿಪ್ರಾಯವು. ಆರಣ್ಯಗಳೆಂದರೆ ಅರಣ್ಯದಲ್ಲಿ ಮಾತ್ರ ವಾಸಿಸುವ ಹುಲಿ, ಕರಡಿ, ತೋಳ, ನರಿ-ಮುಂತಾದವು. ಮಾನವನಿಗೆ ಇವುಗಳ ಸೃಷ್ಟಿಯ ಪೂರ್ಣಪ್ರಯೋಜನವು ತಿಳಿಯದೆ ಇರಬಹುದು. ಆದರೆ ಜಗದ್ವೈಚಿತ್ರ್ಯ ವನ್ನೂ ಜೀವರ ಕರ್ಮಫಲಗಳನ್ನೂ ನೆನೆದಾಗ ಈ ವಿವಿಧ ಸೃಷ್ಟಿಯ ಪ್ರಯೋಜನವು ಮನದಟ್ಟಾಗುವದು. ಗರುಡಪುರಾಣದಲ್ಲಿ ಇಂಥಿಂಥ ಪಾಪಶೇಷದಿಂದ ಜೀವನು ಇಂಥಿಂಥ ಪ್ರಾಣಿಯಾಗಿ ಹುಟ್ಟುವನೆಂಬ ವಿವರಣೆ ಯಿರುತ್ತದೆ. ಹೀಗೆ ಸೃಷ್ಟಿವೈಚಿತ್ರ್ಯಕ್ಕೆ ಅವಾಂತರತಾತ್ಪರ್ಯವೂ ಇರು ತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಭಗವಂತನ ಜಾಣತನ, ಕೌಶಲ, ಆತನು ಜೀವರನ್ನು ಕರ್ಮಾನುಗುಣವಾದ ಫಲದಲ್ಲಿ ತೊಡಗಿಸುವಿಕೆ, ಆಯಾ ಪ್ರಾಣಿಗಳಿಗೇ ಅಸಾಧಾರಣವಾದ ಶರೀರರಚನೆ, ಗುಣಗಳು, ರೂಪಲಾವಣ್ಯ ಗಳು, ಹಿಂಸ್ರಮೃದುಸ್ವಭಾವಗಳೇ ಮುಂತಾದ ತಾರತಮ್ಯಗಳು, ಇವು ಗಳನ್ನು ನಿಯತವಾಗಿ ಗೊತ್ತುಪಡಿಸಿರುವಿಕೆ, ಇದರಿಂದ ಆತನ ಸರ್ವಜ್ಞತ್ವ, ಸರ್ವವಿತ್ತ್ವ, ಸರ್ವಶಕ್ತಿತ್ವಗಳು-ಈ ಎಲ್ಲವೂ ನಮಗೆ ಪರಿಚಯವಾಗಲಿವೆ. ಈ ರೀತಿಯಾಗಿ ಜಗತ್ಸೃಷ್ಟಿಯ ಚಿಂತನೆಯು ಭಗವಂತನ ವಿರಾಡ್ರೂಪದ ಅನುಸಂಧಾನಕ್ಕೇ ಸಾಧನವಾಗಿರುತ್ತದೆ.

ಈಗ ಹತ್ತನೆಯ ಮಂತ್ರವನ್ನು ನೋಡೋಣ :—

**ತಸ್ಮಾದ್ಯಜ್ಞಾತ್ ಸರ್ವಹುತಃ । ಋಚಃ ಸಾಮಾನಿ ಜಜ್ಞಿರೇ ॥**
**ಛಂದಾಗ್ಂಸಿ ಜಜ್ಞಿರೇ ತಸ್ಮಾತ್ । ಯಜುಸ್ತಸ್ಮಾದಜಾಯತ ॥**

"ಸರ್ವಹುತವಾದ ಆ ಯಜ್ಞದ ಫಲವಾಗಿ ಋಕ್ಕುಗಳೂ ಸಾಮಗಳೂ ಛಂದಸ್ಸುಗಳೂ ಹುಟ್ಟಿದವು. ಯಜುಸ್ಸೂ ಆದರಿಂದಲೇ ಹುಟ್ಟಿತು."

ಈ ಮಂತ್ರದಲ್ಲಿ ಸೃಷ್ಟಿಯ ವಿವರವನ್ನು ಮುಂದುವರೆಸಿ ಉತ್ಕೃಷ್ಟವಾದ ವೇದಗಳೇ ಮುಂತಾದ ವಾಙ್ಮಯಗಳು ಈ ಯಜ್ಞದಿಂದ ಹುಟ್ಟಿದವೆಂಬುದನ್ನು ತಿಳಿಸಲಾಗಿದೆ. ಯಜ್ಞವೆಂಬ ಹೆಸರೂ ವೇದವೆಂಬ ಹೆಸರೂ ಮುಖ್ಯಾರ್ಥದಲ್ಲಿ ಭಗವಂತನಿಗೇ ಹೊಂದುತ್ತವೆ. ಆದ್ದರಿಂದ ವೇದಗಳಿಗೆ ಒಂದು ದೃಷ್ಟಿಯಿಂದ ಹುಟ್ಟು ಇರುವದಿಲ್ಲ, ಅವು ನಿತ್ಯವಾದವುಗಳು. ಆದರೆ ಪ್ರಲಯಕಾಲದಲ್ಲಿ ಅವ್ಯಕ್ತವಾಗಿದ್ದ ವೇದಗಳು ಸೃಷ್ಟಿಕಾಲದಲ್ಲಿ ಭಗವಂತನಿಂದಲೇ ಹೊರಬೀಳುವವು. ಇದನ್ನೇ ವೇದಗಳ ಸೃಷ್ಟಿ ಎಂದು ಕರೆಯಬಹುದು. ಚತುರ್ಮುಖಬ್ರಹ್ಮನ ಮೂಲಕ ಸೃಷ್ಟಿಯ ಆದಿಯಲ್ಲಿ ಪರಮಾತ್ಮನು ವೇದಗಳನ್ನು ಹೊರಪಡಿಸುತ್ತಾನೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ತಿಳಿಸಿದೆ. ಹೀಗೆ ಹೊರಬಂದ ವೇದಗಳು, ಋಕ್ಕು, ಯಜಸ್ಸು, ಸಾಮಗಳೆಂದು ವಿಂಗಡವಾಗಿವೆ. ವೇದಗಳು ಛಂದಸ್ಸಿನ ನಿಯಮಕ್ಕೆ ಒಳಪಟ್ಟಿರುವವಾದ್ದರಿಂದ ವೇದಗಳೊಡನೆಯೇ ಛಂದಸ್ಸುಗಳೂ ಹುಟ್ಟಿದವು ಎಂದು ಇಲ್ಲಿ ತಿಳಿಸಲಾಗಿದೆ.

ಸೃಷ್ಟಿಯಲ್ಲಿ ವೇದಗಳ ಸೃಷ್ಟಿಯಾದದ್ದು ಒಂದು ಮಹತ್ತ್ವದ ಘಟನೆ-ಎಂದು ತಿಳಿಯಬೇಕು. ಏಕೆಂದರೆ ವೇದಗಳಲ್ಲಿ ಅಡಕವಾಗಿರುವ ಜ್ಞಾನರಾಶಿಯು ಜಗತ್ತಿನ ಬದುಕಿಗೇ ಆಧಾರವಾಗಿರುತ್ತದೆ. ಕತ್ತಲೆಯಲ್ಲಿ ಹೇಗೆ ಮನುಷ್ಯನು ಏನನ್ನೂ ಮಾಡಲಾರನೋ ಹಾಗೆ ಜ್ಞಾನವಿಲ್ಲದಿದ್ದರೆ ಮಾನವನ ಪ್ರಗತಿಯು ಅಸಾಧ್ಯವೇ ಸರಿ. ವೇದಗಳು ಇಂಥ ಜ್ಞಾನದೀಪಗಳಾಗಿದ್ದು ಮಾನವನಿಗೆ ಪುರುಷಾರ್ಥಗಳನ್ನು ವಿಂಗಡಿಸಿಕೊಟ್ಟು ಅವುಗಳ ಪ್ರಾಪ್ತಿಗೆ ತಕ್ಕ ಸಾಧನಗಳನ್ನೂ ತಿಳಿಸಿಕೊಟ್ಟಿರುತ್ತವೆ. ಅಷ್ಟೇ ಅಲ್ಲ. ವ್ಯಾವಹಾರಿಕವಾದ ಪ್ರಯೋಜನಗಳನ್ನೂ ಮನುಷ್ಯನ ಕಾಮಗಳ ಪರಿಪೂರ್ತಿಗೆ ಆವಶ್ಯವಾದ ಉಪಾಯಗಳನ್ನು ಕೂಡ ವೇದಗಳು ತಿಳಿಸುತ್ತವೆ. ಕಡೆಗೆ ಶತ್ರುನಾಶ, ಗೆಲವು, ರೋಗಪರಿಹಾರವೇ-ಮುಂತಾದವುಗಳಿಗೆ ಕೂಡ ವೇದವು ಉಪಾಯಗಳನ್ನು ಪ್ರದರ್ಶನಮಾಡುತ್ತಿದೆ. ಹೀಗೆ ಕಾಮಿಗಳಿಗೂ

ನಿಷ್ಕಾಮಿಗಳಿಗೂ ಎಲ್ಲಾ ಪ್ರಯೋಜನಗಳನ್ನೂ ಒದಗಿಸಿಕೊಡುತ್ತಾ ದೊಡ್ಡ ದೀಪದಂತಿರುವ ವೇದಗಳು ಮಾನವರಿಗೆಲ್ಲ ಕಾಮಧೇನುವಾಗಿವೆ. ಆದ್ದರಿಂದ ವೇದಗಳ ಪರಿಚಯುವನ್ನೂ ಅವುಗಳಲ್ಲಿ ಅಡಕವಾಗಿರುವ ಜ್ಞಾನ-ವಿಜ್ಞಾನಗಳನ್ನೂ ನಾವು ಹೆಚ್ಚುಹೆಚ್ಚಾಗಿ ಪಡೆದುಕೊಳ್ಳಬೇಕು. ಆಗಲೇ ಅವುಗಳ ಸೃಷ್ಟಿಯು ಮಹತ್ತ್ವದ ಅರಿವು ನಮಗೆ ತಿಳಿದುಬರುತ್ತದೆ. ಋಕ್-ಯಜುಸ್ಸುಗಳೆಂದು (ಪದ್ಯ-ಗದ್ಯರೂಪವಾಗಿ) ವಿಂಗಡವಾಗಿರುವ ವೇದಗಳಲ್ಲಿರುವ ಕೆಲವು ವಿಚಾರಗಳನ್ನಾದರೂ ಈಗ ತಿಳಿಯೋಣ.

ವೇದಗಳಿಂದ ದೊರಕುವ ವ್ಯಾವಹಾರಿಕವಾದ ಪ್ರಯೋಜನಗಳನ್ನು ಮೊದಲು ಚಿಂತಿಸೋಣ. ಮನುಷ್ಯನಿಗೆ ಸಾವು ಎಂದರೆ ಭಯ. ಅದರಲ್ಲಿಯೂ ಅಕಾಲಮೃತ್ಯುವುಂಟಾಗುವದಂತೂ ತೀರ ಅನುಚಿತವು. ಈ ಮೃತ್ಯುಭಯುವನ್ನು ನಿವಾರಿಸಿಕೊಂಡು ಆಯುಷ್ಮಂತನಾಗಿ ಬದುಕಲು ಹಾಗೂ ಬದುಕಿರುವಷ್ಟು ಕಾಲವೂ ಶರೀರ-ಇಂದ್ರಿಯುಗಳ ಪಾಟವದಿಂದ ಕೂಡಿದ್ದು ಚಟುವಟಿಕೆಯಿಂದ ವ್ಯವಹಾರವನ್ನು ಸಾಗಿಸಲು ವೇದಗಳು ನಾನಾ ಉಪಾಯಗಳನ್ನು ತಿಳಿಸುತ್ತವೆ. ಮತ್ತು ಹಸಿವನ್ನು ಹೋಗಲಾಡಿಸಿಕೊಳ್ಳಲು, ಹೆಚ್ಚು ಅನ್ನವನ್ನು ಪಡೆಯಲು-ಪಠಿಸಬೇಕಾದ ಮಂತ್ರಗಳು, ಕೃಷಿ, ವಾಣಿಜ್ಯ, ಮಳೆಬೆಳೆಗಳು, ಆಡಳಿತ, ಲೋಕೋಪಯೋಗಿಕಾರ್ಯಗಳಿಗೆ ಸಹಾಯಕವಾಗುವಂತೆ ಮಾಡಬೇಕಾದ ಪ್ರಜೆಯ ಕರ್ತವ್ಯಗಳು, ಜೀವನೋಪಾಯುಗಳಿಗೆ ಕೈಗೊಳ್ಳಬೇಕಾದ ಪ್ರಯತ್ನಗಳು, ಮಕ್ಕಳುಮರಿಗಳನ್ನು ಪಡೆಯಲು, ಸಂಪತ್ತು, ವಿದ್ಯೆ, ಕೀರ್ತಿ, ಲಾಭಗಳನ್ನು ಗಳಿಸಲು- ಸಾಧನಗಳನ್ನು ಕೂಡ ವೇದಗಳು ತಿಳಿಸುತ್ತವೆ. ಕಾಮ್ಯವಾದ ಈ ಫಲಗಳೆಲ್ಲ ದೃಷ್ಟವಾಗಿರುವವು. ಇವಕ್ಕಿಂತ ಹೆಚ್ಚಿನ ಸ್ವರ್ಗ, ಪುಣ್ಯ, ಇಂದ್ರಪದವಿಯವರೆಗಿನ ಅಧಿಕಾರಸ್ಥಾನಗಳನ್ನು ಪಡೆಯುವ ಆಮುಷ್ಮಿಕಫಲರೂಪವಾದ ಬಯಕೆಗಳಿಗೂ ಉಪಾಯುಗಳನ್ನು ವೇದಗಳೇ ತಿಳಿಸುತ್ತವೆ. ಪ್ರಪಂಚವನ್ನೆಲ್ಲ ಮೂರು ಗುಂಪಾಗಿ ವಿಂಗಡಿಸಿ ಒಂದಕ್ಕೊಂದು ಹೇಗೆ ಉಪಕಾರ್ಯೋಪಕಾರಕ ಭಾವದಿಂದ ಹೆಣೆದುಕೊಂಡಿದೆ ? ಈ ಪ್ರಪಂಚದ ಪೂರ್ಣವಾದ ಪ್ರಯೋಜನವನ್ನು ಪಡೆಯುವದು ಹೇಗೆ ? ಎಂಬುದನ್ನೆಲ್ಲ ಭೌತಿಕವಿಜ್ಞಾನಕ್ಕಿಂತ ಮಿಗಿ

ಲಾಗಿ ವೇದಗಳು ಬೋಧಿಸುತ್ತಿವೆ. ಇನ್ನು ಸಂಸಾರದಿಂದಲೇ ಬಿಡುಗಡೆ ಹೊಂದಿ ಮುಕ್ತನಾಗಿ ನಿತ್ಯಾನಂದಸ್ವರೂಪದಲ್ಲಿಯೇ ಬಾಳಲೆಳಸುವವನಿಗೆ ಜ್ಞಾನವೈರಾಗ್ಯಾದಿಸಾಧನಗಳ ಮೂಲಕ ಮಾರ್ಗದರ್ಶನಮಾಡಿ ಪರಮ ಮುಕ್ತಿಯನ್ನೇ ಇವು ಕೊಡಿಸಬಲ್ಲವಾಗಿವೆ. ಇಂಥ ಸರ್ವೋಪಕಾರಕವಾದ ಜ್ಞಾನರಾಶಿಯನ್ನೇ ತಿರುಳಾಗಿ ಹೊತ್ತಿರುವ ವೇದಗಳಿಗೆ ಸರಿಸಮಾನವಾದ ಮತ್ತೊಂದು ಸಾಹಿತ್ಯವಾದರೂ ಎಲ್ಲಿದ್ದೀತು ?

ಆದ್ದರಿಂದ ಯಜ್ಞದಿಂದ ವೇದಗಳು ಸೃಷ್ಟಿಯಾದ ಘಟನೆಯು ಪ್ರಪಂಚದ ಕಲ್ಯಾಣಕ್ಕೆ ಪ್ರಮುಖದ್ವಾರವೆಂದಾಯಿತು. ಯಜ್ಞಮಾಡುವದರಿಂದ ವೇದಗಳಂಥ ಫಲವು ದೊರಕುವದಾದರೆ, ಅದರಿಂದ ಸಕಲ ಪುರುಷಾರ್ಥಗಳೂ ಸಿದ್ಧಿಸುವದಾದರೆ ಯಜ್ಞವು ಯಾರಿಗೆತಾನೆ ಬೇಡ ? ಯಜ್ಞವೆಂಬುದು ಕೇವಲ ದ್ರವ್ಯವನ್ನು ಖರ್ಚುಮಾಡುವ ಅರ್ಥರಹಿತ ಹಾಗೂ ಕಾಲಹರಣದ ಕಾರ್ಯವೆಂಬ ನಮ್ಮ ದಡ್ಡತನವನ್ನು ಈಗಲಾದರೂ ಬದಿಗೊತ್ತಿ ನಾವು ಎಚ್ಚತ್ತುಕೊಳ್ಳಬೇಕು. ವೇದಾಧ್ಯಯನ, ವೇದೋಕ್ತ ಕರ್ಮಾನುಷ್ಠಾನಗಳನ್ನು ನಿಯಮಬದ್ಧವಾಗಿ ಆಚರಿಸಿ ಅವುಗಳ ಪ್ರತ್ಯಕ್ಷ ಫಲವನ್ನು ಜಗತ್ತಿಗೆ ತೋರಿಸಿಕೊಡಬೇಕು. ಈ ನಿಷ್ಠೆಯುಳ್ಳವರು ಹೆಚ್ಚಿದಂತೆಲ್ಲ ಜಗತ್ತಿಗೆ ಕ್ಷೇಮವು ಲಭಿಸಿಯೇತೀರುವದು. ಹೀಗೆ ಪುರುಷಸೂಕ್ತವು ವೇದೋತ್ಪತ್ತಿಯನ್ನು ಈ ಮಂತ್ರದಲ್ಲಿ ವರ್ಣಿಸಿರುತ್ತದೆ.

---

## ೮. ಯತ್ಪುರುಷಂ ವ್ಯದಧುಃ

ಪುರುಷಸೂಕ್ತದ ೧೧ನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ. ಆ ಮಂತ್ರವು ಹೀಗಿದೆ :—

**ತಸ್ಮಾದಶ್ವಾ ಅಜಾಯನ್ತ । ಯೇ ಕೇ ಚೋಭಯಾ ದತಃ ।**
**ಗಾವೋ ಹ ಜಜ್ಞಿರೇ ತಸ್ಮಾತ್ । ತಸ್ಮಾಜ್ಜಾತಾ ಅಜಾವಯಃ ॥**

"ಅವನಿಂದ ಕುದುರೆಗಳು ಹುಟ್ಟಿದವು. ಮತ್ತು ಎರಡು ಕಡೆಯೂ ಹಲ್ಲುಗಳುಳ್ಳ ಕತ್ತೆ ಮುಂತಾದವುಗಳು (ಒಂದು ಕಡೆ ಹಲ್ಲುಳ್ಳ) ಗೋವುಗಳೂ ಹುಟ್ಟಿದವು. ಹಾಗೆಯೇ ಆಡುಗಳೂ ಪಕ್ಷಿಗಳೂ ಹುಟ್ಟಿದವು."

ಈ ಮಂತ್ರದಲ್ಲಿ ಸಾಧುಪ್ರಾಣಿಗಳಾದ ಹಾಗೂ ಯಜ್ಞಕ್ಕೆ ಉಪಯುಕ್ತವಾಗಿರುವ ಗೋವು, ಆಡು, ಕುದುರೆ–ಮುಂತಾದ ಪ್ರಾಣಿಗಳ ಸೃಷ್ಟಿಯನ್ನು ಹೇಳಿರುತ್ತದೆ. ಪ್ರಾಣಿಗಳಲ್ಲಿ ಎರಡುಗೊರಸಿನ ಪ್ರಾಣಿಗಳು, ಒಂದು ಗೊರಸಿನವು- ಎಂದು ಎರಡು ವಿಧ. ಹಸು, ಎತ್ತು, ಎಮ್ಮೆಗಳು ಎರಡು ಗೊರಸಿನವು, ಕುದುರೆ, ಆಡು–ಇವುಗಳು ಒಂದು ಗೊರಸುಳ್ಳವು. ಹಾಗೆಯೇ ಒಂದು ಸಾಲು ಹಲ್ಲಿನವು, ಎರಡು ಸಾಲು ಹಲ್ಲಿನವು- ಎಂದೂ ಇವನ್ನು ವಿಭಾಗವಮಾಡಬಹುದಾಗಿದೆ. ಗೋವು- ಮಹಿಷಾದಿಗಳು ಒಂದು ಸಾಲು ಹಲ್ಲುಗಳುಳ್ಳವುಗಳು. ಕುದುರೆ, ಕತ್ತೆ, ಆಡುಗಳು ಎರಡು ಸಾಲು ಹಲ್ಲಿನವು. ಈ ವಿಂಗಡದಲ್ಲಿ ಎರಡು ಸಾಲಿನ ಹಲ್ಲುಳ್ಳ ಪಶುಗಳ ಗುಂಪಿಗೆ ಮನುಷ್ಯನನ್ನೂ ಸೇರಿಸಬಹುದು. ಹೀಗೆ ಪ್ರಪಂಚದ ಜೀವನಕ್ಕೆ ಬಹಳ ಉಪಕಾರಿಗಳಾದ ಪಶುಗಳು ಹುಟ್ಟಿದವು ಎಂದು ಇಲ್ಲಿ ತಿಳಿಸಲಾಗಿದೆ.

ಈ ಪಶುಗಳ ಸೃಷ್ಟಿಯಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ. ಏನೆಂದರೆ ಇವುಗಳಿಗೂ ದೇವತೆಗಳಿಗೂ ನೇರಾದ ಸಂಬಂಧವುಂಟು. ಐತರೇಯೋಪನಿಷತ್ತಿನಲ್ಲಿ ತಿಳಿಸುವಂತೆ–ಭಗವಂತನು ಜಗತ್ಸೃಷ್ಟಿಮಾಡುವಾಗ ಮೊದಲು ದೇವತೆಗಳನ್ನು ಉಂಟುಮಾಡಿ ಲೋಕಗಳನ್ನೂ ಲೋಕಪಾಲಕರುಗಳನ್ನೂ ಅನಂತರ ಸೃಷ್ಟಿಸಿದನು. ಅವರುಗಳು ತಮಗೆ ವಾಸಿಸಲು ಸ್ಥಳವು ಬೇಕೆಂದರು. ಆಗ ಗೋವನ್ನು ಸೃಷ್ಟಿಸಿ 'ಇದರಲ್ಲಿ ಪ್ರವೇಶಿಸಿರಿ' ಎಂದಾಗ ಇದು ಸಾಲದು- ಎಂದರಂತೆ. ಅನಂತರ ಕುದುರೆಯನ್ನು ಉಂಟುಮಾಡಿ ತೋರಿಸಲಾಗಿ ಅದೂ ಸಾಲದು- ಎಂದರಂತೆ. ಕಡೆಗೆ ಮನುಷ್ಯನನ್ನು ಸೃಷ್ಟಿಮಾಡಿ ತೋರಿಸಲು 'ಸರಿ, ಸಾಕು'– ಎಂದು ಹೇಳಿ ಅಗ್ನಿಯೇ ಮೊದಲಾದ ಪ್ರತಿಯೊಬ್ಬ ದೇವತೆಯೂ ಮನುಷ್ಯನ ಶರೀರದಲ್ಲಿ ಜ್ಞಾನಕರ್ಮೇಂದ್ರಿಯಗಳ ರೂಪದಿಂದ ಪ್ರವೇಶಿಸಿಬಿಟ್ಟರು– ಎಂದು ವರ್ಣನೆಯಿದೆ. ಇದರ ಅಭಿಪ್ರಾಯವೇನೆಂದರೆ ಮನುಷ್ಯನೂ ಸೇರಿದಂತೆ ಗೋವು, ಕುದುರೆ, ಆಡು–ಮುಂತಾದ ಪಶುಗಳೆಲ್ಲವೂ ವಿರಾಟ್ಪುರುಷನ ಯಜ್ಞದ ಫಲವಾಗಿ ಹೊರಬಂದಿರುವದರಿಂದ ಈಗಲೂ ಆ ವಿರಾಡಾತ್ಮನ ಅಂಶಭೂತರಾಗಿಯೇ ಇದ್ದು ದೇವತೆಗಳಿಗೆ ಪ್ರಿಯರೂ ಆಗಿದ್ದಾರೆ. ಮನುಷ್ಯನು ದೇವತೆಗಳಿಗಾಗಿ ಮಾಡುವ ಯಜ್ಞಕ್ಕೆ ಯಜಮಾನನಾದರೆ ಪಶುಗಳು ಹಾಲು– ತುಪ್ಪ

ಮುಂತಾದ ದ್ರವ್ಯಗಳನ್ನು ಒದಗಿಸುವ ಮೂಲಕವೂ ಕೆಲವು ವೇಳೆ ತಮ್ಮ ಶರೀರವನ್ನೇ ಯಜ್ಞದಲ್ಲಿ ದೇವತೆಗಳಿಗೆ ಬಲಿಯಾಗಿ ಅರ್ಪಿಸುವ ಮೂಲಕವೂ ಉಪಕಾರಿಗಳಾಗಿರುತ್ತಾರೆ- ಎಂದು ತಿಳಿಯಬಹುದು.

ಇಲ್ಲಿ ಒಂದು ವಿಚಾರವನ್ನು ಮಾಡಬಹುದಾಗಿದೆ. ಭಗವಂತನ ಸೃಷ್ಟಿಯಲ್ಲಿ ಗಿಡಮರಗಳಿಂದಾರಂಭಿಸಿ ಪಶುಪಕ್ಷಿಗಳ ವರ್ಗವೂ ಸೇರಿದಂತೆ ಎಲ್ಲವೂ ಪ್ರಪಂಚದ ಪ್ರಯೋಜನಕ್ಕಾಗಿಯೇ ಜೀವಿಸುತ್ತಿವೆ. ಕೆಲವನ್ನು ಮಾನವನು ಉಪಯೋಗಿಸಿಕೊಳ್ಳದೆ ಇರಬಹುದು. ಅದಕ್ಕೆ ಕಾರಣ ಅವುಗಳ ಉಪಯೋಗವು ಅವನಿಗೆ ಗೊತ್ತಿಲ್ಲದೆ ಇರುವದೇ ಆಗಿದೆ. ಒಂದು ಉದಾಹರಣೆಯನ್ನು ನೋಡೋಣ. ಹಿಂದಿನ ಕಾಲದಲ್ಲಿ ನಾವು ಹಣವನ್ನಿಟ್ಟುಕೊಳ್ಳಲು ಪೆಟ್ಟಿಗೆ ಹಾಗೂ ಬಟ್ಟೆಯ ಚೀಲಗಳನ್ನು ಉಪಯೋಗಿಸುತಿದ್ದೆವು. ಆಗ ನಮಗೆ ಹಾವಿನಿಂದೇನು ಪ್ರಯೋಜನ ? ಅದೇಕೆ ಸೃಷ್ಟಿಯಾಯಿತು ? ಎನಿಸಿರಬೇಕು. ಈಗಲಾದರೋ ಹಾವುಗಳನ್ನೇ ಕೊಂದು ಅವುಗಳ ಚರ್ಮದಿಂದ ಸ್ತ್ರೀಯರು ಉಪಯೋಗಿಸುವ 'ಮನಿ-ಪರ್ಸ'ಗಳನ್ನು ವಿಚಿತ್ರವಾಗಿ ಅಲಂಕಾರವಾಗಿ ತಯಾರಿಸುತ್ತಾರಂತೆ. ಆದ್ದರಿಂದ ಈಗ ಹಾವೂ ಉಪಯುಕ್ತವಾದ ಪ್ರಾಣಿಯೇ ಆಯಿತು. ಹೀಗೆ ಇನ್ನೂ ಎಷ್ಟು ಬದಲಾವಣೆಗಳಾಗುವವೋ, ಬಲ್ಲವರು ಯಾರು ? ಅಂತೂ ಸೃಷ್ಟಿಯ ಯಾವದೊಂದು ವಸ್ತುವೂ ನಿರುಪಯೋಗಿಯಲ್ಲ. ಇರಲಿ. ನಮಗೆ ಚೆನ್ನಾಗಿ ತಿಳಿದಿರುವಂತೆ ಗಿಡಮರಗಳು ಎಲೆ, ಕಾಯಿ, ಹಣ್ಣುಗಳನ್ನು ಒದಗಿಸುವ ಮೂಲಕ, ಗೋವುಗಳು ಹಾಲು-ತುಪ್ಪಗಳನ್ನು ಒದಗಿಸುವ ಮೂಲಕ ನಾನಾರೀತಿಯಿಂದ ಮನುಷ್ಯನಿಗೂ ಅವನು ಮಾಡುವ ದೇವತಾಕಾರ್ಯಗಳಿಗೂ ಉಪಯೋಗಕರವಾಗಿವೆ. ಅವು ತಪ್ಪದೆ ತಮ್ಮ ಪಾಲಿನ ವಸ್ತುಗಳನ್ನು ವಿರಾಟ್ ಪುರುಷನ ಸೇವೆಗೆ ಇಂದಿಗೂ ಸಮರ್ಪಿಸುತ್ತಲೇ ಇವೆ. ಆದರೆ ಮನುಷ್ಯನು ಮಾತ್ರ ಕೊಬ್ಬಿಹೋಗಿದ್ದು ತಾನೂ ಪಶುವೆಂದೇ ಪರಿಗಣಿಸಲ್ಪಟ್ಟದ್ದರೂ ಇತರ ಪಶುಗಳಿಗಿಂತ ಬುದ್ಧಿ, ಜಾಣತನ, ಕೌಶಲ್ಯ, ಶರೀರರಚನೆ- ಮುಂತಾದವುಗಳಲ್ಲಿ ಮುಂದಾಗಿದ್ದರೂ ಯಜ್ಞವನ್ನೇಕೆ ಮಾಡಬೇಕು ? ದೇವತೆಗಳಿಗೇಕೆ ಪಾಲು ಕೊಡಬೇಕು ? ಎನ್ನುವನಲ್ಲ, ಇದು ನ್ಯಾಯವೆ? ಆದ್ದರಿಂದಲೇ ಗೋವು ಒಮ್ಮೆ 'ನೀನ್ಯಾರಿಗಾದೆಯೋ ಎಲೆ ಮಾನವಾ' ಎಂದಿರಬೇಕು.

ಈಗಲಾದರೂ ನಾಸ್ತಿಕ್ಯವನ್ನು ತ್ಯಾಗಮಾಡಿ ಮೃಗಗಳಿಗಿಂತ ಕಡೆ ಎನ್ನಿಸಿ ಕೊಳ್ಳದಂತಾಗಲು ಪ್ರಪಂಚದಲ್ಲಿ ಹುಟ್ಟಿದ್ದಕ್ಕೆ ಏನಾದರೊಂದು ಯಜ್ಞವನ್ನು ಕೈಗೊಂಡು ವಿರಾಟ್ ಆತ್ಮನ ಆರಾಧನೆಯನ್ನು ಮಾಡಿ ನಾವು ಕೃತಕೃತ್ಯ ರಾಗಬೇಕು. ಹಾಗೆ ಮಾಡದೆಹೋದರೆ ನಮ್ಮ ಹುಟ್ಟು ವ್ಯರ್ಥವೇ ಸರಿ. ಪ್ರಾಣಿಗಳ ಸೃಷ್ಟಿಯನ್ನು ತಿಳಿಸುವ ಈ ಮಂತ್ರವು ನಮಗೆ ವ್ಯಂಗ್ಯವಾಗಿ ಈ ವಿಚಾರವನ್ನೂ ಬೋಧಿಸುತ್ತಿದೆ-ಎಂದು ಭಾವಿಸಿದರೆ ತಪ್ಪಾಗಲಾರದಲ್ಲವೆ ?

ಈಗ ಹನ್ನೆರಡನೆಯ ಮಂತ್ರವನ್ನು ವಿಚಾರಮಾಡೋಣ. ಅದು ಹೀಗಿದೆ :—

**ಯತ್ಪುರುಷಂ ವ್ಯದಧುಃ । ಕತಿಧಾ ವ್ಯಕಲ್ಪಯನ್ ।**
**ಮುಖಂ ಕಿಮಸ್ಯ ಕೌ ಬಾಹೂ । ಕಾವೂರೂ ಪಾದಾವುಚ್ಯೇತೇ ॥**

"ಯಾವ ಪುರುಷನನ್ನು (ಪಶುವಾಗಿ) ಮಾಡಿದರೋ ಅದನ್ನು ಎಷ್ಟು ವಿಧವಾಗಿ ಕಲ್ಪಿಸಿದರು ? ಮುಖವು ಯಾವದು ? ತೋಳುಗಳಾಗುವುವು ? ತೊಡೆಗಳೂ ಪಾದಗಳೂ ಯಾವವು ?"

ಈ ಮಂತ್ರವು ಪ್ರಶ್ನರೂಪವಾಗಿ ರಚಿತವಾಗಿದೆ. ಇದರ ಉದ್ದೇಶ ವೇನೆಂದರೆ ಈವರೆಗೆ ವರ್ಣಿಸಿದ ಸೃಷ್ಟಿಯನ್ನು ಮತ್ತೊಮ್ಮೆ ವಿವರಿಸುವದ ಕ್ಕಾಗಿ ಪ್ರಶ್ನೋತ್ತರಕ್ರಮವನ್ನು ಅನುಸರಿಸಬೇಕೆಂಬುದೇ ಆಗಿದೆ. ಇಂಥ ಪ್ರಶ್ನೋತ್ತರಸಂವಾದಗಳು ವೇದದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಪ್ರಕೃತ ವಿರಾಟ್‌ಪುರುಷನ ಶರೀರದಿಂದಲೇ ಇಡಿಯ ಜಗತ್ತೆಲ್ಲವೂ ಸೃಷ್ಟಿಯಾಗಿದೆ ಯಾದರೂ ಸೃಷ್ಟಿವರ್ಣನೆಯ ಮುಖ್ಯ ಉದ್ದೇಶವು ಸೃಷ್ಟಿಕರ್ತನ ಸ್ವರೂಪ ಜ್ಞಾನವನ್ನು ಮಾಡಿಕೊಳ್ಳುವದಕ್ಕೇ ಆಗಿರುವದರಿಂದ ಪ್ರಧಾನವಾದ ಸೃಷ್ಟಿ ಭಾಗಗಳನ್ನು ಆರಿಸಿಕೊಂಡು ಉತ್ತರಕೊಡುವದಕ್ಕಾಗಿ ಪ್ರಶ್ನೆಯನ್ನು ಎಬ್ಬಿಸಲಾಗಿದೆ. ಮತ್ತು ಸೃಷ್ಟಿಯು ಬೆಳೆದು ಪ್ರಲಯಕಾಲದವರೆಗೂ ಅದು ಬದುಕಿರುವದಕ್ಕೆ ಯಜ್ಞವು ಸಾಧನವಾಗಿದೆ. ಯಜ್ಞವೆಂಬ ಕರ್ಮವು ನೆರವೇರಬೇಕಾದರೆ ಬಹಳ ಸಾಮಗ್ರಿಗಳೂ ಜನರೂ ಮಂತ್ರಾದಿಗಳೂ ಬೇಕು. ಶ್ರದ್ಧಾ-ವಿತ್ತ-ವಿಧಿ-ಯಜಮಾನ-ದೇವತೆಗಳೆಂಬ ಸೌಕರ್ಯ

ಗಳಿಲ್ಲದೆ ಯಜ್ಞಕರ್ಮವೇ ಹುಟ್ಟುವಹಾಗಿಲ್ಲ. ಅದಿಲ್ಲದೆ ಜಗದ್ವ್ಯಾಪಾರವಾಗಲಿ ಸ್ಥಿತಿಯಾಗಲಿ ಆಗುವಂತಿಲ್ಲ. ಆದ್ದರಿಂದ ಇವುಗಳನ್ನೆಲ್ಲ ವಿರಾಟ್ ಪುರುಷನ ಶರೀರದಿಂದಲೇ ಆದಿಯಲ್ಲಿ ಉಂಟುಮಾಡಲಾಯಿತು- ಎಂದು ಮುಂದೆ ತಿಳಿಸಲು ಸಹ ಪ್ರಶ್ನರೂಪದಿಂದ ಶ್ರುತಿಯು ಈಗ ಹೊರಟಿದೆ.

ಪುರುಷನನ್ನು ಯಜ್ಞಪಶುವಾಗಿ ಮಾಡಿ ದೇವತೆಗಳು ಯಜ್ಞಮಾಡಿದರಷ್ಟೆ ? ಆಗ ಎಷ್ಟು ವಿಧವಾಗಿ ಮಾಡಿದರು ? ಎಂಬಿದು ಮೊದಲನೆಯ ಪ್ರಶ್ನೆಯಾಗಿದೆ. ಪಶುವು ಹೋಮದ್ರವ್ಯವೆಂಬುದು ನಿಜವಾದರೂ ಹೋಮ ಮಾಡುವಾಗ ಒಂದು ಕ್ರಮವಿರುತ್ತದೆ. ಹಾಗೂ ಅದರಲ್ಲಿ ಪ್ರಧಾನ, ಶೇಷ- ಎಂದು ವಿಂಗಡಗಳಿರುತ್ತದೆ. ಪ್ರಧಾನದ ಅನಂತರವೇ ಶೇಷಾಹುತಿಗಳನ್ನು ಯಜ್ಞದಲ್ಲಿ ಅರ್ಪಿಸುತ್ತಾರೆ. ಎಲ್ಲಾ ಕರ್ಮಗಳಲ್ಲಿಯೂ ಪ್ರಧಾನವಾದ ಪಟ್ಟವು ಯಾವದಾದರೊಂದಕ್ಕೆ ಇರುತ್ತದೆ. ಉದಾಹರಣೆಗೆ ನಮಗೆಲ್ಲಾ ತಿಳಿದಿರುವಂತೆ ಉಪನಯನದಲ್ಲಿ ಗಾಯತ್ರಿಯ ಉಪದೇಶವು. ಹಾಗೆಯೇ ಲೌಕಿಕಕರ್ಮಗಳಲ್ಲಿಯೂ ಉಂಟು. ಒಬ್ಬ ನೌಕರನು ಕೆಲಸಕ್ಕೆ ಹಾಜರಾದಾಗ ಹಾಜರಿಯನ್ನು ಮೊದಲು ಗುರುತಿಸಬೇಕು. ಹಾಗಿಲ್ಲದಿದ್ದರೆ ಅವನು ಕೆಲಸಮಾಡಿದ್ದರೂ ವೇತನವು ಸಿಗುವದಿಲ್ಲ. ಹಾಜರಿ ಗುರುತಿಸುವದೇ ಪ್ರಧಾನವೇಕಾಗಬೇಕು ? ಎಂದು ಯಾರೂ ಪ್ರಶ್ನಿಸುವದಿಲ್ಲ. ಅದರಂತೆಯೇ ಕರ್ಮವು ನಡೆಯುವಾಗ ಯಾವನಾದರೊಬ್ಬ ಪ್ರಧಾನವ್ಯಕ್ತಿಯಾಗಿದ್ದೇ ಇರುತ್ತಾನೆ. ಹಾಗೆಯೇ ಜಗತ್ಸೃಷ್ಟಿಕರ್ಮದಲ್ಲಿ ಭಗವಂತನು ಮೊದಲು ಪ್ರಧಾನವ್ಯಕ್ತಿಯನ್ನಾಗಿ ವಿರಾಟ್ಪುರುಷನನ್ನು ನಿಯಮಿಸಿದನು. ಆತನು ತಾನೇ ತನ್ನನ್ನೇ ಯಜ್ಞಮಾಡಿಕೊಂಡಾಗ ಜಗತ್ತಿನ ಬೆಳವಣಿಗೆಗೆ ಪ್ರಧಾನವಾಗಿ ಯಾರುಯಾರನ್ನು ತನ್ನ ಶರೀರದಿಂದಲೇ ಸೃಷ್ಟಿಸಿ ನಿಯಮಿಸಿದನು ? ಎಂಬಿದೇ ಪ್ರಶ್ನೆಯು. ಇಲ್ಲಿ ದೇವತೆಗಳು ಯಜ್ಞಕರ್ತೃಗಳೆಂತ ಭಾವಿಸಿ ಪುರುಷನನ್ನು ಎಷ್ಟು ವಿಧವಾಗಿ ವಿಂಗಡಿಸಿದರು ? ಎಂದು ಕೇಳಲಾಗಿದೆ.

ಪುರುಷನೆಂದರೆ ಮನುಷ್ಯನೆಂದೇ ಸಾಮಾನ್ಯವಾದ ಅರ್ಥವು. ಮನುಷ್ಯನ ಶರೀರದಲ್ಲಿ ಲೌಕಿಕವ್ಯವಹಾರದೃಷ್ಟಿಯಿಂದಲೂ ಪ್ರಧಾನ-ಅಪ್ರಧಾನ

ಎಂಬ ವಿಭಾಗವಿದೆ. ಹೇಗೆಂದರೆ ಮುಖವು ಪ್ರಧಾನವೆಂದು ಎಲ್ಲರೂ ಭಾವಿಸುತ್ತಾರೆ. ಸತ್ತವನನ್ನು ಕೂಡ "ಮುಖದರ್ಶನ" ಮಾಡಲು ಇಚ್ಛಿಸುತ್ತಾರೆ. ಫೋಟೋಗಳನ್ನು ತೆಗೆಯುವಾಗ ಪ್ರಧಾನವಾಗಿ ಮುಖವನ್ನು ಒಡ್ಡುತ್ತಾರೆ. ಬೆನ್ನನ್ನು ಒಡ್ಡುವದಿಲ್ಲ. ಹೀಗೆಲ್ಲ ಮುಖಕ್ಕೆ ಪ್ರಾಧಾನ್ಯವಿದೆ. ಆದ್ದರಿಂದ ವಿರಾಟ್‌ಪುರುಷನ ಮುಖವು ಯಾವದು ? ಎಂದು ಪ್ರಶ್ನಿಸಲಾಗಿದೆ. ವಿರಾಡಾತ್ಮನ ಶರೀರವು ಬಹಳ ವ್ಯಾಪಕವೂ ಬೃಹತ್ತಮವೂ ಆಗಿದೆಯಾದ್ದರಿಂದ ಮುಖವನ್ನು ಗುರುತಿಸುವ ಕೆಲಸವು ಬಹಳ ಅವಶ್ಯಕ. ದೊಡ್ಡ ದೊಡ್ಡ ಉಪ್ಪರಿಗೆ ಮನೆಗಳನ್ನು ಒಳಹೊಕ್ಕಾಗ ಮುಖದ್ವಾರವು ಯಾವದೆಂಬುದೇ ನಮಗೆ ತಿಳಿಯದೆ ಹೋಗಬಹುದು. ಇನ್ನು ಹದಿನಾಲ್ಕು ಲೋಕಗಳವರೆಗಿನ ಶರೀರವಿಸ್ತಾರವುಳ್ಳ ವಿರಾಟ್‌ಪುರುಷನನ್ನು ಅರಿತುಕೊಳ್ಳುವಾಗ ಮುಖವು ಯಾವದೆಂದು ಕೇಳುವದು ಆಶ್ಚರ್ಯವೇನಲ್ಲ. ಹಾಗೆಯೇ ಮುಖದ ಅನಂತರ ತೋಳುಗಳು ಯಾವವು ? ಎಂಬಿದು ಎರಡನೆಯ ಪ್ರಶ್ನೆ. ಅನಂತರ ತೊಡೆಗಳಾವುವು ? ಕಾಲುಗಳಾವುವು ? ಎಂಬ ಪ್ರಶ್ನೆಗಳನ್ನೂ ಮುಂದುವರಿಸಿ ಕೇಳಲಾಗಿದೆ.

ಹೀಗೆ ಪುರುಷಸೂಕ್ತವು ವಿರಾಡಾತ್ಮನೆಂಬ ಸಮಷ್ಟ್ಯುಪಾಧಿಕನಾದ ಹಾಗೂ ಇಂದ್ರಿಯಗೋಚರನಾದ ಆತ್ಮನ ಮೂಲಕ ಇಂದ್ರಿಯಾತೀತನೂ ಉಪಾಧಿರಹಿತನೂ ಅಖಂಡನೂ ಅನಂತನೂ ಆದ ಪ್ರತ್ಯಗಾತ್ಮನನ್ನು ತಿಳಿಸಲು ಹೊರಟಿರುತ್ತದೆ. ಇನ್ನುಮುಂದೆ ಬ್ರಾಹ್ಮಣಾದಿವರ್ಣಗಳನ್ನೇ ಮುಖ, ಬಾಹು ಮುಂತಾದವುಗಳಾಗಿ ವರ್ಣಿಸುವ ಮೂಲಕ ಜಗತ್ತು ಪರಬ್ರಹ್ಮದ ವಿಭೂತಿಯೇ ಆಗಿದೆ– ಎಂದು ತಿಳಿಸಿ ಅದನ್ನೂ ಮೀರಿದವನೇ ನಾರಾಯಣನು ಎಂದು ಉಪಸಂಹಾರಮಾಡಲಿದೆ.

— — —

## ೯. ಬ್ರಾಹ್ಮಣೋಽಸ್ಯ ಮುಖಮಾಸೀತ್–೧

ಪುರುಷಸೂಕ್ತದ ಹದಿಮೂರನೆಯ ಮಂತ್ರವನ್ನು ಈಗ ವಿಚಾರ ಮಾಡಬೇಕಾಗಿದೆ. ಆ ಮಂತ್ರವು ಹೀಗಿದೆ :—

**ಬ್ರಾಹ್ಮಣೋಽಸ್ಯ ಮುಖಮಾಸೀತ್ | ಬಾಹೂ ರಾಜನ್ಯಃ ಕೃತಃ |**
**ಊರೂ ತದಸ್ಯ ಯದ್ವೈಶ್ಯಃ | ಪದ್ಭ್ಯಾಂ ಶೂದ್ರೋ ಅಜಾಯತ||**

"ಈ ವಿರಾಟ್‌ಪುರುಷನ ಮುಖವು ಬ್ರಾಹ್ಮಣನಾಯಿತು. ತೋಳು ಗಳು ಕ್ಷತ್ರಿಯನಾಗಿ ಮಾಡಲ್ಪಟ್ಟಿತು. ಇವನ ಎರಡು ತೊಡೆಗಳೂ ವೈಶ್ಯ ನೆನಿಸಿತು. ಎರಡು ಕಾಲುಗಳಿಂದ ಶೂದ್ರನು ಹುಟ್ಟಿದನು."

ಈ ಮಂತ್ರವು ಕ್ರಮವಾಗಿ ವಿರಾಟ್‌ಪುರುಷನ ಶರೀರಾವಯವಗಳನ್ನು ತಿಳಿಸುತ್ತಿದೆ. ವಿರಾಡಾತ್ಮನೆಂದಮೇಲೆ ಇಡಿಯ ಬ್ರಹ್ಮಾಂಡವೇ ಆತನ ದೇಹವಾಗಿದ್ದು ಆ ಇಡಿಯ ದೇಹದಲ್ಲೆಲ್ಲ ಕೂದಲಿನಿಂದ ಹಿಡಿದು ಉಗುರಿನ ವರೆಗೂ ಪ್ರತಿಯೊಂದು ಭಾಗವೂ ಎಲ್ಲವೂ ತಾನೆಂದೇ ಅವನಿಗೆ ಅಭಿಮಾನ ವಿರುತ್ತದೆ. ನಾವೂ ಹಾಗೆಯೇ ಪೂರ್ತಿಯಾಗಿ ಶರೀರವನ್ನೆಲ್ಲ ನಾನೆಂದೂ ಅಂದುಕೊಂಡಿರುತ್ತೇವೆ. ನಮ್ಮ ದೇಹದಲ್ಲಿ ಒಟ್ಟಾರೆ ನಮಗೆ ಭೇದಬುದ್ಧಿ ಯಾಗಲಿ, ತಾರತಮ್ಯಭಾವನೆಯಾಗಲಿ, ಉಚ್ಚನೀಚಕಲ್ಪನೆಗಳಾಗಲಿ- ಇರುವದಿಲ್ಲ. ದೇಹಾವಯವಗಳಿಗೂ ಸಹ 'ನಾನು ಹೆಚ್ಚು, ತಾನು ಹೆಚ್ಚು' -ಎಂತ ಅಂದುಕೊಳ್ಳುವದಾಗಲಿ, ಒಂದನ್ನು ಮತ್ತೊಂದು ಹಿಂಸಿಸುವ ದಾಗಲಿ, ವಿರೋಧಿಸುವದಾಗಲಿ,- ಕಂಡುಬರುವದಿಲ್ಲ. ಮತ್ತು ಒಂದು ಮತ್ತೊಂದರೊಡನೆ ಅಸಹಕಾರವನ್ನು ತೋರುವದಾಗಲಿ, ಅಗೌರವವನ್ನು ಸೂಚಿಸುವದಾಗಲಿ- ಇರುವದಿಲ್ಲ. ಪ್ರತಿಯೊಂದು ಅವಯವವೂ ತನ್ನತನ್ನ ದೃಷ್ಟಿಯಿಂದ ಅತ್ಯುಪಯುಕ್ತವಾಗಿದೆ. ಒಂದರ ಕೆಲಸವನ್ನು ಇನ್ನೊಂದು ಮಾಡಲೂ ಆರದು. ಹಾಗೆಯೇ ಒಂದರ ಜಾಗವನ್ನು ಮತ್ತೊಂದು ಆಕ್ರಮಿಸುವದಾಗಲೀ ಒಂದಕ್ಕೆ ತೊಂದರೆಯಾದಾಗ ಮತ್ತೊಂದು ಹಿಗ್ಗುವ ದಾಗಲೀ ಇರುವದಿಲ್ಲ. ಯಾವ ಅವಯವವೂ ತನಗಾಗಿ ಎಂದು ಏನನ್ನೂ ಪ್ರತ್ಯೇಕವಾಗಿ ಸಂಗ್ರಹಿಸುವದಿಲ್ಲ. ತಾನಿರುವದೇ ಆತ್ಮನ (ಯಜಮಾನನ) ಉಪಯೋಗಕ್ಕಾಗಿ ಎಂದು ಭಾವಿಸಿರುತ್ತದೆ. ಇವುಗಳ ಅನ್ಯೋನ್ಯವಾದ ಸಹಕಾರವಂತೂ ಅತ್ಯುನ್ನತ ಆದರ್ಶವಾಗಿದೆ. ಹೇಗೆಂದರೆ : ಕಾಲಿಗೆ ಮುಳ್ಳು ಚುಚ್ಚಿದರೆ ಕಣ್ಣು ಅದನ್ನು ಚೆನ್ನಾಗಿ ನೋಡಿ ಗೊತ್ತುಪಡಿಸಿದ ಅನಂತರ ಕೈಯು ಅದನ್ನು ಕಿತ್ತು ಬಿಸಾಡುತ್ತದೆ. ಹಾಗೆಯೇ ಹೊಟ್ಟೆಗೆ ಹಸಿವಾದರೆ ಕಾಲು, ಕೈ, ಮುಖ, ಹಲ್ಲು, ನಾಲಗೆಗಳೆಲ್ಲ ಸಹಕರಿಸಿ ಕೆಲಸಮಾಡಿ ಅದನ್ನು

ತುಂಬುತ್ತವೆ. ಕಣ್ಣಿಗೆ ಕಾಣದ ವಸ್ತುಗಳನ್ನು ಕಿವಿಯು ಗೊತ್ತುಪಡಿಸಿ ಕೊಡುತ್ತದೆ. ಹೀಗೆ ಸಹಕಾರದ ಪಾಠವನ್ನು ಪೂರ್ಣವಾಗಿ ನಮ್ಮ ದೇಹವೇ ನಮಗೆ ತಿಳಿಸಿಕೊಡುತ್ತಿದೆ. ಇದು ಎಲ್ಲರಿಗೂ ಅನುಭವಸಿದ್ಧವಾದ ವಿಚಾರವು. ಆದರೆ ಯಾರೂ ಈ ತತ್ತ್ವವನ್ನು ಹೆಚ್ಚಾಗಿ ಗಮನಿಸಿರುವದಿಲ್ಲ.

ಈ ಸಹಕಾರತತ್ತ್ವದ ಆಧಾರದಿಂದ ವೇದವು ಈಗ ವಿರಾಟ್ ಪುರುಷನ ಶರೀರವನ್ನು ವರ್ಣಿಸುವದಕ್ಕೆ ಹೊರಟಿರುತ್ತದೆ. ಏಕೆಂದರೆ ಜಗತ್ತು ಸಹಕಾರದಿಂದ ಮಾತ್ರವೇ ಬದುಕಿರಲು ಸಾಧ್ಯ. ಜಗತ್ತಿನಲ್ಲಿರುವ ಯಾವ ಪದಾರ್ಥವೂ ವಿರಾಡಾತ್ಮನಿಗಿಂತ ಅಥವಾ ಅವನ ಶರೀರಕ್ಕಿಂತ ಬೇರೆಯಲ್ಲ; ಹಾಗೆ ಯಾವದನ್ನೂ ಹೊರಹಾಕುದದೂ ಸಾಧ್ಯವಿಲ್ಲ. ಆದ್ದರಿಂದ ವಿರಾಡಾತ್ಮನ ಸಮಷ್ಟೀಶರೀರವನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ಶರೀರದಲ್ಲಿರುವ ನಿಯಮ–ನೀತಿಗಳೇ ಅದರಲ್ಲಿಯೂ ಹೆಣೆದುಕೊಂಡಿರುತ್ತವೆ. ವಿರಾಡಾತ್ಮನಿಗೆ ಸುಖವಾಗಬೇಕಾದರೆ ಈ ಸಹಕಾರಿತತ್ತ್ವವು ಅಲ್ಲಿಯೂ ಜಾರಿಗೆ ಬರಲೇಬೇಕು. ಈ ಅರ್ಥದಲ್ಲಿಯೇ ಆತ್ಮನೊಬ್ಬನೇ, ದೇವರು ಒಬ್ಬನೇ–ಎಂದು ಶ್ರುತಿಗಳಲ್ಲಿ ತಿಳಿಸಿದೆ. ಎರಡಾದಕೂಡಲೇ ವಿರೋಧ, ದ್ವೇಷ ಅಸಹಕಾರಗಳು ಎದ್ದುಕೊಳ್ಳುವವು. ಅವು ನಾಶಕ್ಕೆ ಹಾದಿಯಾಗಿರುವವು. ಆದ್ದರಿಂದಲೇ 'ಎಲ್ಲವೂ ಒಂದೇ ; ಎಲ್ಲವೂ ಬ್ರಹ್ಮವೇ'–ಎಂದು ಶ್ರುತಿಗಳು ಮೊಳಗುತ್ತಿವೆ. ಇರಲಿ. ಈಗ ಸಹಕಾರತತ್ತ್ವದ ನೆರಳಿನಲ್ಲಿ ನೋಡಿದಾಗ ವಿರಾಡಾತ್ಮನ ಅವಯವಗಳಿಗೆ ಒಂದೊಂದು ಜಾತಿ (ವರ್ಗ) ಯನ್ನೇ ಜೋಡಿಸಿ ಪ್ರಪಂಡವನ್ನೆಲ್ಲ ಒಂದಾಗಿ ಮಾಡಲು ವಿಶ್ವಧರ್ಮ ಬೋಧಕವಾದ ವೇದವು ಹೊರಟಿರುತ್ತದೆ. ಜಾತಿ ಎಂದರೆ ಸಂಕುಚಿತಾರ್ಥವನ್ನು ಸ್ವೀಕರಿಸಬಾರದು. ಹುಟ್ಟಿದ್ದು ಎಂದಿಷ್ಟೇ ಅರ್ಥವು. ಉದಾಹರಣೆಗೆ ಮುಖದಿಂದ ಮಾತು ಹೊರಡುತ್ತದೆ. ಮಾತುಗಳನ್ನೆಲ್ಲ ಶಬ್ದವೆಂಬ ಜಾತಿ ಯೆನ್ನುತ್ತಾರೆ. ಇದರಲ್ಲಿ ತಪ್ಪೇನಿದೆ ? ಕೈಗಳಿಂದ ಕರ್ಮಗಳಾಗುವವು. ಕರ್ಮಗಳನ್ನೆಲ್ಲ ಒಂದು ಗುಂಪಾಗಿ ಭಾವಿಸುತ್ತಾರೆ. ಈ ವಿವೇಚನೆಯು ವಿರಾಡಾತ್ಮನ ಸ್ವರೂಪಜ್ಞಾನಕ್ಕೆ ಸಹಕಾರಿಯಾಗಿಯೇ ಇದೆ. ಈ ಹಿನ್ನೆಲೆಯಲ್ಲಿ ವೇದವು "ವಿರಾಡಾತ್ಮನ ಮುಖವು ಬ್ರಾಹ್ಮಣನಾಯಿತು" ಎಂದು ಇಲ್ಲಿ ತಿಳಿಸಿರುತ್ತದೆ.

ಬ್ರಾಹ್ಮಣನೆಂದರೆ ನಾವು ಈಗ ಸಮಾಜದಲ್ಲಿ ಕರೆಯುತ್ತಿರುವ ಒಂದು ವರ್ಗದ ಜನರೆಂದು ಅರ್ಥವಲ್ಲ. ಬ್ರಾಹ್ಮಣಶಬ್ದಕ್ಕೆ ಪ್ರಧಾನ ಎಂಬಿದು ಇಲ್ಲಿ ಅರ್ಥವು. ದೇಹದಲ್ಲಿ ಮುಖವು ಪ್ರಧಾನವು-ಎಂದು ವ್ಯವಹರಿಸಲ್ಪಡುವದು. ವ್ಯವಹಾರವೆಂದರೆ ವಿ ಶ್ಲೇ ಷ ಣೆ ಯು. ಒಂದು ವಸ್ತುವನ್ನು ಸಮಗ್ರವಾಗಿ ಅರಿಯುವದಕ್ಕಾಗಿ ನಾವು ಬುದ್ಧಿಯಲ್ಲಿ ಮಾಡಿಕೊಳ್ಳುವ ವಿಭಾಗವು ಇಂಥ ವಿಶ್ಲೇಷಣೆಯೆನಿಸುತ್ತದೆ. ಉದಾಹರಣೆಗೆ ಒಂದು ಮರವನ್ನು ಅರಿಯುವದಕ್ಕಾಗಿ ಬೇರು, ಕಾಂಡ, ಕೊಂಬೆ, ಹೂ, ಹೀಚು, ಹಣ್ಣುಗಳೆಂದು ವಿಂಗಡಿಸುತ್ತಾರೆ. ಈ ವಿಂಗಡವು ಮಾನವನು ಸೌಕರ್ಯಕ್ಕಾಗಿ ಮಾಡಿದ್ದೇ ಹೊರತು ಇಡಿಯ ಮರದ ದೃಷ್ಟಿಯಿಂದ ಇದಕ್ಕೆ ಬೆಲೆಯೇನೂ ಇಲ್ಲ. ಹಾಗೆಯೇ ವಿರಾಡಾತ್ಮನ ವಿಜ್ಞಾನದೃಷ್ಟಿಯಿಂದ ನೋಡಿದರೆ ಬ್ರಾಹ್ಮಣನಿರಲಿ- ದೇವ, ಮನುಷ್ಯ ಯಕ್ಷ, ರಾಕ್ಷಸರೆಂಬ ಭೇದವೂ ಕೂಡ ಬೆಲೆಯಿಲ್ಲದ್ದಾಗುವದು. ಇನ್ನು ಸ್ಥೂಲಸೂಕ್ಷ್ಮಸ್ಥಿತಿಗಳನ್ನೂ ಮೀರಿದ ಅಖಂಡಾತ್ಮನ ಜ್ಞಾನದ ಕಣ್ಣಿನಿಂದ ನೋಡಿದರೆ ಭೇದಕ್ಕೆ ಅವಕಾಶವೆಲ್ಲಿದೆ ? ಆದರೂ ಪುರುಷನನ್ನು ಸಮಷ್ಟಿಯಾಗಿ ಅರಿತುಕೊಳ್ಳಲು ಸಹಾಯವಾಗಲೆಂದೇ ವ್ಯಷ್ಟಿಯಾಗಿಯೂ ವಿಂಗಡಿಸಿ ತಿಳಿಸಿರುತ್ತದೆ. ಶ್ರುತಿಗೆ ಈ ವ್ಯಷ್ಟಿತತ್ತ್ವದ ಪ್ರತಿಪಾದನೆಯಲ್ಲಿ ಖಂಡಿತ ತಾತ್ಪರ್ಯವಿಲ್ಲ. ಹೀಗಿದ್ದರೂ ಬೋಧನಕ್ರಮದಲ್ಲಿ ಬಿಡಿಸಿ ವಿಂಗಡವಾಗಿ ಹೇಳಿದಂತೆಲ್ಲ ವಿಷಯಗ್ರಹಣವು ಸುಲಭವಾಗುತ್ತದೆ. ಮಕ್ಕಳಿಗೆ ವಾಕ್ಯಗಳನ್ನು ಪದಗಳಾಗಿಯೂ ಪದಗಳನ್ನು ಅಕ್ಷರಗಳಾಗಿಯೂ ಅಕ್ಷರವನ್ನು ಕಾಗುಣಿತಗಳಾಗಿಯೂ ಬಿಡಿಸಿ ಹೇಳಿಕೊಡುವದಿಲ್ಲವೆ ? ಹಾಗೆ ಹೇಳಿದ್ದರಿಂದ ವಾಕ್ಯದ ಅಭಿಪ್ರಾಯವೇನೂ ಬದಲಾಗುವದಿಲ್ಲವಷ್ಟೆ ! ಹಾಗೆಯೇ ಮಕ್ಕಳಂತಿರುವ ಅಜ್ಞಾನಿಗಳಿಗೆ ಕಲ್ಪಿತಭೇದವನ್ನು ಅಂಗೀಕರಿಸಿ ಶ್ರುತಿಯು ವಿರಾಡಾತ್ಮನನ್ನು ಅವಯವಗಳ ರೂಪದಲ್ಲಿ ಚಿತ್ರಿಸಿ ಹೇಳಿಕೊಡುತ್ತಿದೆ. ಆದರೆ ಮೂಲತತ್ತ್ವವನ್ನು ಮಾತ್ರ ನಾವು ಮರೆಯಬಾರದು. ಹೀಗೆ ವಿರಾಡಾತ್ಮನ ಮುಖವನ್ನು ಬ್ರಾಹ್ಮಣನೆಂದು ಕರೆದ ಶ್ರುತಿಯು ತೋಳುಗಳನ್ನು ಕ್ಷತ್ರಿಯನೆಂದೂ ತೊಡೆಗಳನ್ನು ವೈಶ್ಯನೆಂದೂ ಕಾಲುಗಳನ್ನು ಶೂದ್ರನೆಂದೂ ಹೆಸರಿಸಿರುತ್ತದೆ. ಆದರೆ ಮುಖ, ಬಾಹು, ತೊಡೆ, ಕಾಲುಗಳೆಲ್ಲವೂ ಕೂಡಿಯೇ ವಿರಾಡಾತ್ಮನೆಂಬುದನ್ನು ಎಂದಿಗೂ ಮರೆಯಬಾರದು.

ಇಲ್ಲಿ ತಿಳಿಯಬೇಕಾದ ಮತ್ತೊಂದು ಅಂಶವಿದೆ. ಶರೀರದಲ್ಲಿ ನಾವು ಮುಖವು ಪ್ರಧಾನವೆಂದು ಭಾವಿಸಿರುವದೂ ಸಾಪೇಕ್ಷವು- ಎಂದರೆ ಒಂದಾನೊಂದು ದೃಷ್ಟಿಯಿಂದ ಮಾತ್ರವಾಗಿದೆ. ಏಕೆಂದರೆ ಮುಖದಂತೆಯೇ ಎಲ್ಲಾ ಭಾಗಗಳನ್ನೂ ನಾವು ಆಯಾ ಕಾಲಕ್ಕೆ ತಕ್ಕಂತೆ ಪ್ರಧಾನವಾಗಿ ಭಾವಿಸುವೆವು. ಉದಾಹರಣೆಗೆ : ದೇವರಿಗೆ ಅಭಿಷೇಕವನ್ನು ಮಾಡುವಾಗ ಯಾರೂ ಬಾಯಲ್ಲಿ ನೀರನ್ನು ತುಂಬಿಕೊಂಡು ಉಗುಳುವದಿಲ್ಲ. ಆಗ ಮುಖಕ್ಕಿಂತಲೂ ಹಸ್ತವೇ ಪ್ರಧಾನವಾಗುವದು. 'ಅಮೃತಹಸ್ತ'ದಿಂದ ತೆರೆಯಲ್ಪಡುವ ಹಾಗೂ ಶಿಲಾನ್ಯಾಸಮಾಡುವ ಸಮಾರಂಭಗಳನ್ನು ನೀವು ಕೇಳಿಲ್ಲವೆ ? ಇದೇ ರೀತಿಯಾಗಿ ಮಕ್ಕಳನ್ನು ಲಾಲಿಸುವಾಗ ತೊಡೆಯಮೇಲೆಯೇ ಕುಳ್ಳಿರಿಸಿಕೊಳ್ಳುವೆವೇ ಹೊರತು ತಲೆಯಮೇಲೆ ಅಲ್ಲ. ತಾಯಿಯ ತೊಡೆಯಮೇಲೆಯೇ ನಾವೆಲ್ಲರೂ ಬೆಳೆದು ದೊಡ್ಡವರಾಗಿರುವೆವು. ಹಾಗೆಯೇ ಹಿರಿಯರನ್ನು ಗೌರವಿಸುವಾಗ 'ಪಾದಪೂಜೆ' ಮಾಡುವೆವು. ಗುರುಗಳಿಗೆ ನಮಸ್ಕರಿಸುವಾಗ ಪಾದಗಳನ್ನೇ ಮುಟ್ಟುತ್ತೇವೆ. ಅವರ ತಲೆಯನ್ನು ಮುಟ್ಟುವದಿಲ್ಲ. ಈ ಉದಾಹರಣೆಗಳಿಂದ ನೋಡಿದರೆ ಶರೀರದಲ್ಲಿ ಮುಖ, ಹಸ್ತ, ಊರು, ಪಾದಗಳಿಗೆ ಎಲ್ಲಕ್ಕೂ ಸಮಪ್ರಾಧಾನ್ಯವಿದೆಯೇ ಹೊರತು ತಾರತಮ್ಯವಿರುವದೇ ಇಲ್ಲ. ಇದೇ ತತ್ತ್ವವನ್ನು ವಿರಾಡಾತ್ಮನ ಸ್ವರೂಪಕ್ಕೂ ಅನ್ವಯಿಸಿದರೆ ಆ ಸಮಷ್ಟ್ಯಾತ್ಮನ ಶರೀರಾವಯವಗಳಾದ ಬ್ರಾಹ್ಮಣಾದಿಜಾತಿಗಳಲ್ಲಿಯೂ ಸಮಪ್ರಾಧಾನ್ಯತೆಯೂ ಸಹಕಾರತತ್ತ್ವದ ಆಧಾರವೂ ಎದ್ದು ಕಂಡುಬರುತ್ತಿದೆ. ಇದನ್ನರಿಯದೆ ಸ್ವಾರ್ಥಿಗಳು ಜಾತಿದ್ವೇಷಗಳನ್ನು ಬಿತ್ತುತ್ತಿದ್ದಾರೆ. ಅದು ವಿರಾಡಾತ್ಮನಿಗೆ ಮಾಡುತ್ತಿರುವ ಅಪಚಾರವಲ್ಲದೆ ಮತ್ತೇನು ?

ಈಗ ವಿರಾಡಾತ್ಮನನ್ನು ಬಿಡಿಯಾಗಿ ವಿಚಾರಮಾಡುವದರಿಂದಲೂ ದೊರಕುವ ಲಾಭವನ್ನು ಕುರಿತು ಚಿಂತಿಸೋಣ. ನಮ್ಮ ಶರೀರವೆಲ್ಲ ನಾವೇ- ಎಂಬ ಪೂರ್ಣಾಭಿಮಾನವು ನಮ್ಮದಾಗಿರುವಂತೆಯೇ ವ್ಯವಹಾರದಲ್ಲಿ ನಮ್ಮ ದೇಹವನ್ನೇ ನಾವೇ ತಾರತಮ್ಯದಿಂದ ಕಾಣುತ್ತೇವೆಂಬುದೂ ನಿಜವಾಗಿರುತ್ತದೆ. ಉದಾಹರಣೆಗೆ ಯಾರಾದರೂ ಏನನ್ನಾದರೂ ಕೊಟ್ಟರೆ ಬಲಗೈನಿಂದ ತೆಗೆದುಕೊಳ್ಳುವೆವು. ವಧುವು ವರನಿಗೆ ಕುಂಕುಮವಿಡಲು

ಬಲಗೈ ಚಾಚುತ್ತಾಳೆ. ಎಡಗೈಯನ್ನಲ್ಲ. ಎಡಕ್ಕಿಂತ ಬಲವು ಶ್ರೇಷ್ಠವೆಂದು ನಮ್ಮ ಭಾವನೆಯಿದೆ. ಹಾಗೆಯೇ ಪೂಜ್ಯವಸ್ತುಗಳನ್ನು ಕೈಗಳಿಂದ ಮುಟ್ಟುವೆವು. ಕಾಲಿನಿಂದ ಮುಟ್ಟುವದಿಲ್ಲ. ಕಾಲು ನಮ್ಮದೇ ಆದರೂ ಈ ಸಂದರ್ಭದಲ್ಲಿ ಅದು ಕೈಗಳಿಗಿಂತ ಕೀಳಾದದ್ದು ಎಂದು ಭಾವನೆಯಿದೆ. ಇದೇ ರೀತಿಯಾಗಿ ವಿರಾಟ್‌ಪುರುಷನ ಶರೀರದಲ್ಲಿಯೂ ವ್ಯವಹಾರದೃಷ್ಟಿಯಿಂದಾಗಿರುವ ಉಚ್ಚನೀಚಭಾವನೆಗಳಿಗನುಸಾರವಾಗಿ ಬ್ರಾಹ್ಮಣನು ಶ್ರೇಷ್ಠನೆಂದೂ ಉಳಿದವರು ಅವನಿಗಿಂತ ಕಡಿಮೆಯೆಂದೂ ಕಲ್ಪಿಸಲಾಗಿದೆ. ಇದು ಕಲ್ಪನೆಯಾದ್ದರಿಂದ ತತ್ತ್ವದರ್ಶಿಗಳ ದೃಷ್ಟಿಯಿಂದ ಸಮವಾದ ಬ್ರಹ್ಮವೊಂದೇ ಪರಮಾರ್ಥವಾಗಿದೆ. ಆದರೂ ದ್ವೈತವು ಸತ್ಯವೆಂಬ ನಂಬಿಕೆಯುಳ್ಳ ಅಜ್ಞರಾದ ನಾವು ಜ್ಞಾನವನ್ನು ಪಡೆದುಕೊಳ್ಳುವವರೆಗೆ ಈ ಕಲ್ಪಿತವಾದ ವ್ಯವಹಾರವನ್ನು ಅನುಸರಿಸಬೇಕಾಗಿರುತ್ತದೆ. ನಿಜವಾಗಿ ಹೇಳುವದಾದರೆ ಬ್ರಾಹ್ಮಣನು ಶ್ರೇಷ್ಠನೆಂದು ತಾನೇ ಹೇಳಿಕೊಳ್ಳುವವನು ಬ್ರಾಹ್ಮಣನಲ್ಲ. ಏಕೆಂದರೆ ಬ್ರಹ್ಮವನ್ನು ಕಂಡವನೇ ನಿಜವಾದ ಬ್ರಾಹ್ಮಣನಾದ್ದರಿಂದ ಅವನ ದೃಷ್ಟಿಯಲ್ಲಿ ಶ್ರೇಷ್ಠ, ಕನಿಷ್ಠಗಳಿರುವದೇ ಇಲ್ಲ. ಆದ್ದರಿಂದ ಬ್ರಹ್ಮವಿದನಲ್ಲದವನೇ ಬ್ರಾಹ್ಮಣನು ಶ್ರೇಷ್ಠನೆಂದೂ ಉಳಿದವರು ಕಡಿಮೆಯೆಂದೂ ಕಲ್ಪಿಸಿರುತ್ತಾನೆ. ಇದು ಅವನ ದೃಷ್ಟಿಭೇದದ ಫಲವಾಗಿದೆ. ಪ್ರಪಂಚದಲ್ಲಿ ಅಜ್ಞಾನಿಗಳ ಸಂಖ್ಯೆಯು ಬಹಳವಾಗಿರುವದರಿಂದ ನಾವೆಲ್ಲರೂ ಬ್ರಹ್ಮನಿಷ್ಠರಾಗುವವರೆಗೂ ಈ ಭೇದವ್ಯವಹಾರವನ್ನು ಸಾಗಿಸುತ್ತಿರಲೇಬೇಕಾಗಿದೆ. ಭೇದಬುದ್ಧಿಯಿರುವಾಗ ಮಾತ್ರ ಎಲ್ಲವನ್ನೂ ಕಲಬೆರಕೆಮಾಡಿದರೆ ತಪ್ಪಾಗುವದು. ಅದಕ್ಕಾಗಿಯೇ ಶಾಸ್ತ್ರವು ಭೇದದರ್ಶಿಗಳಿಗಾಗಿ ಕಾನೂನು-ಕಟ್ಟಲೆಗಳನ್ನು ಧರ್ಮವೆಂಬ ಹೆಸರಿನಲ್ಲಿ ರಚಿಸಿರುತ್ತದೆ. ಈ ಧರ್ಮವೇ ವರ್ಣಾಶ್ರಮಧರ್ಮರೂಪವಾಗಿದೆ. ಇದರ ಪ್ರಕಾರ ನಾಲ್ಕು ಜಾತಿಗಳೂ ಬೇರೆಬೇರೆಯಾಗಿದ್ದು ವಿರಾಟ್‌ಪುರುಷನ ಶರೀರದಿಂದಲೇ ಹೊರಬಂದಿವೆ. ಹೀಗೆ ವ್ಯವಹಾರದಲ್ಲಿ ದ್ವೈತವನ್ನೂ ಜ್ಞಾನದೃಷ್ಟಿಯಲ್ಲಿ ಅದ್ವೈತವನ್ನೂ ನಾವು ಅನುಸರಿಸಿದಲ್ಲಿ ಯಾವ ವಿರೋಧಗಳಿಗೂ ಅವಕಾಶವಿರುವದಿಲ್ಲ. ದ್ವೈತದೃಷ್ಟಿಯು ಕೆಲವು ದೂರದವರೆಗೆ ತತ್ತ್ವದ ಅರಿವಿಗೆ ಸಹಾಯಕವೇ ಆಗಿದೆ. ಆದ್ದರಿಂದ ಪ್ರಾರಂಭದಲ್ಲಿ ನಾವು ವಿರಾಡಾತ್ಮನ ವ್ಯಷ್ಟಿಶರೀರಗಳಾದ ಅಥವಾ ಸಮಷ್ಟಿ

ಶರೀರಾವಯವಗಳಾದ ವರ್ಣಗಳ ಅಂತರಂಗಪರಿಚಯವನ್ನು ಮಾಡಿ ಕೊಳ್ಳಲೇಬೇಕು.

## ಬ್ರಾಹ್ಮಣೋಽಸ್ಯ ಮುಖಮಾಸೀತ್–೨

ಪುರುಷಸೂಕ್ತದ ಹದಿಮೂರನೆಯ ಮಂತ್ರದ ವಿಚಾರವನ್ನೇ ಈಗ ಮುಂದುವರಿಸೋಣ. ವಿರಾಡಾತ್ಮನ ಮುಖಬಾಹೂರುಪಾದಗಳಿಂದ ಸೃಷ್ಟವಾಗಿರುವ ಬ್ರಾಹ್ಮಣಾದಿಜಾತಿಗಳ ವಿಷಯಕ್ಕೆ ತತ್ತ್ವದೃಷ್ಟಿಯಿಂದ ತಿಳಿಯಬೇಕಾದದ್ದು ಬಹಳಪಾಗಿದೆ. ಈ ವಿಂಗಡವನ್ನು ಜಗತ್ತಿನ ಸ್ಥಿತಿಗೆ ಸಹಾಯಕವಾಗಲೆಂದು ಭಗವಂತನೇ ನಿರ್ಮಿಸಿದ್ದಾನೆ. ಹಾಗೂ ಸ್ಪಷ್ಟವಾಗಿ 'ಚಾತುರ್ವರ್ಣ್ಯಂ ಮಯಾ ಸೃಷ್ಟಮ್' ಎಂದು ಗೀತೆಯಲ್ಲಿ ತಿಳಿಸಿಯೂ ಇರುತ್ತಾನೆ. ಆದ್ದರಿಂದ ಈಗ ಈ ಚಾತುರ್ವರ್ಣ್ಯದವರ ಕರ್ತವ್ಯಗಳೇನು ? ಅವು ಹೇಗೆ ಜಗತ್ತಿನ ಸ್ಥಿತಿಗೆ ಎಂದರೆ ಪ್ರಪಂಚದ ಜೀವನಕ್ರಮಕ್ಕೆ ಪ್ರಯೋಜನಕರವಾಗಿವೆ ? ಎಂಬಿದನ್ನು ವಿಚಾರಮಾಡೋಣ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದುಕಡೆ 'ಮೊದಲು ಸೃಷ್ಟಿಯ ಆರಂಭದಲ್ಲಿ ಬ್ರಹ್ಮವೊಂದೇ ಇದ್ದಿತು. ಆದರೆ ಅದೊಂದೇ ಪ್ರಪಂಚವನ್ನೆಲ್ಲ ಕಾಪಾಡಲು ಸಮರ್ಥವಾಗಲಿಲ್ಲ. ಆದ್ದರಿಂದ ಸೃಷ್ಟಿಯನ್ನು ಮುಂದುವರಿಸಿ ಕ್ಷತ್ರವನ್ನು ಉಂಟುಮಾಡಿತು. ಅದೂ ಸಾಲದೆಹೋದಾಗ ವಿಶವನ್ನೂ ಅನಂತರ ಶೂದ್ರವನ್ನೂ ಉಂಟುಮಾಡಿತು. ಕಡೆಗೆ ಅದುಕೂಡ ಸಮರ್ಥವಾಗದೆ ಇದ್ದದ್ದರಿಂದ ಧರ್ಮವನ್ನು ಸೃಷ್ಟಿಸಿತು'–ಎಂದು ತಿಳಿಸಿದೆ. ಇದರ ಅಭಿಪ್ರಾಯವೇನೆಂದರೆ : ಮೊದಲಿದ್ದ ಒಂದೇ ದೇವತೆ ಅಗ್ನಿಯೆಂಬುದು. ಅದು ಪ್ರಪಂಚವ್ಯವಹಾರಕ್ಕೆ ಸಾಲದ್ದರಿಂದ ಇಂದ್ರ–ವರುಣರನ್ನೂ ಅನಂತರ ವಸು–ರುದ್ರಾದಿತ್ಯರನ್ನೂ ಅನಂತರ ಪೂಷಾ ಎಂಬುವನನ್ನೂ ಕಡೆಗೆ ಧರ್ಮವನ್ನೂ ಬ್ರಹ್ಮವೇ ಸೃಷ್ಟಿಸಿತು. ಹೀಗೆ ಸೃಷ್ಟರಾದ ದೇವತೆಗಳಿಗೇ ಬ್ರಾಹ್ಮಣಾದಿಜಾತಿಗಳೆಂದು ಹೆಸರಾಯಿತು. ಹೀಗೆ ಬ್ರಾಹ್ಮಣನು ಅಗ್ನಿದೇವತೆಗೆ ಪ್ರತಿನಿಧಿಯೆಂದೂ ಕ್ಷತ್ರಿಯನು ಇಂದ್ರ–ವರುಣಾದಿಗಳಿಗೂ ವೈಶ್ಯನು ವಸು–ರುದ್ರಾದಿಗಳಿಗೂ ಶೂದ್ರನು ಪೂಷಾ–ಎಂಬ ದೇವತೆಗೂ ಪ್ರತಿನಿಧಿಗಳೆಂದು

ತಿಳಿಸಿರುತ್ತದೆ. ಹೀಗೆ ಚಾತುರ್ವರ್ಣ್ಯದವರೂ ದೇವಾಂಶಸಂಭೂತರೇ ಆಗಿದ್ದು ಆ ಎಲ್ಲಾ ದೇವತೆಗಳಿಗೂ ಹಿರಿಯನೂ ನಿಯಾಮಕನೂ ಆಗಿ ಧರ್ಮವೆಂಬ ದೇವತೆಯೂ ಇರುತ್ತಾನೆ. ಈ ನಾಲ್ಕು ವರ್ಣಗಳಿಗೆ ಸೇರಿದವರೆಲ್ಲರೂ ಆ ಧರ್ಮದೇವತೆಗೆ ಅಧೀನರು. ಧರ್ಮವು ಜಗತ್ತನ್ನು ಆಳುತ್ತದೆ —ಹಾಗೂ ಕಾಪಾಡುತ್ತದೆ. ಧರ್ಮವು ನಷ್ಟವಾದರೆ ಪ್ರಪಂಚವು ನಾಶವಾಗಿ ಬಿಡುತ್ತದೆಯಾದ್ದರಿಂದ ಸ್ಥಿತಿಕಾಲದಲ್ಲಿಯೇ ಪ್ರಲಯವು ಸಂಭವಿಸದಂತೆ ತಡೆಗಟ್ಟಲು ಧರ್ಮವನ್ನು ರಕ್ಷಿಸುವ ಪೂರ್ಣಜವಾಬ್ದಾರಿಯನ್ನು ಭಗವಂತನು ಹೊತ್ತಿರುತ್ತಾನೆ. ಮತ್ತು ಧರ್ಮವು ಖಿಲವಾದಾಗ ಕಾಪಾಡಲು ಆತನು ಯುಗಯುಗದಲ್ಲಿಯೂ ಅವತಾರಮಾಡುತ್ತಾನೆ. ಹೀಗೆ ಸೃಷ್ಟಿಕರ್ತನಿಂದಲೇ ಜಗತ್ತಿನ ಪರಿಪಾಲನೆಗಾಗಿ ಧರ್ಮವೂ ಅದನ್ನು ಪರಿಪಾಲಿಸಿ ಮುಂದುವರಿಸಲು ವರ್ಣಗಳ ಹೆಸರಿನಿಂದ ತಕ್ಕ ವ್ಯವಸ್ಥೆಯೂ ಅನಾದಿಕಾಲದಿಂದಲೂ ನಡೆದು ಬಂದಿದೆ. ನೀರು ಕೆಳಕ್ಕೆ ಹರಿಯುವದು, ಬೆಂಕಿ ಮೇಲಕ್ಕೆ ಉರಿಯುವದು ಹೇಗೆ ಸ್ವಭಾವವೋ, ಸತ್ಯವೋ, ಹಾಗೆಯೇ ಈ ಧರ್ಮವ್ಯವಸ್ಥೆಯೂ ಜಗತ್ತಿನ ಪಾಲನೆಗೆ ಸಹಜವಾಗಿಯೇ ಇದ್ದುಕೊಂಡಿರುವ ಆವಶ್ಯಕತೆಯೂ ಪರಮಸತ್ಯವೂ ಆಗಿದೆ. ಇದನ್ನೇ ಸನಾತನಧರ್ಮವೆಂದು ಹಿರಿಯರು ಕರೆಯುತ್ತಾರೆ.

ಇಂಥ ಧರ್ಮವನ್ನು ಅನುಷ್ಠಾನಮಾಡುವದು, ರಕ್ಷಿಸುವದು, ಪೋಷಣೆ ಮಾಡುವದು, ಶುಶ್ರೂಷೆಮಾಡುವದು– ಈ ನಾಲ್ಕು ಕೆಲಸಗಳು ನಾಲ್ಕು ವರ್ಣದವರಿಗೆ ಹಂಚಿಕೊಂಡಿವೆ. ಸರ್ಕಾರದಲ್ಲಿ ಕಚೇರಿಯಲ್ಲಿರುವ ಮುಖ್ಯ ಅಧಿಕಾರಿ, ಅವರಿಗೆ ಸಹಾಯಕ ಕಾರ್ಯದರ್ಶಿ, ಅವನಿಗೊಬ್ಬ ಗುಮಾಸ್ತ, ಅವನಿಗಿಂತ ಕಿರಿಯನಾದ ಸೇವಕ– ಈ ರೀತಿ ನಾಲ್ಕುವರ್ಗದವರಿದ್ದೇ ಇರುತ್ತಾರೆ. ಸೇವಕನು ಮೇಲಿನ ಮೂವರಿಗೂ ಸೇವೆಮಾಡುತ್ತಾನೆ. ಒಬ್ಬ ಪ್ರಜೆಗೆ ಏನಾದರೂ ಸರ್ಕಾರದ ವತಿಯಿಂದ ಕೆಲಸವಾಗಬೇಕಾದರೆ ಅಧಿಕಾರಿಯು ಬುದ್ಧಿಯನ್ನುಪಯೋಗಿಸಿ ನಿರ್ದೇಶಿಸಬೇಕು. ಕಾರ್ಯದರ್ಶಿಯು ಪತ್ರವನ್ನು ಬರೆದು ಸಿದ್ಧಗೊಳಿಸಬೇಕು. ಗುಮಾಸ್ತನು ಅದನ್ನು ದಾಖಲು ಮಾಡಿಕೊಳ್ಳಬೇಕು. ಜವಾನನು ಅಂಚೆಚೀಟಿ ಹಚ್ಚಿ ಪೋಸ್ಟ್ಮಾಡಬೇಕು. ಹಾಗಾದರೆ ಸರ್ಕಾರದ ಯಂತ್ರವು ನಡೆದು ಪ್ರಜೆಯ ಕ್ಷೇಮವು ಕಾಪಾಡಲ್ಪಟ್ಟು

ಸುಖವಾಗುತ್ತದೆ. ಹಾಗೆಯೇ ಭಗವಂತನ ಸರ್ಕಾರದಲ್ಲಿ ಬ್ರಾಹ್ಮಣನೆನಿಸಿ ಕೊಂಡವನು ಧರ್ಮವನ್ನು ಅನುಷ್ಠಾನಮಾಡಬೇಕು. ಕ್ಷತ್ರಿಯನು ಧರ್ಮಾ ನುಷ್ಠಾನಕ್ಕೆ ಬರಬಹುದಾದ ಅಡ್ಡಿಗಳನ್ನು ಪರಿಹರಿಸಿ ರಕ್ಷಿಸಬೇಕು. ವೈಶ್ಯನು ಧರ್ಮಪೋಷಣೆಗೆ ಬೇಕಾದ ಸಾಮಗ್ರಿಗಳನ್ನು ಉತ್ಪತ್ತಿಮಾಡಿ ಒದಗಿಸಿ ಕೊಡಬೇಕು. ಶೂದ್ರನು ಧರ್ಮವನ್ನು ಅನುಷ್ಠಿಸಿ, ಪಾಲಿಸಿ, ಪೋಷಿಸು ವವರಿಗೆಲ್ಲ ಸೇವೆಯನ್ನು ಮಾಡುತ್ತಾ ಸಹಾಯಮಾಡಬೇಕು. ಈ ಸಹಾಯ -ಸಹಕಾರಗಳಿಲ್ಲದಿದ್ದರೆ ಯಾವ ಕೆಲಸವೂ ನಡೆಯಲಾರದು. ಅಡಿಗೆಮಾಡು ವವನು ಎಷ್ಟು ಮುಖ್ಯನೋ ಊಟಮಾಡುವವನೂ ಅಷ್ಟೇ ಮುಖ್ಯನು. ಮಾಡಿದ ಅಡಿಗೆಯನ್ನೆಲ್ಲ ಅಡಿಗೆಯವನೊಬ್ಬನೇ ತಿನ್ನಲಾಗುವದಿಲ್ಲ. ಹಾಗೆ ಯೇ ವೈಶ್ಯನು ಬೆಳೆದದ್ದನ್ನೂ ಶೂದ್ರನು ಬೆಳೆಗೆ ಸಹಾಯಮಾಡಿ ಉತ್ಪತ್ತಿ ಮಾಡಿದ್ದನ್ನೂ ಬ್ರಾಹ್ಮಣನು ಊಟಮಾಡಿ ಕರ್ಮವನ್ನು ಆಚರಿಸಿದರೆ ತಪ್ಪೇನು ? ಒಂದುವೇಳೆ ಈಗಿನ ಕೆಲವು ಸುಧಾರಕರ ಮಾತಿನಂತೆ ವರ್ಣ ವ್ಯವಸ್ಥೆಯನ್ನು ತೆಗೆದು ಬ್ರಾಹ್ಮಣಾದಿ ಹೆಸರುಗಳನ್ನು ಅಳಿಸಿಹಾಕಿದರೂ ವರ್ಣಧರ್ಮದ ತಿರುಳನ್ನೇನೂ ನಾಶಮಾಡಲಾಗುವದಿಲ್ಲ. ಬ್ರಾಹ್ಮಣ ಎಂಬಿದರ ಬದಲು ಬುದ್ಧಿಜೀವಿ-ಎಂದೂ ಕ್ಷತ್ರಿಯವೈಶ್ಯಶೂದ್ರರಿಗೆ ಕ್ರಮವಾಗಿ ಅಧಿಕಾರಿ, ಧನವಂತ, ಕಾರ್ಮಿಕ-ಎಂದೂ ಹೆಸರು ಬದಲಾದೀತೇ ಹೊರತು ಮತ್ತೇನೂ ಸ್ವಭಾವವು ಬದಲಾಗಲಾರದು. ಆದ್ದರಿಂದ ಹಿಂದಿನಂತೆ ಜಾತಿ ಗಳಲ್ಲಿ ಸಾಮರಸ್ಯವನ್ನೇರ್ಪಡಿಸುವದೇ ಲಾಭಕರವೇ ಹೊರತು ಅವುಗಳನ್ನು ಕಿತ್ತುಹಾಕುವದಲ್ಲ- ಎಂದು ತಿಳಿಯಬೇಕು.

ಜಾತಿಧರ್ಮಗಳಿಗೆ ಸಂಬಂಧಪಟ್ಟಂತೆ ಈ ಲೌಕಿಕಪ್ರಯೋಜನಗಳೂ ವ್ಯವಹಾರದಲ್ಲಿ ತಾರತಮ್ಯಗಳೂ ರಾಜಕೀಯ, ಸಾಮಾಜಿಕಸುಧಾರಣೆಗಳೂ ಏನೇ ಇರಲಿ, ಪ್ರಜೆ ಎಂದಮೇಲೆ ಅವನು ಹುಟ್ಟುವಾಗಲೇ ಒಂದಾನೊಂದು ಗುಣಕ್ಕೆ ಮುಖ್ಯವಾಗಿ ಕಟ್ಟುಬಿದ್ದಿರುತ್ತಾನೆಂಬುದು ಪರಮಸತ್ಯವು. ಮನುಷ್ಯನು ಹುಟ್ಟಿ ಬೆಳೆದಾಗಲೇ ಅವನಲ್ಲಿ ಅಡಗಿದ್ದ ಆ ಗುಣವು ಹೊರಗೆ ತೋರಿಕೊಳ್ಳುವದು. ಆದ್ದರಿಂದ ಜನ್ಮದೊಡನೆಯೇ ಸಾಗಿಬಂದಿರುವ ಗುಣ ವಲ್ಲಿ ಯಾವದು ಯಾವನಿಗೆ ಎದ್ದುಕೊಂಡಿರುವದೋ ಅಂಥವರನ್ನೆಲ್ಲ ಒಂದು

ಗುಂಪಾಗಿ ಮಾಡಲೇಬೇಕಾಗುವದು. ಇದು ಅನಿವಾರ್ಯ. ನಮ್ಮ ಋಷಿಗಳೂ ಪೂರ್ವಜರೂ ಇದೇ ತತ್ತ್ವದ ಆಧಾರದಿಂದ ಸತ್ತ್ವಪ್ರಧಾನನಾದವನನ್ನು ಬ್ರಾಹ್ಮಣನೆಂದು ವಿಂಗಡಿಸಿದರು. ಅವನಿಗೆ ಧರ್ಮಾನುಷ್ಠಾನವೊಂದನ್ನೇ ಕರ್ಮವೆಂತ ಗೊತ್ತುಪಡಿಸಿದರು. ಅನಂತರ ಆ ಸ್ವಭಾವವೇ ಅವನ ವಂಶೀಕರಲ್ಲಿಯೂ ಮುಂದುವರೆದದ್ದರಿಂದ ಆಯಾ ಜಾತಿಧರ್ಮಕ್ಕೆ ಹುಟ್ಟೇ ಮೂಲವಾಯಿತು. ಹೀಗಿದ್ದರೂ ಅಪರೂಪವಾಗಿ ಎಲ್ಲಾ ಜಾತಿಯಲ್ಲಿಯೂ ಅನ್ಯಧರ್ಮದ, ಅನ್ಯಗುಣದ ಪ್ರಜೆಗಳು ಹುಟ್ಟಿದರೂ ಅದು ಅಪವಾದ (Exception)ವೇ ಹೊರತು ಸರ್ವಸಾಮಾನ್ಯವಲ್ಲ. ಆದ್ದರಿಂದ ಜಾತಿಧರ್ಮಗಳು ನಿಜವಾಗಿಯೂ ಹುಟ್ಟಿನಿಂದಲೇ ಗೊತ್ತುಮಾಡಲ್ಪಟ್ಟವೆ. ಇವು ಪ್ರಪಂಚವು ಲಯವಾಗುವವರೆಗೂ ನಾಶವಾಗುವದಿಲ್ಲ. ಆದರೆ ರೂಪಾಂತರಹೊಂದಿದರೆ ನಷ್ಟವೇನಿಲ್ಲ, ಹೆಸರು ಬದಲಾದರೂ ಭಯವೇನಿಲ್ಲ. ಜಾತಿಯು ಜಾತಿಯೇ ಆಗಿ ಬದುಕುವದರಲ್ಲಿ ಸಂಶಯವೇ ಇಲ್ಲ. ಇನ್ನು ಇದು ಬದಲಾಗಬೇಕಾದರೆ ಹುಟ್ಟುಗುಣಗಳೇ ಬದಲಾಗಬೇಕು. ಅದು ಕೇವಲ ಅಲ್ಪಸಂಖ್ಯೆಯಲ್ಲಿ ಮಾತ್ರ ಸಂಭವಿಸಬಹುದು ; ಇರಲಿ. ಈಗ ಈ ಜಾತಿಧರ್ಮಗಳು ಗುಣಾನುಸಾರವಾಗಿ ಗೊತ್ತುಮಾಡಲ್ಪಟ್ಟಿರುವದರಿಂದ ಆಯಾ ಗುಣವಿಶಿಷ್ಟರಾಗಿ ಭಗವದಿಚ್ಛೆಯಂತೆ ಹುಟ್ಟುವ ಪ್ರಜೆಗಳನ್ನು ಯಾವ ವೈಜ್ಞಾನಿಕನೂ ಮಾರ್ಪಡಿಸಲಾರನು. ಕರಿಯನನ್ನು ಬಿಳಿಯನನ್ನಾಗಿಯೂ ದುಷ್ಟನನ್ನು ಶಿಷ್ಟನನ್ನಾಗಿಯೂ ಬದಲಾಯಿಸುವ ಪ್ರಯತ್ನವು ವಿಜ್ಞಾನಶಾಸ್ತ್ರದಿಂದಲೂ ಈವರೆಗೂ ಆಗಿಲ್ಲ. ಜಗದ್ವೈಚಿತ್ರ್ಯವನ್ನು ಪೂರ್ತಿ ಅಳಿಸಿಹಾಕುವದೂ ಆದರಿಂದ ಸಾಧ್ಯವಿಲ್ಲ. ಆದ್ದರಿಂದ ಸನಾತನಧರ್ಮದಂತೆ ಹುಟ್ಟುಗುಣಗಳ ಭೇದದಿಂದ ಉಂಟಾಗಿರುವ ಜಾತಿಗಳಿಗೆ ಅವುಗಳಿಗೆ ತಕ್ಕ ಕರ್ಮಗಳನ್ನೇ ನಿರ್ದೇಶಿಸಿ ಎಲ್ಲಾ ಜಾತಿಯವರಿಗೂ ಸ್ವಧರ್ಮಾಚರಣೆಯನ್ನೇ ಕರ್ತವ್ಯವನ್ನಾಗಿ ಮಾಡಿದರೆ ಇಹಪರಗಳೆರಡಕ್ಕೂ ದಾರಿಯಾದೀತು. ಜಾತಿಯು ಇಹದಲ್ಲಿ ವೃತ್ತಿ, ಉದ್ಯೋಗ, ಕೀರ್ತಿಗಳನ್ನೂ ಪರದಲ್ಲಿ ಸ್ವಧರ್ಮದ ಅನುಷ್ಠಾನನಿಮಿತ್ತವಾದ ಸ್ವರ್ಗಾದಿಫಲಗಳನ್ನೂ ಇನ್ನೂ ಬೇಕೆಂದರೆ ಮುಕ್ತಿಯನ್ನೂ ಒದಗಿಸಿಕೊಡುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಅದು ಮಾನವನಿಗೆ ತಾನು ಯಾರು ? ತನ್ನ ಗುರಿಯೇನು ?

ಮಾಡಬೇಕಾದದ್ದು ಯಾವದು, ಬಾರದ್ದು ಯಾವದು ? ಎಂಬ ವಿವೇಕ ವನ್ನು ಒದಗಿಸುತ್ತದೆ. ಬಲ್ಲವರೆಲ್ಲರೂ ಯೋಚಿಸಲಿ.

---

## ೧೧. ಬ್ರಾಹ್ಮಣೋಽಸ್ಯ ಮುಖಮಾಸೀತ್–೩

ಪುರುಷಸೂಕ್ತದ ಹದಿಮೂರನೆಯ ಮಂತ್ರದ ವಿಷಯದಲ್ಲಿಯೇ ಇನ್ನಷ್ಟು ವಿಚಾರಮಾಡುತ್ತಿರುವ ಬಗ್ಗೆ ವಾಚಕರು ಕ್ಷಮಿಸಬೇಕು. ಈ ಮಂತ್ರವು ವರ್ಣಾಶ್ರಮಧರ್ಮಗಳ ಪ್ರಸ್ತಾಪಕ್ಕೆ ಸೂಕ್ತವಾದ ಸ್ಥಳವಾಗಿದ್ದು ಈಗಿನ ಕಾಲಕ್ಕೆ ಜನರಿಗೆ ಇದರ ಬಗ್ಗೆ ಉಂಟಾಗಿರುವ ದುರ್ಬುದ್ಧಿಯನ್ನು ಹೋಗಲಾಡಿಸಲು ಹಾಗೂ ಕಿಂಚಿತ್ತಾದರೂ ನಿಜಾಂಶವನ್ನು ತಿಳಿಸಲು ಇದು ಸುಸಂದರ್ಭವಾಗಿದೆ. ಆದ್ದರಿಂದ ಈಗ ವರ್ಣಾಶ್ರಮಧರ್ಮಗಳ ತಳಹದಿ ಯಿಂದ ಬ್ರಹ್ಮವಿದ್ಯೆಯು ಹೇಗೆ ಸುಲಭವಾಗಿ ಸಿದ್ಧಿಸುತ್ತದೆಯೆಂಬುದನ್ನು ತಿಳಿಸಲಾಗುವದು.

ಲೌಕಿಕದೃಷ್ಟಿಯಿಂದ ಚಾತುರ್ವರ್ಣ್ಯಗಳ ವಿಭಾಗವನ್ನು ನೋಡು ತ್ತಿರುವವರು ನಿಜವಾಗಿಯೂ ಪಕ್ಷಪಾತದೃಷ್ಟಿಯವರೆಂದು ಹೇಳಬಹುದು. ಏಕೆಂದರೆ ಈಗ ಸಮಾಜದಲ್ಲಿ ಉಂಟಾಗಿರುವ ಅನೈಕ್ಯತೆಗೆ ಜಾತಿಧರ್ಮಾಚರ ಣೆಯೇ ಮುಖ್ಯಕಾರಣವೆಂದು ಅವರು ಭಾವಿಸಿದಂತಿದೆ. ಇದು ಖಂಡಿತ ತಪ್ಪು ಅಭಿಪ್ರಾಯ. ಏಕೆಂದರೆ ಮಾನವನು ಹುಟ್ಟಿದಾಗಿನಿಂದಲೇ ರಾಗ ದ್ವೇಷಗಳಿಗೆ ವಶನಾಗಿರುತ್ತಾನೆ. ಎಲ್ಲಾ ಪ್ರಾಣಿಗಳೂ ಸೃಷ್ಟಿಯ ಆರಂಭ ದಲ್ಲಿಯೇ ಇಚ್ಛಾದ್ವೇಷರೂಪವಾದ ದ್ವಂದ್ವಮೋಹಕ್ಕೆ ತುತ್ತಾಗಿರುತ್ತಾರೆ– ಎಂದು ಭಗವಂತನು ಗೀತೆಯಲ್ಲಿ ತಿಳಿಸಿರುತ್ತಾನೆ. ಆದ್ದರಿಂದ ಒಂದೇ ಜಾತಿಯಲ್ಲಿ, ಒಬ್ಬರೇ ತಂದೆತಾಯಿಗಳಲ್ಲಿ ಜನಿಸಿರುವ ಸೋದರರು ಕೂಡ ಸಹಬಾಳ್ವೆಯನ್ನು ನಡೆಸಲಾಗದೆ ಅನೈಕ್ಯತೆಗೆ ವಶರಾಗಿ ಸಂಕಟಪಡುತ್ತಿರು ವದನ್ನು ನಾವು ಕಾಣುತ್ತಿದ್ದೇವೆ. ಜೊತೆಗೆ ದೇಶ, ಭಾಷೆ, ಬಣ್ಣ, ವಿದ್ಯೆ, ಬಡತನ ಸಿರಿತನಗಳು–ಮುಂತಾದ ಹಲವಾರು ಕಾರಣಗಳಿಂದಲೂ ಸಮಾಜ ವಲ್ಲಿ ಐಕ್ಯತೆಗೆ ಭಂಗವುಂಟಾಗುತ್ತಲೇ ಇದೆ. ಹೀಗೆ ಅನೈಕ್ಯತೆಗೆ ಮಾನವ

ಸಹಜವಾದ ರಾಗದ್ವೇಷಾಹಂಕಾರಾಭಿಮಾನಾದಿಗಳೇ ಮುಖ್ಯವಾದ ಕಾರಣಗಳಾಗಿರುವಲ್ಲಿ ಈ ತಪ್ಪನ್ನು ಜಾತಿಧರ್ಮಗಳ ಆಚರಣೆಯ ಮೇಲೆ ಹಾಕುವದು ಎಷ್ಟುಮಟ್ಟಿಗೆ ಸರಿಯಾದೀತು ? ವಿಚಾರವಂತರಾದವರು ಯೋಚಿಸಬೇಕು.

ಇದು ಹೇಗಾದರೂ ಇರಲಿ. ಈಗ ನಾವು ಬ್ರಾಹ್ಮಣ್ಯದ ಹೆಚ್ಚುಗಾರಿಕೆ ಏನೆಂಬುದನ್ನು ತಾತ್ತ್ವಿಕವಾಗಿ ತಿಳಿಯೋಣ. ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಒಂದು ಕಡೆ 'ಭೂಮಿಯ ಬ್ರಹ್ಮವಾದ ಬ್ರಾಹ್ಮಣ್ಯದ ರಕ್ಷಣೆಗಾಗಿ ಭಗವಂತನು ಅವತಾರಮಾಡಿದನು ; ಏಕೆಂದರೆ ಬ್ರಾಹ್ಮಣ್ಯವನ್ನು ರಕ್ಷಿಸಿದರೆ ವೈದಿಕಧರ್ಮವನ್ನೂ ಆ ಮೂಲಕ ಇತರ ವರ್ಣಾಶ್ರಮಗಳ ಧರ್ಮಗಳನ್ನೂ ರಕ್ಷಿಸಿದಂತಾಗುವದು. ಎಲ್ಲಾ ಧರ್ಮವಿಶೇಷಗಳೂ ಬ್ರಾಹ್ಮಣ್ಯಕ್ಕೇ ಅಧೀನವಾಗಿವೆ' ಎಂದು ಬರೆದಿದ್ದಾರೆ. ಇದನ್ನು ನೋಡಿದರೆ ಜಗದ್ಗುರುಗಳೂ ಪರಮಹಂಸರೂ ಆತ್ಮನಿಷ್ಠರೂ ಸರ್ವಸಮಭಾವ ಸಂಪನ್ನರೂ ಧರ್ಮಾಧರ್ಮಗಳನ್ನೇ ಮೀರಿದ ಬ್ರಹ್ಮಸ್ವರೂಪದಲ್ಲಿ ನೆಲೆನಿಂತ ಸ್ಥಿತಪ್ರಜ್ಞರೂ ಆಗಿರುವ ಶ್ರೀಶಂಕರರಂಥವರು ಕೂಡ ವ್ಯವಹಾರದಲ್ಲಿ ವರ್ಣಾಶ್ರಮಧರ್ಮಗಳನ್ನು ಅನುಸರಿಸುವದು ಯುಕ್ತವೆಂದೂ ಸೃಷ್ಟಿಕರ್ತನಿಗೆ ಅದು ಮೆಚ್ಚಾದದ್ದೆಂದೂ ಹೇಳಿದಂತಾಗಿರುತ್ತದೆ.

ಹೀಗೆ ವರ್ಣಾಶ್ರಮಧರ್ಮವು ಮೋಕ್ಷವೆಂಬ ಪರಮಪುರುಷಾರ್ಥಕ್ಕೆ ಮೂಲವಾಗಿರುವದರಿಂದಲೇ ಇದನ್ನು ಕಾಪಾಡುವದಕ್ಕೂ ಹೆಚ್ಚಿನ ಮಹತ್ತ್ವವನ್ನು ನಮ್ಮ ಹಿಂದೂಧರ್ಮದಲ್ಲಿ ಎಂದರೆ ಸನಾತನಧರ್ಮದಲ್ಲಿ ನೀಡಲಾಗಿದೆ. ಇದರಲ್ಲಿ ಬ್ರಾಹ್ಮಣ್ಯವೂ ಅದರ ಆಚರಣೆಗಳೂ ಲೋಕಕ್ಕೇ ಆದರ್ಶಗಳಾಗಿವೆ. ಬ್ರಾಹ್ಮಣ್ಯವನ್ನು ಪಡೆಯಲು ವಿಶ್ವಾಮಿತ್ರರು ಪಟ್ಟ ಶ್ರಮವೂ ತಪಸ್ಸೂ ಲೋಕಪ್ರಸಿದ್ಧವಾಗಿವೆ. ಹಾಗೆಯೇ ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಹಿಂದಿನ ಋಷಿಗಳೂ ಮುನಿಗಳೂ ತಮ್ಮ ಐಹಿಕಜೀವನದ ಸುಖಭೋಗಾಭಿಲಾಷೆಗಳನ್ನೇ ತ್ಯಜಿಸಿ ಸ್ವಧರ್ಮ ಹಾಗೂ ಕರ್ತವ್ಯಪರರಾಗಿದ್ದುದೂ ಇತಿಹಾಸಗಳಲ್ಲಿ ಕಂಡುಬರುತ್ತದೆ. ಇವರನ್ನೆಲ್ಲ ದಡ್ಡರೆಂದು ಹೇಳಲಾಗುವದಿಲ್ಲ. ಇಷ್ಟೇ ಅಲ್ಲ. ವರ್ಣಾಶ್ರಮಧರ್ಮವು ಕ್ರಮವಾಗಿಯೂ ನಿಯಮಬದ್ಧವಾಗಿಯೂ ಆಚರಣೆಯಲ್ಲಿದ್ದಾಗ ಹಿಂಸೆ, ಕ್ರೌರ್ಯ, ಅಸೂಯೆ, ಸ್ಪರ್ಧೆ

–ಮುಂತಾದವುಗಳು ಸಮಾಜದಲ್ಲಿ ತೀರ ಕಡಿಮೆ ಎಂದರೆ ಇಲ್ಲವೇ ಇಲ್ಲವೆನ್ನು ವಷ್ಟು ವಿರಳವಾಗಿತ್ತೆಂದೂ ಪುರಾಣೇತಿಹಾಸಗಳಿಂದ ತಿಳಿದುಬರುತ್ತದೆ. ರಾಮರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ಸ್ವಧರ್ಮಾನುಷ್ಠಾನತತ್ಪರ ನಾಗಿದ್ದುಕೊಂಡು ಮತ್ತೊಬ್ಬರನ್ನು ಹಿಂಸಿಸದೆ ಅನ್ಯೋನ್ಯವಾಗಿ ಬಾಳುತ್ತಿದ್ದ ನೆಂಬ ಸ್ಪಷ್ಟ ಉಲ್ಲೇಖವಿದೆ. ಅಂತೂ ನೈಜವಾದ (Pure) ವರ್ಣಾಶ್ರಮ ಧರ್ಮವು ಎಂದೂ ಜನಗಳಲ್ಲಿ ಅನೈಕ್ಯತೆಯನ್ನು ಮೂಡಿಸಿದ್ದ ವಿಷಯಕ್ಕೆ ಎಲ್ಲಿಯೂ ದಾಖಲೆಗಳಿಲ್ಲ. ಆದರೆ ಮಧ್ಯಯುಗದಲ್ಲಿ ಎಂದರೆ ಈಚೆಗೆ ಮತ ಧರ್ಮಗಳ ಅಂಧಾನುಯಾಯಿಗಳು, ಹಾಗೂ ಅಧ್ಯಾತ್ಮಸಾಧನಗಳಿಗಿಂತ ಬಾಹ್ಯಾಚಾರಗಳೇ ಪ್ರಧಾನವೆಂದು ಭಾವಿಸಿ ಧರ್ಮದ ಮೇಲುಮೈಯನ್ನು ಮಾತ್ರ ಆಚರಿಸುತ್ತಿದ್ದವರು- ಕೆಲವರಿಂದ ಸಮಾಜದಲ್ಲಿ ಮೇಲು- ಕೀಳು ಗಳೆಂಬ ಭಾವನೆಗಳೂ ಅದಕ್ಕೆ ವರ್ಣಾಶ್ರಮಧರ್ಮವೇ ಮೂಲವೆಂಬ ಭ್ರಾಂತಿ ಯೂ ಬೆಳೆದುಬಂದದ್ದರ ಫಲವಾಗಿ ಈಗಿನ ಜನರಿಗೆ ವರ್ಣಾಶ್ರಮಧರ್ಮಗಳ ವಿಷಯಕ್ಕೆ ದ್ವೇಷವುಂಟಾಗಿದೆ. ಆದರೆ ಮೂಲತಃ ಈ ಧರ್ಮಗಳು ಸಮಾಜ ದಲ್ಲಿ ರಾಗದ್ವೇಷಾದಿಗಳನ್ನು ಬಿತ್ತುವ ಕೆಲಸವನ್ನು ಎಂದಿಗೂ ಮಾಡಿರುವ ದಿಲ್ಲ. ಇದರ ಸಮನ್ವಯದಲ್ಲಿ ದಾರಿತಪ್ಪಿದ ಅನುಷ್ಠಾತೃಗಳು ತಮ್ಮ ಕಾಮಕ್ರೋಧದ್ವೇಷಾದಿಗಳಿಂದ ಮಾಡಿರಬಹುದಾದ ಸಂಕುಚಿತಬುದ್ಧಿ- ಸ್ವಾರ್ಥಗಳ ಫಲವಾಗಿ ಇಡಿಯ ಸನಾತನಧರ್ಮಕ್ಕೇ ಕಳಂಕವು ಬಂದಿರುವದು ಮಾತ್ರ ಶೋಚನೀಯವೇ ಸರಿ. ಆದರೆ ಈ ನಾಲ್ಕು ವರ್ಣದವರ ಧರ್ಮದ ನಿಜವಾದ ತಿರುಳನ್ನು ಅರಿತುಕೊಂಡಲ್ಲಿ ನಾವು ಮತ್ತೆ ವರ್ಣಾಶ್ರಮಧರ್ಮ ಗಳೇ ಬೇಕೆಂಬ ತೀರ್ಮಾನಕ್ಕೇ ಬರುವದರಲ್ಲಿ ಸಂಶಯವಿಲ್ಲ. ಏಕೆಂದರೆ ಅದರಿಂದ ದೊರಕುವ ಪ್ರಯೋಜನಗಳು ಈಗಿನ ಎಷ್ಟೋ ಅಪರಿಹಾರ್ಯ ವಾದ ಸಮಸ್ಯೆಗಳಿಗೆಲ್ಲ ದಿವ್ಯೌಷಧವಾಗಿರುತ್ತವೆ.

ಇನ್ನೊಂದು ವಿಷಯ. ಈಗಿನ ವಿಜ್ಞಾನಯುಗಕ್ಕೆ ಹಾಗೂ ನಾಗರಿ ಕತೆಗೆ ಅನುಗುಣವಾಗಿ ಈಗ ನಾವು ಜೀವನವನ್ನು ಸಾಗಿಸಲೇಬೇಕಾದ ಅನಿವಾರ್ಯಪರಿಸ್ಥಿತಿಯು ಇರುವದರಿಂದ ಸಮಯಕ್ಕೆ ತಕ್ಕಂತೆ ಈ ವರ್ಣಾ ಶ್ರಮಧರ್ಮಾಚರಣೆಗಳಲ್ಲಿ ಮೂಲಘಾತವಾಗದಂತೆ ಕೆಲವು ಬದಲಾವಣೆ

ಗಳನ್ನು ಮಾಡಿಕೊಂಡು ಈ ಧರ್ಮದಿಂದ ದೊರಕುವ ಚಿತ್ತಶುದ್ಧ್ಯಾದಿ ಗಳನ್ನು ಅಂತಃಕರಣದಲ್ಲಿ ಅಳವಡಿಸಿಕೊಂಡಲ್ಲಿ ತಪ್ಪೇನೂ ಆಗುವದಿಲ್ಲ. ನಿಯಮಗಳಿರುವದು ಯಮ (ಆತ್ಮಸಂಯಮ)ಕ್ಕೆ ಪೂರಕವಾಗಿಯೇ ಹೊರತು ಮಾರಕವಾಗಿ ಅಲ್ಲ. ಆದ್ದರಿಂದ ಮಡಿವೈಲಿಗೆ, ಸ್ಪೃಶ್ಯಾಸ್ಪೃಶ್ಯ ವಿವೇಕ, ಆಹ್ನಿಕಕಾಲಾನುಸರಣ, ಸಂಪ್ರದಾಯಗಳು, ಸಂಸ್ಕಾರಗಳು, ದಾನವ್ರತಾದಿಗಳು, ಉಪವಾಸ, ಆಹಾರನಿಯಮಗಳು, ಭಕ್ಷ್ಯಾಭಕ್ಷ್ಯ ವಿವೇಕಗಳು-ಮುಂತಾದ ವಿಷಯಗಳಲ್ಲಿ ಮತ್ತೊಬ್ಬರಿಗೆ ತೊಂದರೆ ಅಥವಾ ಬೇಸರವಾಗದಂತೆ ದೇಶಕಾಲಾನುಗುಣವಾಗಿ ಹೊಂದಿಸಿಕೊಂಡು ವರ್ಣಾಶ್ರಮಧರ್ಮಗಳನ್ನು ಕಲಿಗಾಲಕ್ಕೆ ತಕ್ಕಂತೆಯೂ ಕಾಪಾಡಿಕೊಳ್ಳಬಹುದು. ಋಷಿಮುನಿಗಳ ಒಪ್ಪಿಗೆಯೂ ಈ ವಿಷಯಕ್ಕೆ ದೊರೆಯುತ್ತದೆ. ಹೇಗೆಂದರೆ : ಕೃತಯುಗದಲ್ಲಿ ಅನುಷ್ಠೇಯವಾದದ್ದನ್ನು ಕಲಿಯುಗದಲ್ಲಿ ಮಾಡಬೇಕೆಂದು ಋಷಿಗಳು ನಿರ್ಬಂಧಿಸಿರುವದಿಲ್ಲ. ಹಾಗೂ ಆಪತ್ಕಾಲಕ್ಕೆ ತಕ್ಕಂತೆ ಧರ್ಮಾಚರಣೆಯಲ್ಲಿ ಸಂಕೋಚಮಾಡಬಹುದೆಂದೂ ಸೂಚಿಸಿದ್ದಾರೆ. ಈ ರಿಯಾಯಿತಿಗಳೆಲ್ಲ ಇರುವಾಗ ಮನುಷ್ಯನು ವಿವೇಕದಿಂದ ವರ್ತಿಸುತ್ತಾ ಧರ್ಮಪ್ರಿಯನಾಗಿದ್ದುಕೊಂಡು ಯಥಾಶಕ್ತಿಯಾಗಿ ಸ್ವಧರ್ಮಾನುಷ್ಠಾನಮಾಡಲು ಅವಕಾಶವಿದ್ದೇ ಇದೆ. ಹೀಗೆ ಋಷಿಮುನಿಗಳೂ ಧರ್ಮಪ್ರವರ್ತಕರೂ ವಿಶಾಲಹೃದಯರಾಗಿದ್ದು "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂದು ಆಶ್ವಾಸನೆಕೊಡುತ್ತಿರುವಲ್ಲಿ ನಾವೇಕೆ ಧರ್ಮಬಾಹಿರರಾಗಬೇಕು ? ಮತ್ತು ಅದರಿಂದ ದೊರಯುವ ಪ್ರಯೋಜನಗಳನ್ನೇಕೆ ಕಳೆದುಕೊಳ್ಳಬೇಕು ?

ಆದ್ದರಿಂದ ಈಗ ಮೊದಲು ಬ್ರಾಹ್ಮಣರು ತಾವೇ ತಮ್ಮನ್ನು ತಿದ್ದಿಕೊಂಡು ಧರ್ಮದ ಕಡೆಗೆ ತಿರುಗಿ ಯಥಾಶಕ್ತಿಯಾಗಿ ವರ್ಣಾಶ್ರಮಾಚಾರಗಳನ್ನೂ ಕೈಗೊಳ್ಳಬೇಕು. ಇವರು ಧರ್ಮತತ್ಪರರಾದರೆ ಇವರನ್ನು ನೋಡಿ ಉಳಿದವರೂ ಅನುಸರಿಸಿಯೇ ತೀರುತ್ತಾರೆ. ಬ್ರಾಹ್ಮಣ್ಯದ ಮುಖ್ಯಗುಣಗಳಾದ ಶಮ, ದಮ, ಇಂದ್ರಿಯನಿಗ್ರಹ, ಅಲ್ಪತುಷ್ಟಿ, ಸರಳಜೀವನ, ಸತ್ಯವಾಕ್ಕು, ಕರ್ತವ್ಯನಿಷ್ಠೆ, ಭೋಗಗಳಲ್ಲಿ ಅನಾಸಕ್ತಿ- ಇವುಗಳನ್ನು ಜೀವನದ ಗುರಿಯಾಗಿ ಸ್ವೀಕರಿಸಿ ಲೌಕಿಕಕಾರ್ಯಕ್ಷೇತ್ರವು ಪೂರೈಸಿದ ಅನಂತರ ಪ್ರತಿ

ಯೊಬ್ಬ ಬ್ರಾಹ್ಮಣನೂ (ಗಂಡಸೂ–ಹೆಂಗಸೂ ಸಹ) ಮೇಲ್ಕಂಡ ಗುಣಗಳ ಸಾಧನೆಗಾಗಿ ತನ್ನ ಕೈಲಾದ ಹಾಗೂ ಪರಿಸರಕ್ಕೆ ಹೊಂದುವಂಥ ಸಾಧನ–ಪ್ರಯತ್ನಗಳನ್ನು ಮಾಡಲೇಬೇಕು. ಜಂಭಕ್ಕಾಗಿ ಅಥವಾ ಪರಪೀಡೆಗಾಗಿ ಯಾವ ಅನುಷ್ಠಾನವನ್ನೂ ಮಾಡಬೇಕಾದದ್ದಿಲ್ಲ ಇಂದಿಗೂ ಸಮಾಜದಲ್ಲಿ ಪ್ರತಿಯೊಬ್ಬನೂ ತನ್ನ ಮನೆಯೊಳಗೆ ನಾಲ್ಕು ಗೋಡೆಗಳ ನಡುವೆ, ಯಾವ ಆಚರಣೆಯನ್ನಾದರೂ ಮಾಡಿಕೊಳ್ಳಲು ಸ್ವತಂತ್ರನಾಗಿದ್ದಾನೆ. ಹೀಗಿರುವಲ್ಲಿ ಧರ್ಮಪ್ರಿಯನನ್ನು ಅಡ್ಡಿಮಾಡುವವರು ಯಾರಿದ್ದಾರೆ ? ಬ್ರಾಹ್ಮಣನ ಕರ್ಮಗಳ ವಿಷಯಕ್ಕೆ ಋಷಿಗಳು ಹೇಳಿರುವ ಈ ವಾಕ್ಯವನ್ನು ನೋಡಿರಿ : "ಸರ್ವೇಷಾಮವಿರೋಧೇನ ಬ್ರಹ್ಮಕರ್ಮ ಸಮಾರಭೇ" (ಎಲ್ಲಾ ಜನರಿಗೂ ಪ್ರಾಣಿಗಳಿಗೂ ವಿರೋಧವಿಲ್ಲದ ವಾತಾವರಣದಲ್ಲಿ ನಾನು ಬ್ರಹ್ಮ ಕರ್ಮವನ್ನು ಮಾಡುತ್ತೇನೆ) ಎಂಬ ಮಾತು ಯಾರಿಗಾದರೂ ಅನಿಷ್ಟವಾಗಿದೆಯೆ ? ಬ್ರಾಹ್ಮಣನು ಮಾಡುವ ಕೆಲಸಗಳು ಹೀಗಿರಬೇಡವೆ ? ಸಂಧ್ಯಾವಂದನೆಯ ಪ್ರಾರಂಭದಲ್ಲಿಯೇ ಪಠಿಸುವ ಈ ವಾಕ್ಯದ ಅನುಷ್ಠಾನವು ಜಾರಿಗೆ ಬಂದಲ್ಲಿ ಯಾರು ತಾನೆ ಇವನನ್ನು ದ್ವೇಷಮಾಡಿಯಾರು ? ಇನ್ನು ಬ್ರಾಹ್ಮಣನ ಮುಖ್ಯ ಕರ್ತವ್ಯವೆಂದರೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳು. ಇವುಗಳನ್ನಂತೂ ಯಾರೂ ವಿರೋಧಿಸುವದಿಲ್ಲ. ಅಥವಾ ಅಡ್ಡಿಪಡಿಸುವದಿಲ್ಲ. ಇದಕ್ಕೆ ಬದಲಾಗಿ ಇತರರೂ ಸಹಾಯವನ್ನೇ ಮಾಡುತ್ತಾರೆ. ಈಗಲೂ ಇಂಥ ಸಾತ್ವಿಕಕರ್ಮಗಳಿಗೆ ಜಾತಿಭೇದವಿಲ್ಲದೆ ಧಾರ್ಮಿಕರೂ ಆಸ್ತಿಕರೂ ಆದ ಮಹನೀಯರುಗಳು ಪ್ರೋತ್ಸಾಹವನ್ನು ನೀಡುತ್ತಲೇ ಇದ್ದಾರೆ. ನಿಜವಾಗಿಯೂ ಬ್ರಾಹ್ಮಣನು ಸ್ವಾರ್ಥವಿಲ್ಲದೆ ಧರ್ಮತತ್ಪರನೂ ಸದಾಚಾರನಿಷ್ಠನೂ ಆದರೆ ಪ್ರತಿಯೊಬ್ಬರೂ ಗೌರವವನ್ನು ಕೊಟ್ಟೇಕೊಡುತ್ತಾರೆ. ಎಲ್ಲೋ ಕೆಲವರು ಮೂರ್ಖರು ಹಾಗೂ ಅವಿವೇಕಿಗಳು ವಿರೋಧಿಸಬಹುದು. ಆದರೆ ಅದೇನೂ ಯಾವ ಕಾಲಕ್ಕೂ ಹೊಸದಲ್ಲ. ವಿಶ್ವಾಮಿತ್ರರು ಯಜ್ಞಮಾಡುವ ಕಾಲಕ್ಕೂ ಅದನ್ನು ಕೆಡಿಸುವಂಥ ಮಾರಿಚಸುಬಾಹುಗಳಿದ್ದೇ ಇದ್ದರು–ಎಂಬಿದನ್ನು ಜ್ಞಾಪಿಸಿಕೊಳ್ಳಬಹುದಾಗಿದೆ.

ಹೀಗೆ ಧರ್ಮಪ್ರೀತಿಯಿಂದಲೇ ಧರ್ಮವನ್ನು ಜೀವನದ ಅಮೂಲ್ಯ ಸಂಪತ್ತಾಗಿ ಸ್ವೀಕರಿಸಿ ಎಷ್ಟೇ ಅಡ್ಡಿಗಳು ಬಂದರೂ ಹೆದರದೆ ತ್ಯಾಗ, ಸಂಯಮ, ಯೋಗ, ತಪ, ಆದಿ ಆಚರಣೆಗಳಿಂದ ಅದನ್ನು ಕಾಪಾಡಿ ಕೊಂಡು ಪರಂಪರೆಯಿಂದ ಬೆಳೆಯಿಸಿಕೊಂಡು ಬಂದವರೇ ಬ್ರಾಹ್ಮಣರೆನಿಸಿ ದರು. ಈಗಲೂ ಇಂಥ ಬ್ರಾಹ್ಮಣರ ಆವಶ್ಯಕತೆ ಸಮಾಜಕ್ಕೆ ಬಹಳ ವಾಗಿದೆ. ಇಂಥವರನ್ನೇ ಕುರಿತು 'ಬ್ರಾಹ್ಮಣೋऽಸ್ಯ ಮುಖಮಾಸೀತ್' ಎಂದು ಪುರುಷಸೂಕ್ತವು ಹೊಗಳುತ್ತಿದೆ. ಅನಂತರ 'ಬಾಹೂ ರಾಜನ್ಯಃ ಕೃತಃ' ಎಂದು ಮುಂದುವರೆದಿದೆ. ಈ ಋಕ್ಕಿನ ಪೂರ್ಣ ಅಭಿಪ್ರಾಯ ವನ್ನು ಈಗ ತಿಳಿಯೋಣ.

ಬ್ರಾಹ್ಮಣನ ಅನಂತರ ಸೂಕ್ತದಲ್ಲಿ ರಾಜನ್ಯರು—ಕ್ಷತ್ರಿಯರ ಪ್ರಸ್ತಾಪ ವಿದೆ. ಇವರಿಗೆ ಶೌರ್ಯ, ಧೈರ್ಯ, ಧೃತಿ, ತೇಜಸ್ಸು, ಯುದ್ಧದಲ್ಲಿ ಓಡಿ ಹೋಗದಿರುವದು, ದಾನಮಾಡುವದು, ಆಡಳಿತ ನಡೆಸುವದು-ಇವುಗಳನ್ನು ಧರ್ಮವಾಗಿ ಹೇಳಿದೆ. ಈಗ್ಗೆ ಕ್ಷತ್ರಿಯಕುಲವು ಎಷ್ಟರಮಟ್ಟಿಗೆ ಊರ್ಜಿತ ವಾಗಿದೆ—ಎಂಬುದನ್ನು ವಿಚಾರಿಸಲು ಇದು ಸಮಯವಲ್ಲ. ಈ ಗುಣಗಳೂ ಕರ್ತವ್ಯಗಳೂ ಮುಚ್ಚಾಗಿದ್ದು ಬ್ರಾಹ್ಮಣ್ಯದಲ್ಲಿ ಗೌರವವುಳ್ಳವರನ್ನು ಕ್ಷತ್ರಿಯ ರೆಂದು ಕರೆಯಬಹುದು. ಇವರ ಗುರಿಯೂ ಸಹ ಸ್ವಧರ್ಮದಮೂಲಕ ಜ್ಞಾನ—ಮೋಕ್ಷಗಳ ಪ್ರಾಪ್ತಿಯೇ ಆಗಿದೆ.

'ಊರೂ ತದಸ್ಯ ಯದ್ವೈಶ್ಯಃ' ಎಂಬ ವಾಕ್ಯವು ವೈಶ್ಯರನ್ನು ಪರಾ ಮರ್ಶಿಸುತ್ತದೆ. ಕೃಷಿ, ಗೋಪಾಲನೆ, ವಾಣಿಜ್ಯ—ಇವು ಇವರ ಸ್ವಧರ್ಮ ಗಳಾಗಿವೆ. ಈಗಿನ ವೈಶ್ಯರಲ್ಲಿ ವಾಣಿಜ್ಯವೇ ಹೆಚ್ಚಾಗಿ ಕಂಡುಬರುತ್ತಿದೆ. ಇರಲಿ. ವೈಶ್ಯರೂ ಸಹ ದ್ವಿಜರೆನಿಸಿದ್ದು ಸಂಸ್ಕಾರಗಳಿಂದ ಹಾಗೂ ಸ್ವಧರ್ಮಾನುಷ್ಠಾನಗಳಿಂದ ಚಿತ್ತಶುದ್ಧ್ಯಾದಿಗಳನ್ನು ಹೊಂದಿ ಮುಕ್ತರಾಗ ಬೇಕೆಂತ ಧರ್ಮದ ಅಪ್ಪಣೆಯಿದೆ. ವಾಣಿಜ್ಯವು ಧರ್ಮಕ್ಕೆ ಲೋಪವಿಲ್ಲದಂತೆ ಯೂ ಪ್ರಜಾಪೀಡೆಯಾಗದಂತೆಯೂ ಮಾಡಲ್ಪಟ್ಟಲ್ಲಿ ಆದರ್ಶವೈಶ್ಯನಾಗಿಯೇ ಮಾನವನು ಉದ್ಧಾರವಾಗಬಹುದಾಗಿದೆ. ವೈಶ್ಯನು ದಾನಧರ್ಮಗಳಿಂದ ಸಂಪಾದಿಸಬಹುದಾದ ಕೀರ್ತಿಯೂ ಪುಣ್ಯವೂ ಹೆಚ್ಚಿನದಾಗಿದ್ದು ಅದನ್ನು ದಂಭಾಹಂಕಾರಗಳಿಲ್ಲದೆ ಗುಪ್ತವಾಗಿ ಮಾಡಿದಲ್ಲಿ ನಿಃಶ್ರೇಯಸಕ್ಕೆ ತಕ್ಕವ ನಾಗುವನೆಂಬುದರಲ್ಲಿ ಸಂಶಯವಿಲ್ಲ.

'ಪದ್ಭ್ಯಾಂ ಶೂದ್ರೋ ಅಜಾಯತ' ಎಂಬ ವಾಕ್ಯವು ಶೂದ್ರನನ್ನು ಪರಾಮರ್ಶಿಸುತ್ತದೆ. ಶೂದ್ರನೆಂಬ ಶಬ್ದವನ್ನು ಕೀಳೆಂದು ಯಾರೂ ಭಾವಿಸಬಾರದು. ಸೇವಾವೃತ್ತಿಯೇ ಶೂದ್ರನ ಪರಮಧರ್ಮವು. ಇಂಗ್ಲಿಷಿನಲ್ಲಿ Service ಎಂಬ ಪದವು ಸೇವಾ ಎಂಬುದಕ್ಕೆ ಸಮಾನವಾಗಿದೆ. ಎಷ್ಟೋ ಜನ ಸರಕಾರಿಯ ಅಧಿಕಾರಿಗಳು ನಿವೃತ್ತರಾದಮೇಲೂ ತಾವು ಇಂಥ ಇಲಾಖೆಯ ಸೇವೆಯಲ್ಲಿದ್ದವರೆಂತ ಗೌರವಸೂಚಕವಾಗಿಯೇ ಬರೆದುಕೊಳ್ಳುತ್ತಾರೆ. Service ಎಂಬ ಪದವು ಗೌರವಸೂಚಕವೇ ಆದುದಾದರೆ ಶೂದ್ರ ಎಂಬುದೇಕೆ ಕೀಳಾಗಬೇಕು? ಹಾಗೇನಿಲ್ಲ. ಯಾವದೇ ಸೇವೆಯಲ್ಲಿರುವವರೆಲ್ಲ ಶೂದ್ರರೇ ಸರಿ. ಈ ಅರ್ಥದಲ್ಲಿ ಜೀವರುಗಳೆಲ್ಲ ಶೂದ್ರರು (ದಾಸರು); ಪರಮಾತ್ಮನೊಬ್ಬನೇ ಬ್ರಾಹ್ಮಣನು—ಎಂದಾಗುವದು. ಆದರೆ ಕಾಮಕ್ರೋಧಗಳಿಗೆ ದಾಸರಾಗಿರುವದಕ್ಕಿಂತ ಪರಮಾತ್ಮನ ದಾಸರಾಗಿರುವದೇ ನಿಜವಾದ ಶೂದ್ರತ್ವವು. ಇರಲಿ. ಈಗ ತ್ರೈವರ್ಣಿಕರನ್ನು ವಿಂಗಡಿಸಿದ ಅನಂತರ ಉಳಿದವರನ್ನೆಲ್ಲ ಶೂದ್ರರೆಂದು ಕರೆದರೆ ತಪ್ಪಾಗಲಾರದು. ಇವರುಗಳಿಗೆ ಭಗವಂತನ ಪ್ರಾಪ್ತಿಯ ವಿಷಯಕ್ಕೆ ಹೆಚ್ಚಿನ ರಿಯಾಯಿತಿಯುಂಟು. ಬ್ರಾಹ್ಮಣನು ಭ್ರಷ್ಟನಾಗುವಷ್ಟು ಬೇಗ ಶೂದ್ರನು ಆಗಲಾರನು. ಪರಾಶರರಂತೂ "ಶೂದ್ರಃ ಸಾಧುಃ, ಕಲಿಃ, ಸಾಧುಃ" ಎಂದೇ ಹೇಳಿದ್ದಾರೆ. ಆದ್ದರಿಂದ ನಾವೆಲ್ಲರೂ ಭಗವಂತನ ದಾಸರೆಂಬ ಸಚ್ಛೂದ್ರತ್ವವನ್ನಾದರೂ ಪಡೆದರೆ ಉದ್ಧಾರವಾದೇವು. ಅಂತೂ ವಿರಾಟ್‌ಪುರುಷನ ಮುಖಬಾಹೂರುಗಳ ಪ್ರತಿನಿಧಿಗಳಾದವರ ಸೇವೆಯೇ—ಎಂದರೆ ವಿರಾಡಾತ್ಮನ ಸೇವೆಯೇ ಶೂದ್ರನ ಪರಮಧರ್ಮವು. ಅವನೂ ವಿರಾಡಾತ್ಮನ ಅಂಗವೇ ಆಗಿರುವನು. 'ಸೇವಾಧರ್ಮವು. ಪರಮಗಹನವಾದದ್ದು; ಯೋಗಿಗಳಿಗೂ ಅದು ಗೋಚರಿಸದೆ ಇರುವದು'—ಎಂದು ಒಂದು ಕಡೆ ಹೊಗಳಿದೆ. ಹೇಗೆ ಇರಲಿ, ಭರತಖಂಡದಲ್ಲಿರುವ ನಾವು ಈ ಚಾತುರ್ವರ್ಣ್ಯಗಳ ಚೌಕಟ್ಟಿನಲ್ಲಿ ಜನಿಸಿ ವಿರಾಟ್ ಭಗವಂತನ ವಿಭೂತಿಗಳಾಗಿರುವದೇ ಪುಣ್ಯವಿಶೇಷವಾಗಿದೆ. ಇನ್ನಾದರೂ ನಾವು ಈ ವಿಶಿಷ್ಟಧರ್ಮವನ್ನು ಗೌರವಿಸಿ ಅನುಷ್ಠಿಸೋಣ.

## ೧೨. ಚಂದ್ರಮಾ ಮನಸೋ ಜಾತಃ

ಪುರುಷಸೂಕ್ತದ ಹದಿನಾಲ್ಕನೆಯ ಋಕ್ಕನ್ನು ಈಗ ವಿಚಾರಮಾಡ ಬೇಕಾಗಿದೆ. ಅದು ಹೀಗಿದೆ.

**ಚಂದ್ರಮಾ ಮನಸೋ ಜಾತಃ । ಚಕ್ಷೋಸ್ಸೂರ್ಯೋ ಅಜಾಯತ।**
**ಮುಖಾದಿಂದ್ರಶ್ಚಾಗ್ನಿಶ್ಚ । ಪ್ರಾಣಾದ್ವಾಯುರಜಾಯತ ॥ ೧೪ ॥**

'ಚಂದ್ರನು ಮನಸ್ಸಿನಿಂದ ಹುಟ್ಟಿದನು. ಎರಡು ಕಣ್ಣುಗಳಿಂದ ಸೂರ್ಯನು ಹುಟ್ಟಿದನು. ಮತ್ತು ಮುಖದಿಂದ ಇಂದ್ರನೂ, ಅಗ್ನಿಯೂ ಪ್ರಾಣದಿಂದ ವಾಯುವೂ ಹುಟ್ಟಿದರು.'

ಈವರೆಗೆ ಪ್ರಾಸಂಗಿಕವಾಗಿ ವಿಚಾರಮಾಡಿದ್ದ ವರ್ಣಾಶ್ರಮಧರ್ಮದ ವಿಚಾರವನ್ನು ಉಪಸಂಹಾರಮಾಡಿ ಈಗ ಪ್ರಕೃತವಿಚಾರಕ್ಕೆ ಬರೋಣ. ಸನಾತನಧರ್ಮದ ವಿಷಯದಲ್ಲಿ ಇನ್ನೂ ತಿಳಿಸಬೇಕಾದ ವಿಷಯಗಳು ಬಹಳವಾಗಿವೆ. ಆದರೆ ಪುರುಷಸೂಕ್ತದ ವಿವರಣೆಯು ನಮಗೆ ಈಗ ಪ್ರಕೃತವಾಗಿರುವದರಿಂದ ಸದ್ಯಕ್ಕೆ ಇಷ್ಟರಲ್ಲಿಯೇ ತೃಪ್ತಿಗೊಂಡು ಮುಂದು ವರೆಯೋಣ. ವಿರಾಟ್‌ಪುರುಷನ ಮುಖಬಾಹೂರುಪಾದಗಳಿಂದ ಬ್ರಾಹ್ಮಣಾದಿವರ್ಣಗಳು ಹುಟ್ಟಿದಂತೆಯೇ ಉಳಿದ ಇಂದ್ರಿಯಗಳಿಂದಲೂ ಶರೀರಾವಯವಗಳಿಂದಲೂ ದೇವತೆಗಳೇ ಮುಂತಾದವರು ಹುಟ್ಟಿದರೆಂದು ಈಗ ವರ್ಣಿಸಲಾಗುತ್ತಿದೆ. ದೇವತೆಗಳ ಸೃಷ್ಟಿಯು ಜಗತ್ತಿನ ರಚನೆಯಲ್ಲಿ ಪ್ರಧಾನವಾದುದು. ಏಕೆಂದರೆ ಜಗತ್ತು ಇರುವವರೆಗೂ ಅದರ ವ್ಯಾಪಾರಗಳೆಲ್ಲ ದೇವತೆಗಳ ಅಧೀನವಾಗಿಯೇ ಇರುತ್ತವೆ. ದೇವತೆಗಳೆಂಬವರೂ ಜಗತ್ತಿನಲ್ಲಿಯೇ ಸೇರಿದ್ದರೂ ಅವರುಗಳು ಅಧಿಕಾರದಲ್ಲಿ ನಿಯೋಜಿಸಲ್ಪಟ್ಟಿರುವದರಿಂದ ಮುಖ್ಯರಾಗಿದ್ದಾರೆ. ಹೇಗೆ ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳೂ ಪ್ರಜೆಗಳೇ ಆದರೂ ಅಧಿಕಾರಾರೂಢರಾಗಿರುವದರಿಂದ ಅವರ ಅಪ್ಪಣೆಯು ಹೇಗೆ ದೇಶದಲ್ಲಿ ಜಾರಿಗೆ ಬರುವದೋ ಹಾಗೆ ದೇವತೆಗಳು ಜಗತ್ತಿನ ಪಾಲಕರಾಗಿರುತ್ತಾರೆ. ಇಂಥವರಲ್ಲಿ ಕೆಲವರು ಮುಖ್ಯರಾದವರ ಉತ್ಪತ್ತಿಯನ್ನು ಇಲ್ಲಿ ತಿಳಿಸಿದೆ. **ಚಂದ್ರನು** ಒಬ್ಬ ದೇವತೆಯು. ಇವನು ವಿರಾಟನ

ಮನಸ್ಸಿನಿಂದ ಹುಟ್ಟಿರುತ್ತಾನೆ. ಮನಸ್ಸಿಗೂ ಚಂದ್ರನಿಗೂ ನಿಕಟಸಂಬಂಧ ವಿದೆ. ಜ್ಯೋತಿಃಶಾಸ್ತ್ರಕಾರರೂ ಫಲಗಳನ್ನು ಹೇಳುವಾಗ ಮನಃಪ್ರಧಾನ ನಾದ ವಿಷಯಗಳಿಗೆ ಚಂದ್ರನನ್ನೇ ಗುರುತಿಸುತ್ತಾರೆ. ಆಧ್ಯಾತ್ಮವಾಗಿ ನಮ್ಮಲ್ಲಿ ಚಂದ್ರನೇ ಮನೋರೂಪದಿಂದಿರುತ್ತಾನೆ. ಚಂದ್ರನ ಸಂಚಾರ ದಿಂದ ಕಾಲವನ್ನು ನಾವು ಎಣಿಸುತ್ತೇವೆ. ಚಾಂದ್ರಮಾನ-ಎಂಬ ಕಾಲದ ವ್ಯವಹಾರವು ಸುಪ್ರಸಿದ್ಧವಾಗಿದೆ. ಪ್ರಕೃತ- ವಿರಾಟ್‌ಪುರುಷನ ಮನಸ್ಸಿ ನಿಂದ ಹುಟ್ಟಿದ ಚಂದ್ರನನ್ನು ನಾವು ಚಿಂತಿಸುವದಾದರೆ ನಮ್ಮ ಮನಸ್ಸೂ ಸಹ ಪವಿತ್ರವಾಗಿ ಪರಿಣಮಿಸಿ ಭಗವಂತನ ಉಪಾಸನೆಗೆ ಅಣಿಯಾಗುವದು. ಚಂಚಲವಾದ ಮನಸ್ಸಿಗೆ ಚಂದ್ರದೇವತೆಯೊಡನೆ ಐಕ್ಯವನ್ನು ಭಾವಿಸಿದರೆ ಅದೊಂದು ಸಾಧನೆಯಾಗುವದು.

ಈಗ ವಿರಾಡಾತ್ಮನ ಕಣ್ಣುಗಳಿಂದ ಸೂರ್ಯನು ಹುಟ್ಟಿದನೆಂಬುದನ್ನು ನೋಡೋಣ. ಬೆಳಕುಗಳಲ್ಲೆಲ್ಲ ಅದ್ವಿತೀಯವಾಗಿರುವ, ಅದಕ್ಕೆ ಮತ್ತೊಂದು ಸರಿಸಾಟಿಯಿಲ್ಲದ ಬೆಳಕೆಂದರೆ ಸೂರ್ಯನೇ. ಜೊತೆಗೆ ಅವನು ಶಾಖವನ್ನೂ ನೀಡುತ್ತಾನೆ. ಜಗತ್ತಿನ ಸ್ಥಾವರಜಂಗಮಪ್ರಾಣಿಗಳಿಗೆಲ್ಲ ಸೂರ್ಯನೇ ಪೋಷಕನು. ಆತನು ಕಾಲಗಣನೆಗೂ ಕಾರಣನಾಗಿರುವನು. ಮಾನವನ ಶರೀರಸ್ವಾಸ್ಥ್ಯ, ದೃಢತೆ, ಆರೋಗ್ಯ, ಜೀವನಗಳೆಲ್ಲವೂ ಸೂರ್ಯನ ಅಧೀನ ವಾಗಿವೆ. ಇಂಥ ಸೂರ್ಯನೇ ನಮ್ಮಲ್ಲಿಯೂ ಆಧ್ಯಾತ್ಮವಾಗಿ ಚಕ್ಷು ರಿಂದ್ರಿಯವಾಗಿರುತ್ತಾನೆ. ವಿರಾಡಾತ್ಮನ ಕಣ್ಣಿನಿಂದ ಹೊರಬಂದಿರುವ ಈ ಸೂರ್ಯನೇ ಇಷ್ಟೊಂದು ಪ್ರಭಾವಶಾಲಿಯಾಗಿರುವಲ್ಲಿ ಇನ್ನು ವಿರಾಟ್ ಪುರುಷನು ಸಮಷ್ಟಿಯಾಗಿ ಹೇಗಿರಬಹುದು ಎಂಬ ಕಲ್ಪನೆಗೆ ಈ ವರ್ಣ ನೆಯು ಸಹಾಯಕವಾಗಿದೆ. ಅಂತೂ ಪ್ರತ್ಯಕ್ಷದೇವತೆಯಾದ ಸೂರ್ಯನು ನಮಗಿಂತ ಲಕ್ಷಾಂತರಯೋಜನಗಳಷ್ಟು ದೂರದಲ್ಲಿದ್ದರೂ ಆತನ ಉದಯ, ಸಂಚಾರಗಳಿಂದ ಉಪಕೃತರಾಗುತ್ತಿರುವ ನಾವು ಸೂರ್ಯದೇವನನ್ನು ಪೂಜಿಸದೆ ವಿಧಿಯಿಲ್ಲ. ಈ ಮೂಲಕ ವಿರಾಡಾತ್ಮನ ಉಪಾಸನೆಯನ್ನು ಕೈಗೊಳ್ಳಲು ಈ ಸೃಷ್ಟಿಪ್ರಕ್ರಿಯೆಯು ಮಾರ್ಗದರ್ಶಕವಾಗಿದೆ. ಸೂರ್ಯ ನನ್ನು ನಾವು ಮೊದಲು ದೇವತೆಯೆಂದು ಗೌರವಿಸಿ ಅನಂತರ ಕಣ್ಣಿನ ರೂಪದಿಂದ ಆಧ್ಯಾತ್ಮವಾಗಿ ನಮಗೆ ಅನುಗ್ರಹಮಾಡುತ್ತಿದ್ದಾನೆಂದು ತಿಳಿಯಬೇಕು.

ಈಗ ಇಂದ್ರಾಗ್ನಿಗಳು, ವಾಯು–ಎಂಬ ದೇವತೆಗಳ ವಿಚಾರ. ಅಗ್ನಿಯು ಪ್ರತ್ಯಕ್ಷದೇವತೆ. ವಾಯುವು ಕಣ್ಣಿಗೆ ಕಾಣದಿದ್ದರೂ ಸ್ಪರ್ಶೇಂದ್ರಿಯ ಗೋಚರನಾಗಿದ್ದಾನೆ. ಇಂದ್ರನು ಮಾತ್ರ ಪರೋಕ್ಷದೇವತೆ. ಇವರುಗಳಲ್ಲಿ ಇಂದ್ರಾಗ್ನಿಗಳು ವಿರಾಡಾತ್ಮನ ಮುಖದಿಂದಲೂ, ವಾಯುವು ಪ್ರಾಣಗಳಿಂದಲೂ ಆವಿರ್ಭವಿಸಿರುತ್ತಾರೆ. ಇಂದ್ರನನ್ನು ದೇವತೆಗಳ ರಾಜನೆಂದು ಪುರಾಣಗಳಲ್ಲಿ ಸ್ತುತಿಸಲಾಗಿದೆ. ನಮ್ಮ "ಬಲ"ವೆಂಬ ಗುಣದಲ್ಲಿ ಇಂದ್ರನು ಸನ್ನಿಹಿತನಾಗಿರುತ್ತಾನೆ. ಈತನ ಮಹಿಮೆಯು ಅಗಾಧವಾಗಿದ್ದು ವೇದಗಳಲ್ಲಿಯೂ ಹೊಗಳಲ್ಪಟ್ಟಿದೆ. ತ್ರೈಲೋಕ್ಯಾಧಿಪತಿಯಾದ ಈತನೂ ವಿರಾಡಾತ್ಮನ ದೃಷ್ಟಿಯಿಂದ ಅತನ ಮುಖದಿಂದ ಹುಟ್ಟಿದವನಾಗಿದ್ದಾನೆಂದರೆ ವಿರಾಟ್ ಪುರುಷನ ಮಹಿಮೆಯು ಇನ್ನೂ ಎಷ್ಟು ಹೆಚ್ಚಿನದಿರಬೇಕು ? ಯೋಚಿಸಿರಿ. ಹಾಗೆಯೇ ಅಗ್ನಿ–ವಾಯುಗಳೆಂಬ ದೇವತೆಗಳನ್ನು ನೆನೆಯಿಸಿಕೊಂಡರೆ ಇವರಿಬ್ಬರೂ ಒಮ್ಮೆ ಯಕ್ಷರೂಪೀ–ಭಗವಂತನ ಸ್ವರೂಪವನ್ನರಿಯಲು ಹೊರಟದ್ದವರು. ಆಗ ಇವರ ಜಂಭವೆಲ್ಲ ಭಗವಂತನ ಮುಂದೆ ಕರಗಿಹೋಯಿತು. ಆದರೇನು ? ಇಂದ್ರನೂ ಸೇರಿದಂತೆ ಈ ಮೂವರೂ ಭಗವಂತನ ದರ್ಶನ ಮಾಡಿ ಆತನ ಮಹಾಮಹಿಮೆಯನ್ನರಿತ ಜ್ಞಾನಿಗಳಾಗಿದ್ದಾರೆ. ಸತ್ಯಕಾಮನೆಂಬುವನಿಗೆ ಅಗ್ನಿದೇವನೂ ಪ್ರತರ್ದನನೆಂಬುವನಿಗೆ ಇಂದ್ರನೂ ರೈಕ್ವನಿಗೆ ವಾಯುವೂ ಬ್ರಹ್ಮತತ್ತ್ವೋಪದೇಶವನ್ನು ನೀಡಿದವರಾಗಿದ್ದಾರೆ. ಮಾತಿನ ರೂಪದಿಂದ ಅಗ್ನಿಯೂ ಪ್ರಾಣರೂಪದಿಂದ ವಾಯುವೂ ಬಲರೂಪದಿಂದ ಇಂದ್ರನೂ ಆಧ್ಯಾತ್ಮವಾಗಿ ನಮ್ಮಲ್ಲಿದ್ದಾರೆ. ಇಂಥ ದೇವತೆಗಳ ಸೃಷ್ಟಿ ಕರ್ತನು ವಿರಾಟ್‌ಪುರುಷನು.

**ನಾಭ್ಯಾ ಆಸೀದಂತರಿಕ್ಷಮ್ ।**
**ಶೀರ್ಷ್ಣೋದ್ಯೌಸ್ಸಮವರ್ತತ ।**
**ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ ।**
**ತಥಾ ಲೋಕಾಗ್ಂ ಅಕಲ್ಪಯನ್ ॥೧೩॥**

'ಹೊಕ್ಕುಳಿನಿಂದ ಅಂತರಿಕ್ಷಲೋಕವುಂಟಾಯಿತು, ತಲೆಯಿಂದ ದ್ಯುಲೋಕವು ಹೊರಬಂದಿತು. ಪಾದಗಳಿಂದ ಭೂಮಿಯೂ, ಕಿವಿಯಿಂದ ದಿಕ್ಕುಗಳೂ ಉಂಟಾದವು. ಹಾಗೆಯೇ (ಉಳಿದ) ಲೋಕಗಳನ್ನೂ ಉಂಟುಮಾಡಿದನು'.

ಈ ಮಂತ್ರದಲ್ಲಿ ವಿರಾಡಾತ್ಮನ ಶರೀರದಿಂದ ಹೊರಬಿದ್ದ ಲೋಕಗಳ ಸೃಷ್ಟಿಯ ವರ್ಣನೆಯಿದೆ. ಲೋಕ ಎಂದರೆ ಭೋಗಸ್ಥಾನವು. ಪ್ರಾಣಿಗಳು ಪಾಪಪುಣ್ಯಗಳನ್ನು ಅನುಭವಿಸಲು ಇವು ಸೃಷ್ಟವಾಗಿವೆ. ಪುಣ್ಯಲೋಕಗಳೂ ಸೇರಿದಂತೆ ಕರ್ಮಫಲಗಳೆಲ್ಲವೂ ಸಂಸಾರಗೋಚರವಾಗಿರುತ್ತವೆ. ಆದ್ದರಿಂದ ಐತರೇಯೋಪನಿಷತ್ತಿನಲ್ಲಿ ತಿಳಿಸಿರುವಂತೆ ದೇವತೆಗಳೂ ಕೂಡ ಸಂಸಾರಿಗಳೇ ಆಗಿರುತ್ತಾರೆ. ಆದರೆ ಸೃಷ್ಟಿಯಲ್ಲಿ ದೇವತೆಗಳು, ಋಷಿಗಳು, ಪ್ರಜಾಪತಿಗಳು, ಮನುಗಳೇ–ಮುಂತಾದ ಉತ್ತಮಜೀವರುಗಳನ್ನು ಭಗವದ್ವಿಭೂತಿಗಳೆಂದು ಗೌರವಿಸಲಾಗಿದೆ. ಇಂಥ ದೇವತೆಗಳಿಗಾಗಿ ಪ್ರತ್ಯೇಕವಾದ ವಾಸಸ್ಥಾನ ವಿರುವದು. ಅದನ್ನೇ ದ್ಯುಲೋಕ ಅಥವಾ ಸ್ವರ್ಗಲೋಕವೆನ್ನುವರು. ಅಲ್ಲಿ ಅಕಾಲಮೃತ್ಯುಭಯವಾಗಲಿ, ಮುಪ್ಪಾಗಲಿ, ಹಸಿವುಬಾಯಾರಿಕೆಗಳಾಗಲಿ, ಇರುವದಿಲ್ಲ. ಉತ್ಕೃಷ್ಟವಾದ ಭೋಗಸಾಮಗ್ರಿಗಳು ಯಥೇಚ್ಛವಾಗಿ ದೊರೆಯುವವು. ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ– ಮುಂತಾದ ಅಪೂರ್ವವಸ್ತುಗಳೆಲ್ಲವೂ ಈ ಸ್ವರ್ಗಲೋಕದವುಗಳೇ ಆಗಿವೆ. ಇಂಥ ಸ್ವರ್ಗಲೋಕವು ವಿರಾಟ್ಪುರುಷನ ತಲೆಯಿಂದ ಉಂಟಾಗಿದೆ–ಎಂದು ಇಲ್ಲಿ ತಿಳಿಸಲಾಗಿದೆ. ಶರೀರದಲ್ಲಿ ತಲೆಯೇ ಪ್ರಧಾನವು. ಇಂಥ ಅವಯವದಿಂದ ಬ್ರಹ್ಮಾಂಡದ ಶಿರಸ್ಸಿನಂತಿರುವ ದ್ಯುಲೋಕವು ಹೊರಬಂದಿದೆ. ಹಾಗೆಯೇ ನಾಭಿ(ಹೊಕ್ಕುಳು)ಯಿಂದ ಅಂತರಿಕ್ಷಲೋಕವು ಸೃಷ್ಟವಾಯಿತು–ಎಂದೂ ಇಲ್ಲಿ ಹೇಳಿದೆ. ಭೂಮಿಗೂ ಸ್ವರ್ಗಲೋಕಕ್ಕೂ ನಡುವೆ ಇರುವ ಖಾಲಿಜಾಗವೇ ಅಂತರಿಕ್ಷವು. ವಾಯುವು ಈ ಸ್ಥಳವನ್ನಾಕ್ರಮಿಸಿರುವನು. ಮತ್ತು ಸೂರ್ಯ ಚಂದ್ರ, ನಕ್ಷತ್ರಗಳು, ಗ್ರಹಗಳು ಇಲ್ಲಿಯೇ ಇದ್ದುಕೊಂಡಿರುವವು. ಅವುಗಳ ಸಂಚಾರಕ್ಕೂ ಅಂತರಿಕ್ಷವೇ ಅವಕಾಶವನ್ನು ಕಲ್ಪಿಸಿದೆ. ಭೂಲೋಕದಲ್ಲಿ ಜನರು ಕೂಡ ಕೆಲವರು ಈಗ ಅಂತರಿಕ್ಷವನ್ನೇ ಅವಲಂಬಿಸಬೇಕಾಗಿದೆ. ಏಕೆಂದರೆ ದೊಡ್ಡ ದೊಡ್ಡ ನಗರಗಳಲ್ಲಿ ಜಾಗವು ಸಾಲದೆ ಆಕಾಶಕ್ಕೇ ಮಹಡಿಗಳನ್ನು ಏರಿಸಿ ಭವನಗಳನ್ನು ನಿರ್ಮಿಸುತ್ತಿದ್ದಾರೆ. ಇಂಥ ಅಂತರಿಕ್ಷವು ಭಗವಂತನಾದ ವಿರಾಡಾತ್ಮನ ಹೊಕ್ಕುಳಿನಿಂದ ಹೊರಬರಬೇಕಾದರೆ ಅದು ಎಷ್ಟು ದೊಡ್ಡದಾಗಿದ್ದೀತು? ಎಂದು ಊಹಿಸಿದಲ್ಲಿ ವಿರಾಡಾತ್ಮನ ಮಹಿಮೆಯ ಅರಿವಾಗುವದು.

ಈಗ ಭಗವಂತನ ಪಾದಗಳಿಂದ ಭೂಮಿಯು ಸೃಷ್ಟಿಯಾಗಿರುವದರ ರಹಸ್ಯವನ್ನು ವಿಚಾರಮಾಡೋಣ. ಭೂಮಿಯು ಭಗವಂತನ ಪತ್ನಿಯೆಂದೂ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ಪಂಚಭೂತಗಳಲ್ಲಿ ಇದು ಚಿಕ್ಕದಾದರೂ ಮನುಷ್ಯರು, ಪ್ರಾಣಿಗಳು, ಗಿಡಮರಗಳೇ ಮುಂತಾದ ಸ್ಥಾವರಜಂಗಮ ವರ್ಗಕ್ಕೆಲ್ಲ ಇದೇ ಆಶ್ರಯವಾಗಿದೆ. ಆಧ್ಯಾತ್ಮವಾಗಿ ಭೂಮಿಯು ನಮ್ಮ ಶರೀರವಾಗಿದೆ. ಭೂಮಿಯಲ್ಲಿ ಅನೇಕ ರತ್ನಗಳೂ ಲೋಹಗಳೂ ದೊರೆಯು ವವು. ಪೈರುಪಚ್ಚೆಗಳು ಬೆಳೆಯುವವು. ಮಾನವನಿಗೆ ಭೂಮಿಯು ತನ್ನದು –ಎಂಬ ವ್ಯಾಮೋಹವು ಅನಾದಿಕಾಲದ್ದೆಂದು ಹೇಳಬಹುದು. ಭೂಮಿಗಾಗಿ ಕಾದಾಡಿ ಪ್ರಾಣಾರ್ಪಣೆಮಾಡಿರುವ ವೀರರೆಷ್ಟುಮಂದಿಯೋ ಲೆಕ್ಕವೇ ಇಲ್ಲ. ಈಗಲೂ ದೇಶ– ರಾಜ್ಯ– ಗಡಿ– ಜಮೀನು– ಮುಂತಾದ ನೆಪದಿಂದ ಬಹಳ ಜನರು ಭೂಮಿಗಾಗಿ ಸೆಣಸಾಡುತ್ತಿರುವರು. ಜನ್ಮಭೂಮಿಯು ಸ್ವರ್ಗಕ್ಕಿಂತ ಶ್ರೇಷ್ಠವೆಂಬ ನಾಣ್ಣುಡಿಯೂ ಇದೆ. ಹೀಗೆ ದೇವತೆಯಾಗಿಯೂ ಪ್ರಾಣಿ ಗಳಿಗೆ ಏಕಾಶ್ರಯವಾಗಿಯೂ ಇರುವ ಭೂಮಿಯು ಭಗವಂತನಾದ ವಿರಾ ಡಾತ್ಮನ ಪಾದಗಳಿಂದ ಹುಟ್ಟಿರುತ್ತದೆ. ಈ ಭೂಮಿಯು ಹಿಂದೊಮ್ಮೆ ರಾಕ್ಷಸನೊಬ್ಬನಿಂದ ಅಪಹರಿಸಲ್ಪಟ್ಟು ಕಡೆಗೆ ವರಾಹಮೂರ್ತಿಯಾದ ವಿಷ್ಣುವಿನಿಂದ ಉದ್ಧೃತಳಾದಳೆಂದು ಪುರಾಣಗಳು ಹೇಳುತ್ತವೆ. ಭೂಮಿ ಯಿಲ್ಲದೆ ಪ್ರಾಣಿಗಳಿಗೆ ಆಶ್ರಯವಾದರೂ ಎಲ್ಲಿದ್ದೀತು ? ಅಂತೂ ಈ ಭೂಮಿಯು ಕೂಡ ವಿರಾಟ್‌ಪುರುಷನ ಪಾದಗಳಿಗೆ ಸಮಾನವಾಗಿದೆ ; ಆ ಪಾದಗಳಿಂದ ಆವಿರ್ಭವಿಸಿದೆ–ಎಂದಾಯಿತು.

ಹಾಗೆಯೇ ವಿರಾಡಾತ್ಮನ ಕಿವಿಗಳಿಂದ ದಿಕ್ಕುಗಳು ಹುಟ್ಟಿರುತ್ತವೆ– ಎಂಬ ವರ್ಣನೆಯನ್ನು ಕೇಳೋಣ. ದಿಕ್ಕುಗಳು ವ್ಯವಹಾರದಲ್ಲಿ ಎಂಟು ಅಥವಾ ಹತ್ತು ಎಂದು ಹೇಳಬಹುದು. ಎಲ್ಲಾ ದಿಕ್ಕುಗಳಿಗೂ ಅಭಿಮಾನಿ ದೇವತೆಗಳಿದ್ದಾರೆ. ಸಂಧ್ಯಾವಂದನೆಯಲ್ಲಿ 'ದಿಗ್ವಂದನೆ'ಯೂ ಸೇರಿರುತ್ತದೆ. ಮನುಷ್ಯನು ತನ್ನ ವ್ಯವಹಾರದಲ್ಲಿ ದಿಕ್ಕುಗಳಲ್ಲಿಯೂ ಶುಭ, ಅಶುಭ–ಎಂಬ ಭೇದವನ್ನು ಕಲ್ಪಿಸಿಕೊಂಡಿದ್ದಾನೆ. ಆದರೆ ಎಲ್ಲಾ ದಿಕ್ಕುಗಳೂ ಭಗವಂತನ ವಿಭೂತಿಗಳೇ ಆಗಿವೆ. ಆಧ್ಯಾತ್ಮವಾಗಿ ದಿಗ್ದೇವತೆಗಳು ನಮ್ಮ ಕಿವಿಗಳಲ್ಲಿ ನೆಲೆಸಿರುತ್ತಾರೆ.

ಈ ಮಂತ್ರದ ಕೊನೆಯ ಚರಣದಲ್ಲಿ ಉಳಿದ ಲೋಕಗಳೂ ಸೃಷ್ಟಿಯಾದವೆಂದು ಒಟ್ಟಿಗೆ ಸೂಚಿಸಿದೆ. ಆದ್ದರಿಂದ ಇಲ್ಲಿ ಹೆಸರಿಸದೆ ಇರುವ ಅತಲ-ವಿತಲಾದಿ ಪಾತಾಳಪರ್ಯಂತವಾದ ಲೋಕಗಳು, ಸ್ವರ್ಗಲೋಕಕ್ಕೂ ಮೇಲಿರುವ ಮಹರ್ಜನತಪೋಸತ್ಯಲೋಕಾದಿಗಳು, ಇನ್ನೂ ಕೈಲಾಸ-ವೈಕುಂಠ-ಮುಂತಾದ ಪೌರಾಣಿಕ ಲೋಕಗಳು ಎಲ್ಲವೂ ವಿರಾಡಾತ್ಮನ ಶರೀರಾವಯವಗಳಿಂದಲೇ ಹೊರಬಂದಿದ್ದು ಆ ವಿರಾಟ್ಪುರುಷನು ಸರ್ವಲೋಕವ್ಯಾಪಿಯಾಗಿರುವನು-ಎಂದು ತಿಳಿಯಬೇಕು.

---

## ೧೩. ವೇದಾಹಮೇತಂ ಪುರುಷಮ್

ಪುರುಷಸೂಕ್ತದ ಹದಿನಾರನೆಯ ಋಕ್ಕನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ :

**ವೇದಾಹಮೇತಂ ಪುರುಷಂ ಮಹಾಂತಮ್ |**
**ಆದಿತ್ಯವರ್ಣಂ ತಮಸಸ್ತು ಪಾರೇ ||**
**ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ ।**
**ನಾಮಾನಿ ಕೃತ್ವಾಽಭಿವದನ್ ಯದಾಸ್ತೇ ||೧೬||**

'ಎಲ್ಲಾ ಶರೀರಗಳನ್ನೂ ಉಂಟುಮಾಡಿ ಹೆಸರುಗಳನ್ನೂ ಕೊಟ್ಟು ವ್ಯವಹಾರಮಾಡುತ್ತಾ ಇದ್ದರೂ ಸ್ವರೂಪಮಾತ್ರದಿಂದ ಕತ್ತಲೆಯ ಆಚೆಯಿದ್ದು ಪ್ರಕಾಶಮಾನನಾಗಿರುವ ಮಹಾಂತನಾದ ಆ ಪುರುಷನನ್ನು ಜಾಣನಾದ ನಾನು ಬಲ್ಲವನಾಗಿರುವೆನು'.

ಈ ಮಂತ್ರದಲ್ಲಿ ಭಗವಾನ್ ನಾರಾಯಣನ ಸ್ವರೂಪವನ್ನು ಯಥಾರ್ಥವಾಗಿ ಕಂಡುಕೊಂಡ ಋಷಿಯೊಬ್ಬನು ತನ್ನ ಅನುಭವವನ್ನು ತಿಳಿಸಿರುತ್ತಾನೆ. ಪುರುಷಸೂಕ್ತದ ಈವರೆಗಿನ ಮಂತ್ರಗಳಲ್ಲಿ ವಿರಾಡಾತ್ಮನ ವರ್ಣನೆಯೂ ಆತನಿಂದ ಹೊರಬಂದ ಜಗತ್ತಿನ ವಿವರವೂ ಪ್ರತಿಪಾದಿಸಲಾಗಿದೆ. ಈ ಸೃಷ್ಟಿಪ್ರಕ್ರಿಯೆಯನ್ನು ಈಗ ಜ್ಞಾನದಲ್ಲಿ ಸಮನ್ವಯಗೊಳಿಸಲಾಗುವದು. ವೇದಾಂತಗಳಲ್ಲಿ ಸೃಷ್ಟಿವಿಚಾರವು ಪ್ರಸ್ತಾಪಿಸಲ್ಪಟ್ಟಿದ್ದರೆ ಅದು

ತತ್ತ್ವವನ್ನು ತಿಳಿಸಲು ಉಪಾಯಮಾತ್ರವೆಂದೇ ಗೌಡಪಾದರು ತಿಳಿಸಿದ್ದಾರೆ. ಹಾಗೆಯೇ ಇಲ್ಲಿಯೂ ಪರಮಪುರುಷನ ಸ್ವರೂಪಜ್ಞಾನಕ್ಕಾಗಿಯೇ ಸೃಷ್ಟಿವಿವರಗಳು ಬಂದಿವೆಯೆಂದು ತಿಳಿಯಬೇಕು. ಭಗವಂತನಿಗೆ ತೋರಿಕೆಯ ಸ್ವರೂಪವನ್ನು ಬಿಟ್ಟರೆ ನಿಜನಾಗಿ ರೂಪವೇನೂ ಇರುವದಿಲ್ಲ. ಆದರೂ ನಮ್ಮ ಬುದ್ಧಿಗೆ ತಿಳಿಯುವದಕ್ಕಾಗಿ ಉಳಿದ ಎಲ್ಲಾ ರೂಪಗಳನ್ನೂ ಅಲ್ಲಗಳೆದು ತೇಜೋರೂಪವೊಂದನ್ನು ಉಳಿಸಿಕೊಳ್ಳಲಾಗಿದೆ. ಬೆಳಕಿಗೆ ಯಾವದೇ ವಿಶೇಷಾಕಾರಗಳಿರುವದಿಲ್ಲ. ಮುಖ, ಬಾಹು, ಪಾದಗಳೆಂಬ ವಿಭಾಗವಿರುವದಿಲ್ಲ. ಭಗವಂತನು ಶರೀರರಹಿತನು–ಎಂಬಿದೇ ನಿಜತತ್ತ್ವವು. ಆದ್ದರಿಂದ ಇಲ್ಲಿ ಆತನನ್ನು ಕತ್ತಲೆಯ ಆಚೆ ಇರುವ ಬೆಳಕಿನ ಸ್ವರೂಪನಾಗಿರುವನು–ಎಂದು ತಿಳಿಸಲಾಗಿದೆ. ಆದರೆ ಅವನು ದೃಶ್ಯನಲ್ಲವೆಂಬ ಪರಮ ಸಿದ್ಧಾಂತವನ್ನು ಅವಲಂಬಿಸಿದಾಗ ಈ ತೇಜೋರೂಪವೂ ಕಲ್ಪಿತವೇ ಎಂದು ಗೊತ್ತಾಗುವದು. ದ್ರಷ್ಟೃ, ದೃಶ್ಯ– ಪ್ರಕ್ರಿಯೆಯೂ ಬ್ರಹ್ಮಪ್ರತಿಪತ್ತಿಗೆ ಉಪಾಯಮಾತ್ರವಾಗಿರುವದರಿಂದ ಅರಿತಮೇಲೆ ದ್ವೈತವಿರುವದಿಲ್ಲ. ಆದ್ದರಿಂದ ಸಾಧಕನು ತನ್ನ ಪ್ರತ್ಯಗಾತ್ಮನೇ ಆಗಿರುವ ನಾರಾಯಣನನ್ನು ಅರಿತುಕೊಂಡನಾದರೆ ತಾನು ಅವನಿಗಿಂತ ಬೇರೆಯಾಗಿ ಉಳಿಯುವದಿಲ್ಲ. ಮತ್ತು ಯಾವ ದ್ವೈತವನ್ನೂ ಅವನು ಕಾಣಲಾರನು. ಇದೇ ಬ್ರಹ್ಮನಿಷ್ಠೆಯು. ಇಂಥ ಬ್ರಹ್ಮವಿದನಾದ ಋಷಿಯ ಪೂರ್ಣಾನುಭವವು ಈ ಮಂತ್ರದಲ್ಲಿ ಅಡಗಿದೆ.

ಈಗ ಮಂತ್ರಾರ್ಥವನ್ನು ನೋಡೋಣ. ಭಗವಂತನು ಎಲ್ಲಾ ಪ್ರಾಣಿಗಳನ್ನೂ ಸೃಷ್ಟಿಮಾಡಿ ಹೆಸರಿಟ್ಟನೆಂದು ಇಲ್ಲಿ ತಿಳಿಸಿದೆ. ಇದೊಂದು ಮಹಾಕಾರ್ಯವು. ಈ ಜಗತ್ತಿನಲ್ಲಿರುವ ಅನೇಕ ವಸ್ತುಗಳ ಹೆಸರುಗಳಲ್ಲಿ ಎಲ್ಲವನ್ನೂ ಯಾವನೊಬ್ಬನೂ ಅರಿಯಲಾಗುವದಿಲ್ಲ. ಏಕೆಂದರೆ ವಸ್ತುಗಳಿಗಿಂತಲೂ ಹೆಸರುಗಳೇ ಅಧಿಕವಾಗಿರುತ್ತವೆ. ಉದಾಹರಣೆಗೆ 'ನೀರು' ಎಂಬುದಕ್ಕೆ ಸಂಸ್ಕೃತಭಾಷೆಯಲ್ಲಿಯೇ ಆಪಃ, ವಾರಿ, ಪಯಃ, ಉದಕಮ್– ಇತ್ಯಾದಿ ಇಪ್ಪತ್ತಕ್ಕೂ ಮೀರಿರುವ ಹೆಸರುಗಳಿವೆ. ಇನ್ನು ಪ್ರಪಂಚದಲ್ಲಿ ಪ್ರಚಲಿತವಾಗಿರುವ ಎಲ್ಲಾ ಭಾಷೆಗಳಲ್ಲಿಯೂ ರೂಢಿಯಲ್ಲಿರುವ ನೀರಿನ ಹೆಸರುಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನೂರಾರು ಸಂಖ್ಯೆಯನ್ನೂ ಮೀರ

ಬಹುದು. ಒಂದು ವಸ್ತುವಿಗೇ ಇಷ್ಟೊಂದು ಹೆಸರುಗಳಾದರೆ ಎಲ್ಲಾ ವಸ್ತುಗಳ– ಚೇತನಾಚೇತನಸೃಷ್ಟಿಯಲ್ಲಿ ಕಂಡುಬರುವ ಪದಾರ್ಥಗಳ– ಹೆಸರುಗಳನ್ನು ಲೆಕ್ಕಮಾಡುವದೇ ಸಾಧ್ಯವಿಲ್ಲ. ಜೊತೆಗೆ ವ್ಯವಹಾರದಲ್ಲಿ ಹೊಸ ಹೊಸ ಪದಾರ್ಥಗಳು ಹುಟ್ಟಿದಂತೆಲ್ಲ ಹೆಸರುಗಳ ಸಂಖ್ಯೆಯೂ ಬೆಳೆಯುತ್ತಲೇ ಇದೆ. ಉದಾಹರಣೆಗೆ ಕೆಲವು ಲೋಹಗಳು; ಹಿಂಡಾಲಿಯಂ, ಅಲ್ಯೂಮಿನಿಯಮ್–ಇತ್ಯಾದಿ. ಹಿಂದಿನವರಿಗೆ ಇವು ಗೊತ್ತಿರಲಿಲ್ಲ. ಇದೇ ರೀತಿಯಾಗಿ ಔಷಧಗಳು, ರೋಗಗಳು, ಭೌತಿಕವಾಗಿರುವ ಕೆಲವು ಸಸ್ಯವರ್ಗ, ಪ್ರಾಣಿವರ್ಗಗಳು– ಹೀಗೆ ವಿಚಾರಮಾಡುತ್ತಾ ಹೋದರೆ ಹೊಸಹೊಸ ನಾಮಧೇಯಗಳ ಆವಿರ್ಭಾವವು ನಡೆದೇ ಇದೆ : ಇರಲಿ. ಈ ಎಲ್ಲಾ ನಾಮಗಳನ್ನೂ ರೂಪಗಳನ್ನೂ ಭಗವಂತನೊಬ್ಬನೇ ಸೃಷ್ಟಿಸಿರುತ್ತಾನೆ– ಎಂದರೆ ಅವನ ಸರ್ವಜ್ಞತ್ವ ಸರ್ವಶಕ್ತಿತ್ವಗಳನ್ನು ನಾವು ಅಳೆಯಲಾಗುವದೇ ಇಲ್ಲ. ಆದರೂ ಈ ನಾಮರೂಪಗಳ ಪ್ರಪಂಚವಾಗಿಯೂ ತಾನೇ ಹೊರತೋರಿಕೊಂಡು ತಾನೇ ಸೃಷ್ಟಿಕರ್ತನೂ ಅವುಗಳ ಅಂತರಾತ್ಮನೂ ಆಗಿರುವ ಭಗವಂತನನ್ನು ಅರಿತುಕೊಳ್ಳಬೇಕಾದರೆ ಮಾನವನು ತನ್ನ ಚಿಂತನೆಯನ್ನು ವಿಶಾಲವಾಗಿ ಬೆಳೆಸಬೇಕು. ಎಲ್ಲವೂ ಭಗವಂತನೇ ಆಗಿರುವದು ಅವನನ್ನು ಅರಿಯಲು ನಮಗೆ ಅನುಕೂಲವಾಗಿಯೇ ಇದೆ. ಆದರೆ ನಾವು ಪ್ರಪಂಚವನ್ನೇ ವಿಶ್ಲೇಷಿಸುತ್ತಾ ಕುಳಿತರೆ ಅದರಲ್ಲಿಯೇ ಮುಳುಗಿಬಿಡುವದರಿಂದ ಎಷ್ಟು ಸಹಸ್ರವರ್ಷಗಳಾದರೂ ಆತನನ್ನು ಅರಿಯಲಾಗ.ವದಿಲ್ಲ. ಆದರಿಂದ ಪ್ರಪಂಚದ ನಾಮರೂಪಗಳಲ್ಲಿ ಯಾವದಾದರೊಂದನ್ನು ನೆಪಮಾಡಿಕೊಂಡು ವಿಚಾರಮಾಡುತ್ತಾ ಒಳಮುಖವಾದ ಅಂತಃಕರಣದಿಂದ ಅವನನ್ನು ಮೊದಲು ನಮ್ಮ ಹೃದಯದಲ್ಲಿ ಕಂಡುಕೊಳ್ಳಬೇಕು. ಇಷ್ಟೇ ಹೊರತು ಭಗವಂತನ ಸೃಷ್ಟಿಯೇ ಆದರೂ, ಅದು ಮೂಲತಃ ಭಗವಂತನೇ ಆಗಿದ್ದರೂ ನಾಮರೂಪಗಳಲ್ಲಿ ಮಾತ್ರ ನಾವು ಮನಸ್ಸನ್ನು ನೆಲೆಗೊಳಿಸಬಾರದು. ಭಗವಂತನನ್ನು ಮರೆಯಿಸುವ ಈ ನಾಮರೂಪಗಳು ನಮ್ಮ ದೃಷ್ಟಿಯಿಂದ 'ಮಾಯೆ'ಯಾಗಿದ್ದು ಆತನನ್ನೇ ಮುಚ್ಚಿರುತ್ತವೆ. ಆದ್ದರಿಂದ ಪರಮಪುರುಷನ ದರ್ಶನಕ್ಕೆ ಉಪಾಯವಾಗುವಷ್ಟು ಮಟ್ಟಿಗೆ ನಾಮರೂಪಗಳ ಅವಲಂಬನೆಯು ಸಾಕಾಗಿರುತ್ತದೆ.

ಈಗ ಋಷಿಯು ಹೇಳಿಕೆಯಂತೆ ಆದಿತ್ಯವರ್ಣನೂ ಕತ್ತಲೆಯ ಆಚೆ ಇರುವವನೂ ಆಗಿರುವ ಪುರುಷನನ್ನು ನಾನು ಬಲ್ಲೆನು- ಎಂಬಿದರ ವಿವರವನ್ನು ನೋಡೋಣ. ಭಗವಂತನ ಸಾಕ್ಷಾತ್ಕಾರವು ಭಕ್ತರಿಗೆ ನಾಮರೂಪ ವಿಶಿಷ್ಟವಾಗಿಯೂ ಆಗಬಹುದು. ಆದರೆ ಇದು ಜ್ಞಾನಿಗಳಿಗೆ ಹೊಂದುವದಿಲ್ಲ. ಇಲ್ಲಿ 'ನಾನು ತಿಳಿದಿದ್ದೇನೆ' ಎಂದಿರುವದರಿಂದ ಈ ಋಷಿಯು ಭಗವಂತನನ್ನು ತನ್ನ ಆತ್ಮನನ್ನಾಗಿ ಕಂಡುಕೊಂಡ ಅನುಭವವನ್ನೇ ಉದ್ಗಾರವಮಾಡಿದ್ದಾನೆಂದು ತಿಳಿಯಬೇಕು. 'ಆತ್ಮ' ಎಂಬಿದು ಪ್ರತ್ಯಗಾತ್ಮನಲ್ಲಿಯೇ ರೂಢವಾದ ಶಬ್ದವಾದ್ದರಿಂದ ಆತ್ಮಸಾಕ್ಷಾತ್ಕಾರವು ಕಂಡುಕೊಳ್ಳುವವನಿಗಿಂತ ಬೇರೆಯಾಗಿ ಆಗಲಾರದು. ಆದ್ದರಿಂದ ಈ ಋಷಿಯ ಅನುಭವವು ವರ್ಣನಾತೀತವಾದುದು. ಹೀಗಿದ್ದರೂ ತನ್ನ ಆನಂದವನ್ನು ಪ್ರಕಟಿಸುವದಕ್ಕಾಗಿ ಆತನು ಹಾಡಿರುತ್ತಾನೆ. ತಮಸ್ಸೆಂದರೆ ಅವಿದ್ಯೆಯು; ಪ್ರಕಾಶವೆಂದರೆ ಜ್ಞಾನವು. ಕತ್ತಲೆಯ ಆಚೆ-ಎಂದರೆ ಅವಿದ್ಯೆಯಿಂದ ಬಿಡುಗಡೆಯಾದಾಗ ಕಂಡುಬರುವ ಅಖಂಡಜ್ಞಾನಾನಂದಸ್ವರೂಪಾನುಭವವು ಇಲ್ಲಿ ಪ್ರಕೃತವಾಗಿದೆ. ಹೀಗೆ ಈ ಋಷಿಯು ಪುರುಷಸೂಕ್ತಪ್ರತಿಪಾದ್ಯನಾದ ನಿತ್ಯಶುದ್ಧಬುದ್ಧಮುಕ್ತನೂ ಸರ್ವಜ್ಞನೂ ಸರ್ವಶಕ್ತಿಸಮನ್ವಿತನೂ ಆದ ಪರಮಾತ್ಮನ ಸ್ವರೂಪವನ್ನು ತಾನು ಕಂಡಂತೆ ತಿಳಿಸುವ ಮೂಲಕ ಸರ್ವರಿಗೂ ಆದರ್ಶನಾಗಿದ್ದಾನೆ. ಇವನು ಧೀರನೇ ಹೌದು. ಜ್ಞಾನಿಯನ್ನು ಧೀರನೆಂದು ಉಪನಿಷತ್ತುಗಳಲ್ಲಿ ಹೊಗಳಿದೆ. 'ತಿಳಿದಿದ್ದೇನೆ' ಎಂದು ವರ್ತಮಾನಕಾಲದ ಕ್ರಿಯಾಪದದ ಪ್ರಯೋಗವಿರುವದರಿಂದ ಜ್ಞಾನವು ಬದುಕಿರುವಾಗಲೇ ಉಂಟಾಗುವ ಪ್ರತ್ಯಕ್ಷಫಲವೆಂದೂ ಸಿದ್ಧವಾಗುತ್ತದೆ.

ಈಗ ಮುಂದಿನ ಮಂತ್ರವನ್ನು ವಿಚಾರಮಾಡೋಣ :-

**ಧಾತಾ ಪುರಸ್ತಾತ್ ಯಮುದಾಜಹಾರ |**
**ಶಕ್ರಃ ಪ್ರ ವಿದ್ವಾನ್ ಪ್ರದಿಶಶ್ಚತಸ್ರಃ ||**
**ತಮೇವಂ ವಿದ್ವಾನಮೃತ ಇಹ ಭವತಿ ।**
**ನಾನ್ಯಃ ಪಂಥಾ ಅಯನಾಯ ವಿದ್ಯತೇ ||೧೭||**

'ಹಿಂದೆ ಬ್ರಹ್ಮನು ಯಾವನನ್ನು ಧ್ಯಾನಮಾಡಿದನೋ ಚೆನ್ನಾಗಿ ಈತನನ್ನು ಬಲ್ಲ ಇಂದ್ರನೂ ಈ ನಾಲ್ಕು ದಿಕ್ಕುಗಳಲ್ಲಿರುವ ಋಷಿಗಳೂ ಯಾವನನ್ನು ಅರಿತು

ಕೊಂಡರೋ ಅವನನ್ನೇ ತಿಳಿದವನು ಇಲ್ಲಿಯೇ ಮುಕ್ತನಾಗುವನು. ಮೋಕ್ಷಕ್ಕೆ ಇನ್ನು ಬೇರೆಯು ದಾರಿಯಿರುವದಿಲ್ಲ'.

ಈ ಮಂತ್ರದಲ್ಲಿ ಪರಮಾತ್ಮನ ಜ್ಞಾನದ ಮಹಿಮೆಯನ್ನು ಹೊಗಳಿದೆ. ಹೇಗೆಂದರೆ : ಮುಕ್ತಿಗೆ ಜ್ಞಾನವೊಂದೇ ಸಾಧನವು–ಎಂದು ತಿಳಿಸಿರುತ್ತದೆ. ಬೇರೊಂದು ದಾರಿಯಿರುವದಿಲ್ಲ– ಎಂಬ ಮಾತಿನಿಂದ ಜ್ಞಾನವನ್ನು ಬಿಟ್ಟು ಉಳಿದ ಸಾಧನಗಳನ್ನೆಲ್ಲ ಅಲ್ಲಗಳೆದಿದೆ. ಕೆಲವು ವಾದಿಗಳು ತಿಳಿಸುವಂತೆ ಜ್ಞಾನಕರ್ಮಸಮುಚ್ಚಯವಾಗಲಿ, ತಪಸ್ಸು, ಯೋಗ–ಸಮಾಧಿಗಳಾಗಲೀ ಮುಕ್ತಿಪ್ರದಗಳಲ್ಲ. ಆದರೆ ಕರ್ಮ, ಉಪಾಸನೆ, ಯೋಗಾದಿಗಳನ್ನು ಮಾಡ ಬಾರದೆಂದರ್ಥವಲ್ಲ. ಮತ್ತೇನೆಂದರೆ ಅವುಗಳೇನಿದ್ದರೂ ಜ್ಞಾನವು ನಮಗೆ ಉಂಟಾಗುವದಕ್ಕೆ ತಕ್ಕ ಅಂತಃಕರಣಶುದ್ಧಿ, ಏಕಾಗ್ರತೆ– ಮುಂತಾದವು ಗಳನ್ನು ಮಾತ್ರ ಒದಗಿಸಿಕೊಡುವವೇ ಹೊರತು ಮುಕ್ತಿಯನ್ನು ಕೊಡಲಾ ರವು. ಏಕೆಂದರೆ ಮೋಕ್ಷವು ಕಾರ್ಯವಲ್ಲ. ಹೊಸದಾಗಿ ಪಡೆಯುವದೂ ಅಲ್ಲ. ಅಜ್ಞಾನದಿಂದ ಅಪ್ರಾಪ್ತವಾಗಿದ್ದಂತೆ ಕಂಡುಬಂದಿದ್ದು ಜ್ಞಾನವಾದ ಬಳಿಕ ಪ್ರಾಪ್ತವಾದಂತೆ ವ್ಯವಹರಿಸಲ್ಪಡುವದು. ಹಾಗಲ್ಲದೆ ಹೊಸದಾಗಿ ಬಂದದ್ದಾದರೆ ಅನಿತ್ಯವಾಗಿ ಬಿಡುವದು. ಇರಲಿ. ಹೀಗೆ ಆ ಪರಮಾತ್ಮ ನನ್ನು ಅರಿತುಕೊಂಡವನು ಅಮೃತನಾಗುತ್ತಾನೆ– ಎಂದು ಇಲ್ಲಿ ತಿಳಿಸ ಲಾಗಿದೆ.

ಈಗ ಆ ಪರಮಾತ್ಮನನ್ನು ಹಿಂದೆ ಅರಿತು ಮುಕ್ತರಾದವರ ವಿಷಯ ವಾಗಿ ಪ್ರಸ್ತಾಪಿಸಲಾಗುವದು. ಧಾತಾ– ಎಂದರೆ ಚತುರ್ಮುಖಬ್ರಹ್ಮನು. ಆತನು ತಾನೊಬ್ಬನೇ ಪರಮಾತ್ಮನಿಂದ ಹೊರಬಂದಾಗ ಏನೂ ತಿಳಿಯದೆ ತಪಸ್ಸುಮಾಡಿ ಅನಂತರ ನಾರಾಯಣಸ್ವರೂಪವನ್ನರಿತು ಕೃತಕೃತ್ಯನಾದನು. ಹಾಗೆಯೇ ಇಂದ್ರನೂ ಸಹ ಒಮ್ಮೆ ಯಕ್ಷರೂಪವನ್ನು ಕಂಡು ಅದೇನೆಂದು ತಿಳಿಯದೆ ಮೂಢನಾಗಿದ್ದಾಗ ಉಮಾದೇವಿಯ ಉಪದೇಶದಿಂದ ಬ್ರಹ್ಮ ವನ್ನು ಅರಿತುಕೊಂಡನು. ಮತ್ತೊಮ್ಮೆ ತಂದೆಯಾದ ಪ್ರಜಾಪತಿ ಬ್ರಹ್ಮ ನಲ್ಲಿಯೇ ನೂರೊಂದು ವರ್ಷಗಳ ಬ್ರಹ್ಮಚರ್ಯವನ್ನು ಮಾಡಿ ಆತನ ಉಪ ದೇಶದಿಂದ ಬ್ರಹ್ಮವಿದನಾದನು. ಹೀಗೆಯೇ ನಾಲ್ಕು ದಿಕ್ಕುಗಳಲ್ಲಿ ಕುಳಿತು ಬ್ರಹ್ಮಪ್ರಾಪ್ತಿಗಾಗಿ ತಪಸ್ಸನ್ನಾಚರಿಸಿದ ಋಷಿಗಳು ಕೂಡ ಭಗವದನುಗ್ರಹ

ದಿಂದ ಜ್ಞಾನವನ್ನು ಸಂಪಾದಿಸಿಕೊಂಡರು. ಇದರಿಂದ ಸಿದ್ಧವಾಗುವ ದೇನೆಂದರೆ: ಯಾವನೇ ಆಗಲಿ, ಮುಕ್ತಿಯನ್ನು ಬಯಸುವವನಾಗಿದ್ದಲ್ಲಿ ಇಂದ್ರ, ಬ್ರಹ್ಮಾದಿಗಳಂತೆಯೇ ತಾನೂ ಪ್ರಯತ್ನವಾಡಿ ಚೆನ್ನಾಗಿ ತಪಸ್ಸು ಮಾಡಿ ಶುದ್ಧಾಂತಃಕರಣನಾಗಿ ಮುಂದೆ ಗುರೂಪದೇಶದಿಂದಲೇ ಬ್ರಹ್ಮ ಜ್ಞಾನವನ್ನು ಸಂಪಾದಿಸಿಕೊಂಡೇ ಅಮೃತನಾಗಬೇಕು. ಇಲ್ಲವಾದರೆ ಮುಕ್ತಿಗೆ ಬೇರೆಯ ದಾರಿಯಿರುವದಿಲ್ಲ—ಎಂದು ಈ ಮಂತ್ರದಲ್ಲಿ ತಿಳಿಸಿದೆ.

ಪುರುಷಸೂಕ್ತವನ್ನು ಪಾರಾಯಣಮಾಡುವವರು ನಮ್ಮಲ್ಲಿ ಅನೇಕ ರಿದ್ದಾರೆ. ಕರ್ಮಕಾಂಡದಲ್ಲಿಯಂತೂ ದೇವತಾಪೂಜೆ, ವ್ರತಾದಿಗಳಿಂದಾ ರಂಭಿಸಿ ದೇವತಾಪ್ರತಿಷ್ಠೆ, ರಥೋತ್ಸವಾದಿ ಆಗಮೋಕ್ತ ಕರ್ಮಗಳಲ್ಲಿ ಕೂಡ ಪುರುಷಸೂಕ್ತವೇ ವ್ಯಾಪಕವಾಗಿದೆ. ಇಂಥ ಮಂತ್ರಭಾಗವು ಅಧ್ಯಾತ್ಮ ದೃಷ್ಟಿಯಿಂದ ನೋಡಿದಾಗ ಎಲ್ಲಾ ಉಪನಿಷತ್ತುಗಳ ತಾತ್ಪರ್ಯವನ್ನೂ ಸಿದ್ಧಾಂತಸಾಧನವಿಷಯಗಳನ್ನೂ ಗುಹ್ಯವಾಗಿ ಒಳಗೊಂಡಿದ್ದು ಪರಮ ಪುರುಷನಂತೆಯೇ ಅದ್ವಿತೀಯವಾಗಿದೆ. ಈಗಲಾದರೂ ಇದರ ಕೇವಲ ಅಕ್ಷರಪಾಠವನ್ನು ಮೀರಿ ಅರ್ಥಾನುಸಂಧಾನದ ಕಡೆಗೆ ನಮ್ಮ ಬುದ್ಧಿ ಯನ್ನು ಪ್ರೇರೇಪಿಸೋಣ. ————

## ೧೮. ಯಜ್ಞೇನ ಯಜ್ಞಮಯಜನ್ತ ದೇವಾಃ

ಪುರುಷಸೂಕ್ತದ ೧೮ನೆಯ ಹಾಗೂ ಕೊನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ, ಮುಂದಿನ 'ಅದ್ಭ್ಯಃ ಸಂಭೂತಃ' ಎಂಬ ಅನುವಾಕವನ್ನು 'ಉತ್ತರನಾರಾಯಣ'ವೆಂದು ಕರೆಯುತ್ತಾರೆ. ಆದ್ದರಿಂದ ಈ ಕೆಳಗಿನ ಮಂತ್ರದೊಡನೆ ಪುರುಷಸೂಕ್ತವು ಪೂರೈಸುತ್ತದೆ.

ಯಜ್ಞೇನ ಯಜ್ಞಮಯಜನ್ತ ದೇವಾಃ ।
ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ॥
ತೇ ಹ ನಾಕಂ ಮಹಿಮಾನಸ್ಸಚಂತೇ ।
ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ ॥೧೮॥

'ದೇವತೆಗಳು ಬ್ರಹ್ಮನೆಂಬ ವಿರಾಟ್' ಪುರುಷನನ್ನು ಪಶುವಾಗಿ ಮಾಡಿ ನಡೆಯಿ ಸಿದ ಮಾನಸಿಕಯಜ್ಞವು ಪ್ರಥಮವಾದ ಧರ್ಮವಾಗಿ ಜಗತ್ತಿನಲ್ಲಿ ಪ್ರಸಿದ್ಧವಾಯಿತು.

ಸಾಧ್ಯರೆಂಬ ಆ ದೇವತೆಗಳು ಯಾವ ಪುಣ್ಯಾರ್ಜಿತಲೋಕದಲ್ಲಿರುವರೋ ಆ ಲೋಕವನ್ನು (ಯಜ್ಞ)ಮಹಿಮೆಯನ್ನರಿತವರೂ ಪಡೆಯುವರು'.

ಈ ಮಂತ್ರದಲ್ಲಿ ಯಜ್ಞದಿಂದ ಭಗವತ್ಪ್ರಾಪ್ತಿಯಾಗುವದೆಂತ ತಿಳಿಸಿದೆ. ಒಂದು ರೀತಿಯಲ್ಲಿ ನೋಡಿದರೆ ಯಜ್ಞವೇ ಪರಮಾತ್ಮನಾಗಿದೆ. ಆದರೂ ಅದನ್ನು ಕರ್ಮವಾಗಿ ನಾವು ಕಂಡಾಗ ಯಜ್ಞದಿಂದ ಭಗವಂತನನ್ನು ಪಡೆಯುತ್ತೇವೆ– ಎಂದು ಅಭಿಪ್ರಾಯವಾಗುತ್ತದೆ. ಯಜ್ಞವು ಜಗತ್ತಿನ ಮೊದಲನೆಯ ಧರ್ಮವಾಯಿತು– ಎಂಬಿದು ಬಹಳ ಮುಖ್ಯ ವಿಷಯ. ಧರ್ಮವೆಂದರೆ ಧಾರಣೆಮಾಡತಕ್ಕದ್ದು. ಜಗದ್ವ್ಯಾಪಾರವೆಲ್ಲವೂ ಬ್ರಹ್ಮದ ಅಧೀನವಾಗಿದೆ. ಆ ಪರಬ್ರಹ್ಮವು ಯಜ್ಞರೂಪದಿಂದ ದೇವತೆಗಳಿಗೆ ಪ್ರಸನ್ನವಾದಾಗ ಅದೇ ಜಗತ್ತಿನ ಧಾರಕವಾಯಿತು. ಅದು ಕರ್ಮರೂಪದಿಂದ ಅನುಷ್ಠೇಯವೂ ಆಯಿತು. ಹೀಗೆ ಯಜ್ಞಕ್ಕೆ ವೈದಿಕಕರ್ಮಪ್ರಪಂಚದಲ್ಲಿ ಪ್ರಪ್ರಥಮ ಸ್ಥಾನವೂ ಗೌರವವೂ ದೊರೆಯಿತು. ಈಗಲೂ ಯಾವದೇ ಪುಣ್ಯಕರ್ಮವನ್ನಾದರೂ ಯಜ್ಞವೆಂದೇ ಕರೆಯುವ ವಾಡಿಕೆಯಿದೆ. ಇದನ್ನು ಮೊದಲು ಮಾಡಿದವರು ದೇವತೆಗಳಾದ್ದರಿಂದ ಈಗಲೂ ದೇವಾಂಶವಿಲ್ಲದವನು ಯಜ್ಞಮಾಡಲಾರನು– ಎಂದಭಿಪ್ರಾಯ. ದೇವತೆಗಳು ಸಾಧ್ಯರೆನಿಸಿದ್ದೂ ಯಜ್ಞದಿಂದಲೇ. ಏಕೆಂದರೆ ಅವರು ತಮ್ಮ ಪದವಿಯನ್ನು ಈ ಯಜ್ಞದಿಂದಲೇ ಸಾಧಿಸಿಕೊಂಡವರಾಗಿದ್ದಾರೆ. ಆದ್ದರಿಂದ ಅವರು ಮನುಷ್ಯರಿಗೆಲ್ಲ ಪೂಜ್ಯರೂ ಅನುಕರಣೀಯರೂ ಆಗಿರುತ್ತಾರೆ. ಅವರು ಮಾಡಿದ ಯಜ್ಞವೂ ಸಹ ಯಜ್ಞನೆಂಬ ಹೆಸರಿನ ವಿರಾಟ್‌ಪುರುಷನ ಅವಯವಗಳಿಂದಲೇ– ಎಂದು ಹಿಂದೆ ಹೇಳಿದೆ. ಅದರ ಫಲವಾಗಿಯೇ ಜಗತ್ತೆಲ್ಲ ಅದೇ ಪುರುಷನ ಶರೀರದಿಂದ ಹೊರಬಂದಿದೆ. ಯಜ್ಞವೆಂಬ ಪುಣ್ಯಕರ್ಮವು ದೇವತೆಗಳಿಗೂ ಮಾನವರಿಗೂ ಸಂಬಂಧವನ್ನು ಕಲ್ಪಿಸುವ ಕೊಂಡಿಯಾಗಿರುವದು. ನಾವು ಯಜ್ಞದಿಂದ ದೇವತೆಗಳನ್ನು ಆರಾಧಿಸಿದಲ್ಲಿ ಆ ದೇವತೆಗಳು ನಮ್ಮನ್ನು ಮಳೆ, ಬೆಳೆ, ಆರೋಗ್ಯ, ಸುಭಿಕ್ಷ, ಸದ್ಬುದ್ಧಿ–ಗಳಿಂದ ಅನುಗ್ರಹಿಸುವರು. ಒಬ್ಬರನ್ನೊಬ್ಬರು ಹೀಗೆ ಸಹಕಾರದಿಂದ ಅನುಸರಿಸಿ ನಡೆದುಕೊಂಡುಬಂದಲ್ಲಿ ಶ್ರೇಯಸ್ಸನ್ನು ಪಡೆಯುವೆವು. ಹಾಗೆ ನಡೆಯಬೇಕೆಂದೇ ಸೃಷ್ಟಿಕರ್ತನಾದ

ಪ್ರಜಾಪತಿಯ ಆಜ್ಞೆ ಇರುವದಾಗಿ ಭಗವದ್ಗೀತೆಯಲ್ಲಿ ತಿಳಿಸಿದೆ. ಹೀಗೆ ಯಜ್ಞವು ಧರ್ಮವಾಗಿ ಅವತರಿಸಿ ಇಡಿಯ ಜಗತ್ತಿನ ಧಾರಕವಾಯಿತು. ಇದನ್ನು ಶ್ರದ್ಧೆಯಿಂದ ಆಚರಿಸುವವರು ಹಿಂದಿನ ದೇವತೆಗಳ ಮಹಿಮೆಯನ್ನೇ ಹೊಂದುತ್ತಾರೆ– ಎಂದು ಇಲ್ಲಿ ಸ್ತುತಿಸಲಾಗಿದೆ. ಯಾವ ಯಜ್ಞವನ್ನೂ ಮಾಡದೆ ಮನುಷ್ಯನು ಬದುಕಿದರೆ ಅವನ ಬಾಳು ವ್ಯರ್ಥವೆಂದೇ ಆಯಿತು. ಯಜ್ಞವು ಕರ್ಮರೂಪದಿಂದ ಪ್ರಾರಂಭವಾಗಿ ಜ್ಞಾನಯಜ್ಞದಲ್ಲಿ ಕೊನೆಗೊಂಡಾಗ ಮಾನವನು ಅಮೃತನಾಗುವದರಲ್ಲಿ ಸಂಶಯವಿಲ್ಲ. ಹೀಗೆ ಪುರುಷಸೂಕ್ತವು ಕರ್ಮ, ಉಪಾಸನೆ, ಜ್ಞಾನ–ಗಳ ತ್ರಿವೇಣೀಸಂಗಮವಾಗಿದ್ದು ಸನಾತನಧರ್ಮದ ಸಾರಸಂಗ್ರಹವಾಗಿದೆ– ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಈಗ ಉತ್ತರನಾರಾಯಣಮಂತ್ರಗಳ ಅರ್ಥವನ್ನು ವಿಚಾರಮಾಡೋಣ.

ಅದ್ಭ್ಯಃ ಸಂಭೂತಃ ಪೃಥಿವ್ಯೈ ರಸಾಚ್ಚ ।
ವಿಶ್ವಕರ್ಮಣಃ ಸಮವರ್ತತಾಧಿ ॥
ತಸ್ಯ ತ್ವಷ್ಟಾ ವಿದಧದ್ ರೂಪಮೇತಿ ।
ತತ್ಪುರುಷಸ್ಯ ವಿಶ್ವಮಾಜಾನಮಗ್ರೇ ॥೧॥

'ನೀರಿನಿಂದಲೂ ಹಾಗೂ ಪೃಥಿವಿಯ ರಸದಿಂದಲೂ ಬ್ರಹ್ಮಾಂಡವುಂಟಾಯಿತು. ಅದು ವಿಶ್ವಕರ್ಮನಾದ ಪರಮಾತ್ಮನಿಗಿಂತ ವಿಲಕ್ಷಣವಾಗಿತ್ತು. ಸರ್ವೇಶ್ವರನು ಅದರ ರೂಪವನ್ನು ತಾನೇ ಧರಿಸಿದನು. ಆದ್ದರಿಂದ ಬ್ರಹ್ಮಾಂಡವು ಆ ಪುರುಷನ ಅಧೀನವಾಗಿದೆ–ಎಂದು ನಾನು ಮೊದಲೇ ತಿಳಿದಿದ್ದೇನೆ'.

ಈ ಮಂತ್ರದಲ್ಲಿ ಸರ್ವೇಶ್ವರನೂ ಸರ್ವಶಕ್ತನೂ ಆದ ಭಗವಂತನು ತಾನೇ ಬ್ರಹ್ಮಾಂಡವಾಗಿ ಆದನೆಂದು ತಿಳಿಸಿದೆ. ಇದರ ಅಭಿಪ್ರಾಯವೇನೆಂದರೆ : ಪರಮಾತ್ಮನು ನಿರ್ವಿಕಾರನಾದ್ದರಿಂದ ಅವನೇನೂ ಪರಿಣಾಮವಾಗುವ ಸಂಭವವಿಲ್ಲ. ಆ ತತ್ತ್ವದೃಷ್ಟಿಯಿಂದ ಯಾವ ಸೃಷ್ಟಿಯೂ ಆಗಿಯೇ ಇಲ್ಲ. ಪ್ರಪಂಚದ ದೃಷ್ಟಿಯಿಂದ ನೋಡುವಾಗ ಮಾತ್ರ ಇದರ ಕರ್ತನಾರು ? ಇದಕ್ಕೆ ಉಪಾದಾನಕಾರಣವೇನಿರಬಹುದು ? ಎಂಬ ಶಂಕೆ

ಯೇಳುತ್ತದೆ. ಈ ಸಂಶಯದ ಮೂಲಕ ಬ್ರಹ್ಮವನ್ನು ಹುಡುಕುವ ಪ್ರಯತ್ನವು ಆರಂಭವಾಗಿ ಯಾವದು ಈ ಜಗತ್ತಿಗೆ ನಿಮಿತ್ತವೂ ಉಪಾದಾನವೂ ಆಗಿದೆಯೋ ಅದೇ ಬ್ರಹ್ಮವೆಂಬ ಸಿದ್ಧಾಂತವೂ ಹೊರಡುತ್ತದೆ. ಬ್ರಹ್ಮವನ್ನರಿತವನಿಗೆ ಮತ್ತೆ ಕಾರ್ಯಕಾರಣಬುದ್ಧಿಯು ಉಳಿಯುವದಿಲ್ಲವಾದ್ದರಿಂದ ಪುರುಷನ ತೋರಿಕೆಯಾದ ಈ ವಿಶ್ವವು ಪುರುಷನೆಂದೇ ನಿಶ್ಚಯವುಂಟಾಗುತ್ತದೆ. ಆದರೂ ಅಜ್ಞರ ಸಮಾಧಾನಕ್ಕಾಗಿ ಪೃಥಿವ್ಯಾದಿಗಳ ರಸದಿಂದ ಬ್ರಹ್ಮಾಂಡವಾಗಿದೆ, ಆ ಬ್ರಹ್ಮಾಂಡವು ಪುರುಷನಿಗಿಂತ ವಿಲಕ್ಷಣವಾಗಿದೆ- ಎಂದು ಇಲ್ಲಿ ಹೇಳಿರುತ್ತದೆ. ನಿಜವಾಗಿ ಬ್ರಹ್ಮಾಂಡವು ಪುರುಷನಿಗಿಂತ ಎಂದಿಗೂ ಬೇರೆಯಾಗಿಲ್ಲ. ಬ್ರಹ್ಮಾಂಡವು ತೋರಿದ್ದರಿಂದ ಪುರುಷನನ್ನು ಗುರುತಿಸಲು ಸಹಾಯವಾಯಿತೆಂದು ಹೇಳಬಹುದಾಗಿದೆ. ಈ ಅಭಿಪ್ರಾಯವನ್ನೇ ಮೇಲಿನ ಮಂತ್ರದಲ್ಲಿ ತಿಳಿಸಿದೆ.

ಈಗ ಮುಂದಿನ ಮಂತ್ರಗಳನ್ನು ನೋಡೋಣ. ಅವು ಹೀಗಿವೆ :

ವೇದಾಹಮೇತಂ ಪುರುಷಂ ಮಹಾಂತಮ್ ।
ಆದಿತ್ಯವರ್ಣಂ ತಮಸಃ ಪರಸ್ತಾತ್ ॥
ತಮೇವಂ ವಿದ್ವಾನಮೃತ ಇಹ ಭವತಿ ।
ನಾನ್ಯಃ ಪಂಥಾ ವಿದ್ಯತೇಽಯನಾಯ ॥ ೨ ॥
ಪ್ರಜಾಪತಿಶ್ಚರತಿ ಗರ್ಭೇ ಅಂತಃ ।
ಅಜಾಯಮಾನೋ ಬಹುಧಾ ವಿಜಾಯತೇ ॥
ತಸ್ಯ ಧೀರಾಃ ಪರಿಜಾನಂತಿ ಯೋನಿಮ್ ।
ಮರೀಚೀನಾಂ ಪದಮಿಚ್ಛಂತಿ ವೇಧಸಃ ॥ ೩ ॥

"ಈ ಹಿರಿಯನಾದ, ಸೂರ್ಯನಂತೆ ಕಾಂತಿಯುಳ್ಳ, ಕತ್ತಲೆಯ ಆಚೆಗಿರುವ ಪುರುಷನನ್ನು ನಾನು ಬಲ್ಲೆನು. ಅವನನ್ನು ಹೀಗೆ ಅರಿತುಕೊಂಡವನು ಇಲ್ಲಿಯೇ ಅಮೃತನಾಗುವನು ; ಇದಕ್ಕಿಂತ ಮುಕ್ತಿಗೆ ಬೇರೊಂದು ದಾರಿಯಿರುವದಿಲ್ಲ."

"ಪ್ರಜೆಗಳ ಒಡೆಯನಾದ ಆ ಪರಮಾತ್ಮನು ಶರೀರದೊಳಗೆಲ್ಲ ಅಂತರ್ಯಾಮಿಯಾಗಿದ್ದು ಸಂಚರಿಸುವನು. ತಾನು ನಿಜವಾಗಿ ಹುಟ್ಟಿಲ್ಲದವನಾದರೂ ನಾನಾರೂಪವಾಗಿ (ಮಾಯೆಯಿಂದ) ಹುಟ್ಟುವನು. ಅವನ

ಮೂಲತತ್ತ್ವವನ್ನು ಧೀರರು ಅರಿತುಕೊಂಡಿರುವರು. ಅಂಥ ವಿಜ್ಞಾನಿಗಳೇ ಮರೀಚ್ಯಾದಿ ಸೃಷ್ಟಿಕರ್ತರಾದ ಬ್ರಹ್ಮರುಗಳ ಸ್ಥಾನವನ್ನು ಬಯಸುತ್ತಾರೆ.'

ಈ ಮೇಲಿನ ಎರಡು ಮಂತ್ರಗಳಲ್ಲಿ 'ವೇದಾಹಮ್' ಎಂಬಿದನ್ನು ಈಗಾಗಲೇ ವಿವರಣೆಮಾಡಿದ್ದಾಗಿದೆ. ಮೂಲದಲ್ಲಿ ಪಾಠಕ್ರಮದಲ್ಲಿರುವ ಒಂದೆರಡು ಶಬ್ದವ್ಯತ್ಯಾಸಗಳನ್ನು ಬಿಟ್ಟರೆ ಅರ್ಥದಲ್ಲೇನೂ ಹೆಚ್ಚುಕಡಿಮೆ ಯಿರುವದಿಲ್ಲ. ಮತ್ತೊಮ್ಮೆ ಹೇಳಿರುವದು ಪರಬ್ರಹ್ಮದ ವಿಜ್ಞಾನವೊಂದು ಹೊರತು ಮುಕ್ತಿಗೆ ಬೇರೆ ಹಾದಿಯಿರುವದಿಲ್ಲವೆಂಬುದನ್ನು ದೃಢಗೊಳಿಸು ವದಕ್ಕಾಗಿ– ಎಂದು ತಿಳಿಯಬೇಕು. ಇದರಿಂದ ಸಿದ್ಧವಾಗುವದೇನೆಂದರೆ : ವೇದದಲ್ಲಿ ಕರ್ಮ– ಜ್ಞಾನಗಳೆಂಬ ಎರಡು ಸಾಧನಗಳನ್ನು ಮಣಿಸಿದ್ದರೂ ಜ್ಞಾನದಲ್ಲಿಯೇ ವೇದಕ್ಕೆ ತಾತ್ಪರ್ಯವೆಂದೂ ಜ್ಞಾನದಿಂದಲೇ ಮೋಕ್ಷವೆಂಬ ಪಕ್ಷವೇ ವೇದಸಂಮತವೆಂದೂ ತಿಳಿದುಬರುತ್ತದೆ. ಕರ್ಮವು ಕೂಡ ಯಜ್ಞ ವಾಗಿ ಪರಿಣಮಿಸಿ ಆ ಯಜ್ಞವು ವಿರಾಡಾತ್ಮನ ಅವಯವಗಳಲ್ಲಿ ಲಯವಾಗಿ ಅನಂತರ ಸಮಷ್ಟಿಯಾದ ಆ ಸ್ವರೂಪವು ನಾಮರೂಪಗಳನ್ನು ಕಳಚಿ ಕೊಂಡಾಗ ತಾನೇತಾನಾದ ಸಚ್ಚಿದಾನಂದವಸ್ತುವೇ ಆಗಿರುವದು. ಅದರ ಅರಿವೇ ಪರಮಪುರುಷಾರ್ಥವೆಂದು ಕೊನೆಗೊಳ್ಳುತ್ತದೆ. 'ಸರ್ವಕರ್ಮಗಳೂ ಜ್ಞಾನದಲ್ಲಿ ಪರಿಸಮಾಪ್ತವಾಗುತ್ತವೆ'– ಎಂಬ ಗೀತಾವಾಕ್ಯವೂ ಇದನ್ನೇ ಹೇಳುತ್ತಿದೆ.

ಈಗ 'ಪ್ರಜಾಪತಿಃ' ಎಂಬ ಮಂತ್ರದ ಅರ್ಥವನ್ನು ವಿಚಾರಮಾಡೋಣ. ಪರಮಾತ್ಮನು ಸರ್ವಾಂತರ್ಯಾಮಿಯಾಗಿರುತ್ತಾನೆ–ಎಂದು ಇಲ್ಲಿ ತಿಳಿಸಿದೆ. ಪ್ರಪಂಚದ ಗರ್ಭವೆಂದರೆ ಸಾರವು. ಅದು ಪ್ರಜಾಪತಿಯೇ ಆಗಿದೆ. ಆ ಪ್ರಜಾಪತಿಯೆಂಬುವನು ಪರಮಾತ್ಮನೇ ಆಗಿರುವನು. ಆತನಿಗೆ ನಿಜವಾಗಿ ಹುಟ್ಟುವಿಕೆಯಿರುವದಿಲ್ಲ. ಆದರೂ ಪ್ರಪಂಚವಾಗಿ ಹುಟ್ಟಿದ್ದು ಹೇಗೆ ? ಎಂದರೆ : ಒಂದೇ ವಸ್ತುವು ಅಜವೂ ಜಾಯಮಾನವೂ ಆಗಿದೆ– ಎಂಬಿದು ಅನುಭವವಿರುದ್ಧವು. ಆದ್ದರಿಂದ ಅಜನಾದ ಭಗವಂತನು ಪ್ರಪಂಚವಾಗಿ ಹುಟ್ಟಿದಂತೆ ತೋರುತ್ತಾನೆ–ಎಂಬಿದೇ ತತ್ತ್ವವು. ಹುಟ್ಟೆಂಬುದು ಅಜ್ಞರು ಭಗವತ್ಸ್ವರೂಪದಲ್ಲಿ ಕಲ್ಪಿಸಿರುವ ಭ್ರಾಂತಿಯು. ಅದು ಎಂದಿಗೂ ಬ್ರಹ್ಮದ ಧರ್ಮವಲ್ಲ. ಭ್ರಾಂತರಾದವರಿಗೆ ಕಂಡುಬರುವ ತೋರಿಕೆಯು ಪರಮಾರ್ಥ

ವಲ್ಲ. ಇದನ್ನೇ ಗೌಡಪಾದರು ತಮ್ಮ ಕಾರಿಕೆಯಲ್ಲಿ "ಅಜಾಯಮಾನೋ ಬಹುಧಾ ಮಾಯಯಾ ಜಾಯತೇ ತು ಸಃ" ಎಂದು ವರ್ಣಿಸಿದ್ದಾರೆ. ಅವರ ಅಭಿಪ್ರಾಯದಂತೆ ಜಾತಿ ಎಂದರೆ ಹುಟ್ಟೇ ಇರುವದಿಲ್ಲ. ಅಜಾತಿವಾದವೇ ಸಿದ್ಧಾಂತವೆಂದು ಅವರು ಈ ಶ್ರುತಿಯನ್ನು ಆಧಾರವಾಗಿಟ್ಟುಕೊಂಡೇ ಸಾರಿರುತ್ತಾರೆ. ಹಾಗಿಲ್ಲವಾದರೆ ಈ ಶ್ರುತಿಯು ಹೊಂದುವದಿಲ್ಲ. ನಿಜವಾಗಿಯೂ ಪ್ರಪಂಚವು ಹುಟ್ಟಿದ್ದರೆ, ಅದು ಭಗವಂತನ ಅಂಶವೇ ಆಗಿದ್ದರೆ ಅವನೇ ಹುಟ್ಟಿದಂತಾಗಿ ಅಜನೆಂಬಂಬುದು ಬಾಧಿತವಾಗುವದು. ಅದರ ಬದಲು ಭಗವಂತನು ಅಜನೆಂಬುದೇ ಶ್ರುತಿಯ ತಾತ್ಪರ್ಯವೆಂದು ಕಲ್ಪಿಸಿದರೆ ಜಾಯತೇ ಎಂಬುದನ್ನು 'ಮಾಯೆಯಿಂದ' ಎಂದು ಹೊಂದಿಸಲು ಸಾಧ್ಯವಾಗುವದು. ಆದ್ದರಿಂದ ಭಗವಂತನ ಮಹಿಮೆಯನ್ನು ಎಂದರೆ ಮಾಯೆಯಿಂದ ಹುಟ್ಟು-ವಿಕೆಯನ್ನು ಧೀರರು ಸರಿಯಾಗಿ ನಿಶ್ಚಯಿಸಿಕೊಂಡಿರುತ್ತಾರೆ. ಭಗವದ್ಗೀತೆಯಲ್ಲಿಯೂ "ಅಜೋಽಪಿ....ಮಾಯಯಾ" ಎಂದೇ ಇದೆ. ಹೀಗೆ ಈ ಮಂತ್ರವು ವೇದಾಂತಸಿದ್ಧಾಂತದ ಮುಖ್ಯಪ್ರಮೇಯವೊಂದನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತಿರುವದು.

ಇನ್ನು ಮರೀಚಿಯೇ ಮುಂತಾದ ನವಬ್ರಹ್ಮರುಗಳು ಸೃಷ್ಟಿಯ ಆದಿಯಲ್ಲಿ ಚತುರ್ಮುಖನಿಗೆ ಸಹಾಯಕರಾಗಿ ಸೃಷ್ಟಿಯನ್ನು ಮುಂದುವರಿಸಿದರೆಂತ ಪುರಾಣಗಳಲ್ಲಿ ವರ್ಣಿತವಾಗಿದೆ. ಇಂಥ ಮರೀಚ್ಯಾದಿಗಳ ಸ್ಥಾನವು ದೊರಕಬೇಕಾದರೆ ಪರಮಾತ್ಮನ ಮಹಿಮೆಯ ದಿವ್ಯವಾದ ಅರಿವು ಬೇಕು. ಅಂಥ ಅರಿವುಳ್ಳವರೇ ಮುಂದಕ್ಕೆ ಮರೀಚ್ಯಾದಿಗಳ ಪದವಿಯನ್ನಲಂಕರಿಸುವವರು. ಹೀಗೆ ಭಗವನ್ಮಹಿಮೆಯನ್ನು ಕಂಡುಕೊಂಡ ಧೀರರು ಅಮೃತರಾಗಿ ಅನಂತರ ಭಗವದನುಗ್ರಹದಿಂದ ಅಧಿಕಾರಿಕಪುರುಷರಾಗಿಯೂ ನಿಯುಕ್ತರಾಗಿ ದೇವತೆಗಳೆನಿಸಿ ಭಗವಂತನ ಸೃಷ್ಟಿಕಾರ್ಯದಲ್ಲಿ ಭಾಗವಹಿಸುವರೆಂದೂ ಇಲ್ಲಿ ತಿಳಿಸಿದೆ.

# ೧೫. ನಮೋ ರುಚಾಯ ಬ್ರಾಹ್ಮಯೇ

ಪುರುಷಸೂಕ್ತಮಂತ್ರಗಳ ವಿವರಣಸಂದರ್ಭದಲ್ಲಿ ಉತ್ತರನಾರಾಯಣದ ಕಡೆಯ ಕೆಲವು ಮಂತ್ರಗಳನ್ನು ಈಗ ವಿಚಾರಮಾಡಬೇಕಾಗಿದೆ. ಒಂದು ಮಂತ್ರವು ಹೀಗಿದೆ :

**ಯೋ ದೇವೇಭ್ಯ ಆತಪತಿ ।**
**ಯೋ ದೇವಾನಾಂ ಪುರೋಹಿತಃ ।**
**ಪೂರ್ವೋ ಯೋ ದೇವೇಭ್ಯೋ ಜಾತಃ ।**
**ನಮೋ ರುಚಾಯ ಬ್ರಾಹ್ಮಯೇ ॥**

"ಯಾವನು ದೇವತೆಗಳ ಹೃದಯವನ್ನು ಹೊಕ್ಕು ಬೆಳಗುತ್ತಿರುವನೋ, ದೇವತೆಗಳ ಪುರೋಹಿತನಾಗಿರುವನೋ ದೇವತೆಗಳಿಗಿಂತಲೂ ಮುಂಚೆಯೇ ಆವಿರ್ಭೂತನಾಗಿರುವನೋ ಅಂಥ ಬ್ರಹ್ಮತೇಜೋರೂಪನಾದವನಿಗೆ ನಮಸ್ಕಾರವು."

ಈ ಮಂತ್ರದಲ್ಲಿ ಮತ್ತೊಮ್ಮೆ ಭಗವತ್ಸ್ವರೂಪವನ್ನು ಸ್ತುತಿಸಲಾಗಿದೆ. ಆತಪತಿ ಎಂದರೆ ಸುತ್ತಲೂ ಪ್ರಕಾಶಿಸುತ್ತಿರುವವನು–ಎಂದರ್ಥ. ಪ್ರಕಾಶವೆಂಬುದು ದೇವತೆಗಳ ಧರ್ಮವಾದರೂ ಆದು ಬಿಸಿನೀರಿಗೆ ಬಿಸಿಯು ಬೆಂಕಿಯಿಂದ ಬಂದಂತೆ ಭಗವಂತನಿಂದಲೇ ದೇವತೆಗಳಿಗೂ ತೇಜಸ್ಸು ಬಂದಿರುತ್ತದೆ. ನಿಜವಾದ ತೇಜಸ್ಸು ಭಗವಂತನೊಬ್ಬನಲ್ಲಿ ಮಾತ್ರವೇ ಸ್ವರೂಪಭೂತವಾಗಿ ಅನಪಾಯಿಯಾಗಿ ನಿತ್ಯವಾಗಿರುತ್ತದೆ. ಈ ತೇಜಸ್ಸು ಕ್ರಿಯಾರೂಪವಾಗಿಯೂ ಜ್ಞಾನರೂಪವಾಗಿಯೂ ಹೊರತೋರಿಕೊಂಡು ಬ್ರಹ್ಮಾದಿದೇವತೆಗಳನ್ನು ಹೊಕ್ಕಿರುವದು. ಇದರಿಂದಲೇ ದೇವತೆಗಳು ತೇಜೋಮಯರೆನಿಸಿರುತ್ತಾರೆ. ಸೂರ್ಯಚಂದ್ರಾದಿಗಳ ತೇಜಸ್ಸು ಕೂಡ ಭಗವಂತನದೇ ಆಗಿದೆ. 'ಪ್ರಭಾಸ್ಮಿ ಶಶಿಸೂರ್ಯಯೋಃ' ಎಂದು ಗೀತೆಯಲ್ಲಿ ಹೇಳಿರುವದೂ 'ನ ತತ್ರ ಸೂರ್ಯೋ ಭಾತಿ' ಎಂದು ಉಪನಿಷತ್ತಿನಲ್ಲಿ ತಿಳಿಸಿರುವದೂ ಇದಕ್ಕೆ ಪ್ರಮಾಣವು. ಹೀಗೆ ಪರಮಾತ್ಮನು ದೇವತೆಗಳ ತೇಜಸ್ಸಾಗಿರುವದರ ಜೊತೆಗೆ ದೇವಪುರೋಹಿತನೂ ಆಗಿರುತ್ತಾನೆ. ಪುರೋಹಿತನೆಂದರೆ ಅಗ್ರಗಾಮಿಯು, ಮುಂದಿರುವವನು ಹಾಗೂ ಉಳಿದವರ ಹಿತವನ್ನು ಕೋರುವವನು

ಎಂದರ್ಥ. ದೇವಪುರೋಹಿತರನ್ನು ಬೃಹಸ್ಪತಿಯೆಂದು ಹೆಸರಿಸುತ್ತಾರೆ. ಇನ್ನೊಂದು ಅರ್ಥದಲ್ಲಿ ಮನುಷ್ಯರಿಗೂ ದೇವತೆಗಳಿಗೂ ಸಂಬಂಧವನ್ನು ಕಲ್ಪಿಸುವವನೇ ಪುರೋಹಿತನು-ಎಂದೂ ಆಗಬಹುದು. ಆಗ ಅಗ್ನಿಯು ಪುರೋಹಿತನಾಗುತ್ತಾನೆ. ವೇದದಲ್ಲಿ 'ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್' (ಯಜ್ಞದೇವನೂ ಋತ್ವಿಜನೂ ಪುರೋಹಿತನೂ ಆದ ಅಗ್ನಿಯನ್ನು ಸ್ತುತಿಸುತ್ತೇನೆ) ಎಂದೇ ಹೊಗಳಿರುತ್ತದೆ. ಅತ್ತೀತಿ ಅಗ್ನಿಃ ಎಂಬ ವ್ಯುತ್ಪತ್ತಿಯಂತೆ ಸಕಲಜಗದತ್ತೃವಾದ ಪರಬ್ರಹ್ಮವು ಅಗ್ನಿಶಬ್ದ ವಾಚ್ಯವಾಗಿದೆ. 'ಯಸ್ಯ ಬ್ರಹ್ಮ ಚ ಕ್ಷತ್ರಂ ಚ....' ಎಂಬ ಮಂತ್ರವು ಪರಮಾತ್ಮನೇ ಅತ್ತೃ-ಎಂದು ಘೋಷಿಸುವದು. ಹೀಗೆ ಅಗ್ನಿಯೂ ಪುರೋಹಿತನೂ ಆಗಿರುವ ಭಗವಂತನು ಎಲ್ಲರಿಗಿಂತ ಮೊದಲು ಇದ್ದುಕೊಂಡಿರುತ್ತಾನೆ. ಆದ್ದರಿಂದ ಅವನು ದೇವತೆಗಳಿಗಿಂತ ಮೊದಲೇ ಹುಟ್ಟಿರುತ್ತಾನೆಂದು ಇಲ್ಲಿ ತಿಳಿಸಿದೆ. ಇಂಥ ಬ್ರಹ್ಮಪ್ರಕಾಶಕ್ಕೆ ನಮಸ್ಕಾರ-ಎಂಬಿದು ಈ ಮಂತ್ರದ ಅಭಿಪ್ರಾಯವಾಗಿದೆ.

ಈಗ ಮುಂದಿನ ಮಂತ್ರವನ್ನು ವಿಚಾರಮಾಡೋಣ :

**ರುಚಂ ಬ್ರಾಹ್ಮಂ ಜನಯನ್ತಃ ।**
**ದೇವಾ ಅಗ್ರೇ ತದಬ್ರುವನ್ ।**
**ಯಸ್ತ್ವೈವಂ ಬ್ರಾಹ್ಮಣೋ ವಿದ್ಯಾತ್ ।**
**ತಸ್ಯ ದೇವಾ ಅಸನ್ ವಶೇ ॥**

"ಬ್ರಹ್ಮದ ಪ್ರಕಾಶವನ್ನು ತಮ್ಮಲ್ಲಿ ಉಂಟುಮಾಡಿಕೊಂಡ ದೇವತೆಗಳು ಮೊದಲಬಾರಿಗೆ ಹೇಳಿದ್ದೇನೆಂದರೆ : ಯಾವ ಬ್ರಾಹ್ಮಣನು ಹೀಗೆ ಬ್ರಹ್ಮವನ್ನು ಅರಿತುಕೊಳ್ಳುವನೋ ಅವನ ಆಧೀನರಾಗಿ ದೇವತೆಗಳೆಲ್ಲರೂ ಇರುವರು."

ಈ ಮಂತ್ರದಲ್ಲಿ ಬ್ರಹ್ಮವನ್ನು ಬಲ್ಲವರ ಮಹಿಮೆಯನ್ನು ಹೊಗಳಿದೆ. ಜಗತ್ತೆಲ್ಲವೂ ದೇವತೆಗಳ ಅಧೀನವಾಗಿರುವದು. ಮನುಷ್ಯನು ತನ್ನದೆಂತ ಬರಿಯ ಜಂಭಕೊಚ್ಚುವದು ಮಾತ್ರವೇ ಆಗಿದೆ. ಏಕೆಂದರೆ ಇಲ್ಲಿರುವ ಜೀವಿಗಳಿಗೆಲ್ಲ ಅಗತ್ಯವಾದ ಗಾಳಿ, ನೀರು, ಸ್ಥಳ, ಆಹಾರಾದಿಗಳು, ಶಾಖ-ಎಲ್ಲವನ್ನೂ ಒದಗಿಸುವವರು ದೇವತೆಗಳೇ ಆಗಿದ್ದಾರೆ. ಇಂಥ ದೇವತೆಗಳೆಲ್ಲ

ಮಂತ್ರಾಧೀನರಾಗಿದ್ದಾರೆ. ಆ ಮಂತ್ರಗಳಾದರೋ ಬ್ರಾಹ್ಮಣನಿಗೆ ಅಧೀನವಾಗಿವೆ. ಹೀಗೆ ಬ್ರಾಹ್ಮಣನ ವಶದಲ್ಲಿ ದೇವತೆಗಳಿರುತ್ತಾರೆ- ಎಂದು ಬ್ರಾಹ್ಮಣ್ಯವನ್ನು ಒಂದು ಕಡೆ ಸ್ತುತಿಸಿದೆ. ಆದರೆ ಈ ಬ್ರಾಹ್ಮಣ್ಯವು ಸುಲಭವಾಗಿ ದಕ್ಕುವದಲ್ಲ. ಬ್ರಾಹ್ಮಣಜಾತಿಯಲ್ಲಿ ಹುಟ್ಟಿದರೂ, ವೇದಶಾಸ್ತ್ರಗಳನ್ನು ಕಲಿತಿದ್ದರೂ ವೈದಿಕಕರ್ಮಗಳನ್ನು ಅನುಷ್ಠಾನಮಾಡಿದ್ದರೂ ಪೂರ್ಣವಾದ ಬ್ರಾಹ್ಮಣ್ಯವು ಸಿದ್ಧಿಸುವದಿಲ್ಲ. ಅವೆಲ್ಲ ಈ ನಿಜವಾದ ಬ್ರಾಹ್ಮಣ್ಯವನ್ನು ತಲುಪಲು ಸಾಧನಗಳು ಮಾತ್ರವೇ ಆಗಿವೆ. ನಿಜವಾದ ಬ್ರಾಹ್ಮಣನೆನಿಸುವದು 'ಪರಬ್ರಹ್ಮವು ತನ್ನ ಆತ್ಮನೇ, ಆತ್ಮನಾಗಿಯೇ ಇದೆಲ್ಲವೂ ಇದ್ದುಕೊಂಡಿದೆ. ಅದೊಂದೇ ಪರಮಾರ್ಥಸತ್ಯವು'-ಎಂಬ ಅನುಭವಪರ್ಯಂತವಾದ ಜ್ಞಾನವು ಬಂದಾಗ ಮಾತ್ರವೇ-ಎಂದು ತಿಳಿಯಬೇಕು. ಆಗಲೇ ದೇವತೆಗಳೆಲ್ಲರೂ ಇವನಿಗೆ ವಶರಾಗುವರು. ಅಗಸ್ತ್ಯರು, ವಸಿಷ್ಠರು, ಯಾಜ್ಞವಲ್ಕ್ಯರು-ಮುಂತಾದವರೇ ಇಲ್ಲಿ ಉದಾಹರಣೆಯಾಗಿರುವರು. ಪರಬ್ರಹ್ಮವನ್ನು ದೇವತೆಗಳಿಗೆಲ್ಲ ಶಕ್ತಿಪ್ರದವೆಂದೂ ಅವರುಗಳಿಗೆ ಅಗ್ರಗಾಮಿಯೆಂದೂ ಯಾವನು ತಿಳಿಯುವನೋ ಅವನು ಬ್ರಹ್ಮತೇಜಸ್ಸಂಪನ್ನನಾದ ಬ್ರಾಹ್ಮಣನಾಗುವನು-ಎಂದು ಈ ಮಂತ್ರದಲ್ಲಿ ಹೇಳಿರುವದರಿಂದ ಬ್ರಾಹ್ಮಣರೆನಿಸಿಕೊಂಡಿರುವವರು ನಿಜವಾಗಿಯೂ ಆ ಪರಂಪರಾಗತವಾದ ಸೌಭಾಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಮನಸ್ಸಿದ್ದರೆ ಮೊಟ್ಟಮೊದಲು ಅಧ್ಯಾತ್ಮವಿದ್ಯೆಗಾಗಿಯೇ ತಮ್ಮ ಜೀವನವನ್ನು ತೊಡಗಿಸಬೇಕು. ಅನಂತರ ಅದಕ್ಕೆ ಅವಿರುದ್ಧವಾಗಿರುವಂತೆ ಲೌಕಿಕಜೀವನವನ್ನೂ ರೂಪಿಸಿಕೊಳ್ಳಬೇಕು. ಆಗ ಯಾರೂ ಇವರನ್ನು ಸರಿಗಟ್ಟಲಾರರು. ಹೇಗೆ ಬಲದಲ್ಲಿ ಭೀಮನನ್ನು ಕೌರವರಲ್ಲಿ ಯಾರೊಬ್ಬರೂ ಸರಿಗಟ್ಟಲಾರದೆಹೋದರೋ, ಆ ಕಾಲಕ್ಕೆ ಅತ್ಯಂತ ಬಲಶಾಲಿಗಳೆನಿಸಿದ್ದ ಯಾರೊಬ್ಬರೂ ಭೀಮನನ್ನು ಮೀರಿಸಲಾರದಾದರೋ ಹಾಗೆ ಬ್ರಹ್ಮತೇಜಸ್ವಿಯನ್ನು ಯಾರೂ ಹಿಮ್ಮೆಟ್ಟಿಸಲಾರರು-ಎಂದು ತಿಳಿಯಬೇಕು.

ಈಗ ಕಡೆಯ ಮಂತ್ರದ ಹಿಂದಿನ ಮಂತ್ರವನ್ನು ವಿಚಾರಮಾಡೋಣ.

**ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ । ಅಹೋರಾತ್ರೇ ಪಾರ್ಶ್ವೇ ।**
**ನಕ್ಷತ್ರಾಣಿ ರೂಪಮ್ । ಅಶ್ವಿನೌ ವ್ಯಾತ್ತಮ್ ॥**

**“ಆ ನಾರಾಯಣನಿಗೆ ಭೂದೇವಿ-ಲಕ್ಷ್ಮೀದೇವಿಯರು ಪತ್ನಿಯರು ; ಹಗಲುರಾತ್ರಿಗಳೇ ಎರಡು ಪಕ್ಷಗಳಾಗಿರುವವು. ಅವನ ರೂಪವು ನಕ್ಷತ್ರಗಳಂತೆ ಸುಂದರವಾಗಿರುವವು. ಮುಖವು ಅಶ್ವಿನೀದೇವತೆಗಳಂತೆ ರಮಣೀಯವಾಗಿರುವದು.’’**

ಈ ಮಂತ್ರದಲ್ಲಿ ಸಗುಣವಾದ ಬ್ರಹ್ಮವನ್ನು ಮತ್ತೆ ವರ್ಣಿಸಲಾಗಿದೆ. ವೇದಾಂತಸಿದ್ಧಾಂತದಂತೆ ಬ್ರಹ್ಮವು ಸಗುಣವಾಗಿ ಇಚ್ಛಾವಶದಿಂದ ಲೋಕಾನುಗ್ರಹಕ್ಕಾಗಿ ತೋರಿಕೊಳ್ಳಬಹುದು. ಆಗ ಅದಕ್ಕೆ, ಶರೀರ, ಆಕಾರಾದಿಗಳ ಕಲ್ಪನೆಯೂ ಹೊಂದುತ್ತದೆ. ಹೇಗೆ ವಿದ್ಯುಚ್ಛಕ್ತಿಯನ್ನು ಬಲ್ಬುಗಳಮೂಲಕ ಹರಿಯಿಸುವಾಗ ಆ ಬಲ್ಬುಗಳನ್ನು ಅಕ್ಷರಗಳ ಆಕಾರದಲ್ಲಿ ಜೋಡಿಸಿ ‘ಸುಸ್ವಾಗತ, ಸುಖಾಗಮನ’ ಮುಂತಾಗಿ ಓದುತ್ತಾರೋ ವಿದ್ಯುಚ್ಛಕ್ತಿಯೇನೂ ಈ ಆಕಾರವಿಶೇಷಗಳಿಂದಾಗಲೀ ವ್ಯವಹಾರದಿಂದಾಗಲೀ ತಾನು ವಿಕಾರವಾಗುವದಿಲ್ಲವೋ ಹಾಗೆಯೇ ನಿರ್ವಿಶೇಷಪರಬ್ರಹ್ಮವೂ ಜಗದ್ವ್ಯವಹಾರದಿಂದ ತಾನು ವಿಕಾರವಾಗುವದಿಲ್ಲ. ಆದರೆ ಬ್ರಹ್ಮವನ್ನು ಜನಸಾಮಾನ್ಯರು ಅರಿತುಕೊಳ್ಳಲು ಈ ಕಲ್ಪನೆಯು ಸಹಾಯಕವಾಗುವದಂತೂ ನಿಜ. ಈ ಅಭಿಪ್ರಾಯದಲ್ಲಿ ನಾರಾಯಣನಾಮಧೇಯನಾದ ಪರಮಾತ್ಮನನ್ನು ಕುರಿತು ಇಲ್ಲಿ ಸ್ತೋತ್ರಮಾಡಿದೆ. ನಾರಾಯಣಭಗವಂತನು ಗೃಹಸ್ಥನೆಂದೂ ಕಲ್ಪಿಸಲಾಗಿದೆ. ಮಾನವನ ಕಲ್ಪನೆಗಳಿಗೆ ಸಿಕ್ಕಿ ದೇವರು ಗಂಡು, ಹೆಣ್ಣು, ಗೃಹಸ್ಥ, ಬ್ರಹ್ಮಚಾರಿ, ವಿಧುರ, ಸಂನ್ಯಾಸಿ, ಯೋಗಿ– ಮುಂತಾಗಿ ಎಲ್ಲವೂ ಆಗುವನು. ಅವುಗಳಲ್ಲಿ ಗೃಹಸ್ಥಧರ್ಮವೇ ಲೋಕಕಲ್ಯಾಣಕ್ಕೂ ಜಗತ್ತಿನ ಪೋಷಣೆಗೂ ಹೆಚ್ಚು ಸಮರ್ಥವಾಗಿರುವದರಿಂದ ಭಗವಂತನನ್ನು ಗೃಹಸ್ಥನನ್ನಾಗಿ ಭಾವಿಸಿ ಪೂಜಿಸುವದು ವಾಡಿಕೆಯಾಗಿದೆ. ಲಕ್ಷ್ಮೀನಾರಾಯಣ, ಉಮಾಮಹೇಶ್ವರ, ಶಚೀಪುರಂದರ, ವಾಣೀಹಿರಣ್ಯಗರ್ಭ, ಸೀತಾರಾಮ, ರಾಧಾಕೃಷ್ಣ– ಇತ್ಯಾದಿ ದೇವರುಗಳೆಲ್ಲ ಗೃಹಸ್ಥರೇ. ಇಲ್ಲಿ ನಾರಾಯಣನಿಗೆ ಇಬ್ಬರು ಪತ್ನಿಯರನ್ನು ಹೆಸರಿಸಿದೆ. ಲಕ್ಷ್ಮಿಯೇ ಒಬ್ಬಳು. ಆಕೆಯ ಜೊತೆಗೂಡಿ ಹೆಸರಿಸಿರುವದರಿಂದ ಹ್ರೀಃ ಎಂದರೆ ಭೂದೇವಿಯು. ಪೂಜಾದಿಗಳನ್ನೂ ಸೇವೆಯನ್ನೂ ಮಾಡುವಾಗ ಲಕ್ಷ್ಮೀಸಮೇತನಾದ ನಾರಾಯಣನಿಗೇ ಮಾಡಬೇಕೆಂತ ಶಾಸ್ತ್ರವಿದೆ. ದೇವರನ್ನು ಮನುಷ್ಯರ ರೂಪದಲ್ಲಿ ಪೂಜಿಸುವಾಗಲೂ ದಂಪತಿಗಳನ್ನೇ ಪೂಜಿಸುತ್ತೇವೆ. ಪತ್ನೀ

ರಹಿತನಾದವನಿಗೆ ಈಗಲೂ ವೈದಿಕಕರ್ಮಗಳಲ್ಲಿ ಅನಧಿಕಾರವೇ ಕಂಡು ಬರುತ್ತದೆ. ಇರಲಿ. ಭಗವಂತನ ಪತ್ನಿಯಾದ ಲಕ್ಷ್ಮಿಯು ನಾನಾರೂಪಳು. ಸಿದ್ಧಲಕ್ಷ್ಮಿ, ಜಯಲಕ್ಷ್ಮಿ, ವರಲಕ್ಷ್ಮಿ- ಎಂದೆಲ್ಲ ಅಷ್ಟಲಕ್ಷ್ಮಿಯರೆಂದು ಪುರಾಣಗಳಲ್ಲಿಯೂ ಸ್ತೋತ್ರಗಳಲ್ಲಿಯೂ ತಿಳಿಸಿದೆ. ಇಂಥ ಅನೇಕ ರೂಪಳಾದ ಲಕ್ಷ್ಮಿಯು ನಾರಾಯಣನಲ್ಲಿ ಮಾತ್ರ ಅನಪಾಯಿನಿಯಾಗಿದ್ದಾಳೆ-ಎಂದರೆ ಸ್ಥಿರವಾಗಿದ್ದಾಳೆ. ಹಾಗೆಯೇ ಭೂದೇವಿಯೂ ಭಗವಂತನನ್ನೇ ಆಶ್ರಯಿಸಿ ಆತನ ಮತ್ತೊಬ್ಬ ಪತ್ನಿಯಾಗಿದ್ದಾಳೆ. ಇಬ್ಬರು ಪತ್ನಿಯರೂ ಭಗವಂತನ ಶಕ್ತಿರೂಪರೇ ಆಗಿರುವದರಿಂದ ಅವನನ್ನು ಬಿಟ್ಟು ಅಗಲುವಂತೆಯೇ ಇಲ್ಲ. ಇಂಥ ನಾರಾಯಣನು ಅಹೋರಾತ್ರಿಗಳೆಂಬ ಪಾರ್ಶ್ವಗಳು ಉಳ್ಳವನು. ಈ ಎರಡು ಶಬ್ದಗಳು ಸತ್ತ್ವಗುಣ, ತಮೋಗುಣಗಳನ್ನು ಸೂಚಿಸುವವು. ರಜಸ್ಸನ್ನು ತಮಸ್ಸಿನಲ್ಲಿಯೇ ಸೇರಿಸಿಕೊಂಡಲ್ಲಿ ಆ ನಾರಾಯಣನು ಸ್ವತಃ ನಿರ್ವಿಶೇಷಪರಬ್ರಹ್ಮವಾಗಿದ್ದರೂ ಪ್ರಪಂಚದ ದೃಷ್ಟಿಯಿಂದ ಸ್ಥಿತಿಕರ್ತನೂ ಲಯಕರ್ತನೂ. ಹಾಗೆಯೇ ಸೃಷ್ಟಿಕರ್ತನೂ ಆಗಿ ಅಪರಿಮಿತವಾದ ಶಕ್ತಿ ಸಂಪನ್ನನಾಗಿರುವನೆಂದು ತಿಳಿಯಬರುತ್ತದೆ. ಮತ್ತು ಅಹಸ್ಸೆಂಬುದರಿಂದ ಭಗವಂತನ ಸಾತ್ತ್ವಿಕರೂಪವನ್ನೂ ರಾತ್ರಿಯೆಂಬುದರಿಂದ ತಾಮಸರೂಪ ವನ್ನೂ ಗ್ರಹಿಸಿದರೆ ಎಲ್ಲಾ ಪ್ರಾಣಿಗಳೂ ಭೂತಗಳೂ ಅವನೇ ಆಗಿರುವ ನೆಂದೂ ಅರ್ಥಮಾಡಬಹುದು. ಹಾಗೆಯೇ ಭಗವಂತನ ರೂಪವು ಉಪಾ ಸಕರ ದೃಷ್ಟಿಯಿಂದ ನಕ್ಷತ್ರಗಳಂತೆ ತೇಜೋಮಯವಾಗಿರುವದು- ಎಂದೂ ತಿಳಿದುಬರುತ್ತದೆ. ಅಶ್ವಿನೀದೇವತೆಗಳಂತೆ ಅವನ ಮುಖವು ಸುಂದರವೂ ಕಾಂತಿಯುಕ್ತವೂ ಆಗಿರುವದು. ಅಥವಾ ನಕ್ಷತ್ರಗಳೆಲ್ಲವೂ, ಅಶ್ವಿನೀದೇವತೆ ಗಳೇ ಮೊದಲಾದ ಉತ್ತಮಜೀವರುಗಳೂ ಭಗವಂತನ ಮಹಿಮಾನ್ವಿತ ವಿಭೂತಿರೂಪಗಳೇ ಆಗಿರುತ್ತಾರೆ. ಸಾಧಕನು ಇಂಥ ಸಗುಣ-ಸಾಕಾರ ನಾದ ಸಾಂಗ-ಸಾಯುಧ-ಸವಾಹನ ಸಶಕ್ತಿಪತ್ನಿಪುತ್ರಪರಿವಾರಸಹಿತನಾದ ನಾರಾಯಣನನ್ನು ಚಿಂತಿಸಬೇಕು-ಎಂದೂ ತಾತ್ಪರ್ಯವನ್ನು ಹೇಳಬಹುದು.

ಈಗ ಕಡೆಯ ಪ್ರಾರ್ಥನಾವಾಕ್ಯಗಳನ್ನು ಕೇಳೋಣ :

**ಇಷ್ಟಂ ಮನಿಷಾಣ | ಅಮುಂ ಮನಿಷಾಣ । ಸರ್ವಂ ಮನಿಷಾಣ ||**

'ಇಷ್ಟವನ್ನೂ ಪರಲೋಕಸುಖವನ್ನೂ-ಎಲ್ಲವನ್ನೂ ದಯಪಾಲಿಸು.'

ಈ ಮಂತ್ರದಲ್ಲಿ ಇಹ-ಪರಗಳೆಂಬ ಶ್ರೇಯಸ್ಸನ್ನು ಕೊಡುವಂತೆ ನಾರಾಯಣನನ್ನು ಬೇಡಿಕೊಂಡಿದೆ. ಇಷ್ಟವೆಂದರೆ ಈ ಲೋಕದ ಸುಖ ಗಳಾದ ಧನಕನಕಪತ್ನೀಪುತ್ರಗೃಹಾದಿಗಳು. ಅಮುಮ್ ಎಂದರೆ ಸ್ವರ್ಗಾದಿ ಫಲಗಳು. ಸರ್ವಮ್ ಎಂದರೆ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ವಾದ ಪುರುಷಾರ್ಥಗಳು-ಎಂದರ್ಥ. ನಾಲ್ಕು ಬಾಹುಗಳುಳ್ಳ ಭಗವಂತನು ಮಾತ್ರವೇ ನಾಲ್ಕು ಪುರುಷಾರ್ಥಗಳನ್ನೂ ಮಾನವನಿಗೆ ಕೊಡಲು ಸಮರ್ಥ ನಾಗಿರುವನು. ಆದ್ದರಿಂದ ನಾವು ಏನನ್ನು ಬೇಡಿಕೊಂಡರೂ ಅವನಲ್ಲಿಯೇ ಬೇಡಬೇಕು. 'ವರದರಾಜ'ನೆನಿಸಿರುವ ಅವನೊಬ್ಬನೇ ಎಲ್ಲವನ್ನೂ ಕೊಡು ವನನು. ಇಂಥ ನಾರಾಯಣಪರತತ್ತ್ವವನ್ನು ಸೇವಿಸಬೇಕೆಂದು ತಿಳಿಸಿ ಪುರುಷಸೂಕ್ತವು ಸಮಾಪ್ತವಾಗಿದೆ.

---

## ೧೬. ತಚ್ಛಂ ಯೋರಾವೃಣೀಮಹೇ

ಪುರುಷಸೂಕ್ತದ ಕಡೆಯಲ್ಲಿ ಶಾಂತಿಪಾಠವಾಗಿ ಉಚ್ಚರಿಸುವ ಒಂದು ಮಂತ್ರವಿದೆ. ಅದು ಹೀಗಿದೆ :-

**ಓಂ|| ತಚ್ಛಂ ಯೋರಾವೃಣೀಮಹೇ | ಗಾತುಂ ಯಜ್ಞಾಯ | ಗಾತುಂ ಯಜ್ಞಪತಯೇ | ದೈವೀ ಸ್ವಸ್ತಿರಸ್ತು ನಃ | ಸ್ವಸ್ತಿರ್ಮಾನು ಷೇಭ್ಯಃ | ಊರ್ಧ್ವಂ ಜಿಗಾತು ಭೇಷಜಮ್ | ಶಂ ನೋ ಅಸ್ತು ದ್ವಿಪದೇ | ಶಂ ಚತುಷ್ಪದೇ || ಓಂ ಶಾಂತಿಃ ಶಾಂತಿಃ ಶಾಂತಿಃ ||**

"ಪ್ರಾಪ್ತವಾಗಿರುವ ಹಾಗೂ ಮುಂದೆ ಬರಲಿರುವ ರೋಗಾದಿಗಳ ಪರಿ ಹಾರಕ್ಕಾಗಿ ನಾವು ವೈದಿಕಕರ್ಮಗಳ ಮೂಲಕ ಭಗವಂತನನ್ನು ಪ್ರಾರ್ಥಿಸುವೆವು. ಯಜಮಾನನಿಗೂ ಯಜ್ಞಕ್ಕೂ ದೇವತೆಗಳಿಂದ ದೊರಕುವ ಮಂಗಳವುಂಟಾಗಲಿ! ಮನುಷ್ಯರಿಗೂ ಶುಭವಾಗಲಿ ! ಇಲ್ಲಿಂದ ಮುಂದಕ್ಕೆ ಸರ್ವಾರಿಷ್ಟಗಳೂ ನಿವಾರಣೆಯಾಗಲಿ ! ನಮ್ಮ ಸಂಬಂಧಿಗಳಾದ ಮನುಷ್ಯರಿಗೂ ಪ್ರಾಣಿಗಳಿಗೂ ಸುಖವುಂಟಾಗಲಿ !"

ಈ ಮಂತ್ರವನ್ನು ಪುರುಷಸೂಕ್ತದ ಕಡೆಯಲ್ಲಿ ವೈದಿಕರು ಪಠಿಸು ತ್ತಾರೆ. ಆದ್ದರಿಂದ ಇಲ್ಲಿ ವ್ಯಾಖ್ಯಾನಮಾಡಲು ತೆಗೆದುಕೊಂಡಿದೆ. ಇದು ಶಾಂತಿಪಾಠಮಂತ್ರವೆಂದು ಪ್ರಸಿದ್ಧವಾಗಿದೆ. ಭಾಷ್ಯಪಾಠಗಳ ಆರಂಭದಲ್ಲಿ ಉಪಯೋಗಿಸುವ ಶಾಂತಿಮಂತ್ರಗಳಿಗಿಂತ ಇದು ಬೇರೆಯೇನೋ ಹೌದು. ಆದರೆ ಇದನ್ನು ದೇವರಿಗೆ ಅಭಿಷೇಕಮಾಡುವಾಗ 'ದಶಶಾಂತಿಪಾಠ'ಮಂತ್ರ ಗಳಲ್ಲಿ ಒಂದನ್ನಾಗಿ ಸ್ವೀಕರಿಸಲಾಗಿದೆ. ಅಂತೂ ಈ ಮಂತ್ರವು ವೈದಿಕ ಪ್ರಾರ್ಥನೆಗಳಲ್ಲಿ ಮುಖ್ಯಸ್ಥಾನವನ್ನು ಪಡೆದಿದೆ. ಕೆಲವರು ಇದನ್ನು ಸಂಧ್ಯಾ ವಂದನೆಯ ಕಡೆಯಲ್ಲಿ ಉಪಸ್ಥಾನಮಂತ್ರವಾಗಿಯೂ ಪಠಿಸುತ್ತಾರೆ. ಇದರಲ್ಲಿ ಶಂ ಎಂದರೆ ಈಗ ಪ್ರಾಪ್ತವಾಗಿರುವ ರೋಗಾದಿದೋಷಗಳ ಮತ್ತು ಯೋ ಎಂದರೆ ಮುಂದೆ ಬರಬಹುದಾದ ರೋಗಾದಿಗಳ ಪರಿಹಾರಕ್ಕಾಗಿ 'ಆರುಣ ಕೇತುಕ' ಎಂಬ ಯಜ್ಞಕರ್ಮದಿಂದ ಭಗವಂತನನ್ನು ಪ್ರಾರ್ಥಿಸಿದೆ–ಎಂದು ಭಾಷ್ಯಕಾರರು ಅರ್ಥಮಾಡಿದ್ದಾರೆ. ರೋಗಾದಿಗಳೆಂದರೆ ಮಾನಸಿಕವಾದ ಸಂತಾಪ, ದುಃಖ, ಅವಿದ್ಯೆ, ಭಯಾದಿಗಳನ್ನೂ ಗ್ರಹಿಸಬೇಕು. ಬ್ರಹ್ಮ ವಿದ್ಯೆಯ ಪ್ರಾಪ್ತಿಗೆ ಅಧಿ–ವ್ಯಾಧಿಗಳೆಂಬ ಎರಡು ಉಪದ್ರವಗಳೂ ಅಡ್ಡಿಯಾ ಗಿರುವವು. ಅವು ತೊಲಗಬೇಕಾದರೆ ಯಜ್ಞಪುರುಷನಾದ ಪರಮಾತ್ಮನ ಕೃಪೆಯು ಬೇಕು. ಅವನು ಪೂಜೆ, ಹೋಮ, ದಾನ, ಜಪಾದಿರೂಪವಾದ ಯಜ್ಞಗಳಿಂದ ಸಂತುಷ್ಟನಾಗುವನು. ಆದ್ದರಿಂದ ಭಗವಂತನನ್ನು ನಾನಾ ರೀತಿಯಾದ ವೈದಿಕಯಜ್ಞಗಳಿಂದ ಆರಾಧಿಸಿ ಮುಕ್ತಿಯ ಪ್ರಾಪ್ತಿಗೆ ಅಡ್ಡಿ ಯಾಗಬಹುದಾದಂಥ ಸರ್ವಾರಿಷ್ಟಗಳನ್ನೂ ನಿವಾರಣೆಮಾಡುವಂತೆ ಇಲ್ಲಿ ಕೇಳಿಕೊಳ್ಳಲಾಗಿದೆ.

ಈಗ ಮುಂದುವರೆದು ಯಜ್ಞಕ್ಕೂ ಯಜ್ಞಪತಿಗೂ ಶುಭಾಶಂಸನ ವನ್ನು ಮಾಡಲಾಗಿದೆ. ಇಲ್ಲಿ ಯಜ್ಞಪತಿ ಎಂಬ ಶಬ್ದಕ್ಕೆ ಯಜಮಾನನು ಎಂದರ್ಥ. ಯಾವದೇ ಕರ್ಮಕ್ಕಾದರೂ ಒಬ್ಬ ಮುಖ್ಯ ಕರ್ತೃವಿರುತ್ತಾನೆ. ಉಳಿದವರು ಅವನಿಗೆ ಸಹಾಯಕರಾಗಿರುತ್ತಾರೆ. ಯಜ್ಞದಲ್ಲಿಯೂ ಹಾಗೆ ಯೇ ತಿಳಿಯಬೇಕು. ಮುಖ್ಯಕರ್ತೃವಾದವನೇ ಯಜಮಾನನು. ಅವನು ಸಂಕಲ್ಪಿಸಿರುವ ವೈದಿಕಕರ್ಮವು ಯಜ್ಞವೆನಿಸುವದು ಇಂಥ ಕರ್ಮಾರಂಭ ದಲ್ಲಿ ಯಜಮಾನನು ಸದಸ್ಯರನ್ನು ಕುರಿತು ಈ ಕರ್ಮವು ಪುಣ್ಯಾಹವು

(ಒಳ್ಳೆಯ ಹಗಲಿನಲ್ಲಿ ಮಾಡಿದ್ದು) ಆಗಲಿ ; ಹಾಗೆಯೇ ಕರ್ಮಕ್ಕೆ ಸ್ವಸ್ತಿ ಯಾಗಲಿ ; ಕರ್ಮವು ವೃದ್ಧಿಯಾಗಲಿ ! ಎಂದೆಲ್ಲ ಕೇಳಿಕೊಳ್ಳುತ್ತಾನೆ. ತಥಾಸ್ತು (ಹಾಗೆಯೇ ಆಗಲಿ) ಎಂದು ಸಭಾಸದರು ಉತ್ತರ ಹೇಳುತ್ತಾರೆ. ಈ ರೀತಿಯಾದ ಉಪಕ್ರಮವು ಈಗಲೂ ರೂಢಿಯಲ್ಲಿದೆ. ಇದಕ್ಕೆ ಆಧಾರ ವಾಗಿಯೇ ಈ ಮಂತ್ರದಲ್ಲಿ **'ಗಾತುಂ ಯಜ್ಞಾಯ, ಗಾತುಂ ಯಜ್ಞ ಪತಯೇ'** (ಯಜ್ಞಕ್ಕೂ ಯಜಮಾನನಿಗೂ ಸ್ವಸ್ತಿಯನ್ನು ಗಾನಮಾಡು ವೆವು) ಎಂದು ಪ್ರಾರ್ಥಿಸಿದೆ. ಯಜಮಾನನು ಕೈಗೊಳ್ಳುವ ಕಾರ್ಯದಿಂದ ಅವನಿಗೆ ಇಷ್ಟಾರ್ಥಫಲಪ್ರಾಪ್ತಿಯಾಗಲೆಂದೂ ಈ ಪ್ರಾರ್ಥನೆಯಲ್ಲಿ ಭಾವವಿದೆ.

ಅನಂತರ **'ದೈವೀ ಸ್ವಸ್ತಿರಸ್ತು ನಃ'** ಎಂಬ ಪ್ರಾರ್ಥನೆಯಿದೆ. ದೇವತೆಗಳ ಸಂಬಂಧವಾದದ್ದು ದೈವೀ ಎನಿಸುವದು. ನಮಗೇನಾದರೂ ಒಳ್ಳೆಯದಾಗಬೇಕಾದರೆ ದೇವತೆಗಳ ಪ್ರಸಾದದಿಂದಲೇ ಆಗಬೇಕು. ದೇವತೆ ಗಳಾದರೊ, ಮನುಷ್ಯನಿಗೆ ಬೇಕಾದದ್ದನ್ನು ಕೊಡಲು ಸಮರ್ಥರಾದರೂ ಕೇಳಿಕೊಳ್ಳದೆ ಇರುವವರಿಗೆ ಏನನ್ನೂ ಕೊಡಲಾರರು. ಆದ್ದರಿಂದ ದೇವತೆಗಳ ಮೂಲಕ ನಮಗೆ ಉಂಟಾಗಬಹುದಾದ ಅಭ್ಯುದಯಗಳು ಈಗ ಪ್ರಾಪ್ತ ವಾಗಲಿ ! ಎಂದು ಪ್ರಾರ್ಥಿಸಲಾಗಿದೆ; ಮತ್ತು ಈ ಅಭ್ಯುದಯಫಲಗಳು **'ಮಾನುಷೇಭ್ಯಃ'** ಮನುಷ್ಯರಿಗೂ ಆಗಲಿ–ಎಂದರ್ಥ. ಇಲ್ಲಿ ಮನುಷ್ಯ ಶಬ್ದದಿಂದ ಯಜಮಾನನ ಸಂಬಂಧಿಗಳಾದ ಮಕ್ಕಳು, ನೆಂಟರು, ಸ್ನೇಹಿತರು ಗಳನ್ನೂ ಗ್ರಹಿಸಬೇಕು. ಇವರಿಗೆಲ್ಲ ಸ್ವಸ್ತಿ ಎಂದರೆ ಕ್ಷೇಮವಾಗಲೆಂದು ಬೇಡಿಕೊಂಡಿದೆ. ಈ ಪ್ರಾರ್ಪನೆಯನ್ನು ಯಾವನು ಮಾಡುವನೋ ಅವನಿಗೆ ಮಾತ್ರವಲ್ಲದೆ ಅವನ ಸಂಬಂಧಿಕರೆಲ್ಲರಿಗೂ ದೇವತೆಗಳ ಅನುಗ್ರಹದಿಂದ ಶ್ರೇಯಸ್ಸಾಗುತ್ತದೆ– ಎಂದಭಿಪ್ರಾಯ. ಮುಂದುವರೆದು **'ಊರ್ಧ್ವಂ ಜಿಗಾತು ಭೇಷಜಮ್'** ಎಂದು ಕೇಳಿಕೊಂಡಿದೆ. ಇದರ ಅರ್ಥವೇನೆಂದರೆ : ಇನ್ನು ಮುಂದೆ ಸರ್ವಾರಿಷ್ಟಗಳ ನಿವಾರಣೆಯೂ ಜಿಗಾತು–ಉಂಟಾಗಲಿ– ಎಂದು ಭಾವ. ಈವರೆಗೆ ದೇವತೆಗಳನ್ನು ಮರೆತದ್ದರಿಂದ ಏನು ತಪ್ಪು ಸಂಭವಿಸಿತ್ತೋ ಅದು ಪರಿಹಾರವಾಗಿ ಮುಂದೆ ದೇವತೆಗಳ ಪ್ರಸಾದದಿಂದ ಎಲ್ಲಾ ಆಪತ್ತುಗಳೂ ನಾಶವಾಗಿ ಶುಭಪರಂಪರೆಯುಂಟಾಗಲಿ– ಎಂದು ಇಲ್ಲಿ ಪ್ರಾರ್ಥಿಸಿದೆ.

ಈಗ ಎರಡು ಕಾಲಿನ ಹಾಗೂ ನಾಲ್ಕುಕಾಲಿನ ಎಲ್ಲಾ ಪ್ರಾಣಿಗಳಿಗೂ ಸುಖವುಂಟಾಗಲೆಂಬ ಪ್ರಾರ್ಥನೆಯನ್ನು ಕುರಿತು ವಿಚಾರಮಾಡೋಣ. ಮಂತ್ರದ್ರಷ್ಟಾರರಾದ ಋಷಿಗಳ ವಿಶಾಲಹೃದಯವೂ ಸನಾತನಧರ್ಮದ ಸಾರವೂ ಈ ಎರಡು ವಾಕ್ಯಗಳಲ್ಲಿ ಅಡಕವಾಗಿವೆ. ವೇದಸಾಹಿತ್ಯಗಳಲ್ಲಿರುವ ಜಗತ್ತಿಗೆಲ್ಲ ಕ್ಷೇಮವನ್ನುಂಟುಮಾಡಬೇಕೆಂಬ ಉದಾತ್ತಪ್ರಾರ್ಥನೆಗಳು ಪ್ರಪಂಚದ ಬೇರೆ ಯಾವ ಧರ್ಮಗ್ರಂಥಗಳಿಗಿಂತ ಕಡಿಮೆಯಾಗೇನೂ ಇಲ್ಲ. ಅಥವಾ ಈ ವೈದಿಕಪ್ರಾರ್ಥನೆಗಳ ಸಾರವನ್ನೇ ಇತರಧರ್ಮಗಳೂ ಗ್ರಹಿಸಿ ತಮ್ಮತಮ್ಮ ಭಾಷೆಯಲ್ಲಿ ಪ್ರಚಾರಕ್ಕೆ ತಂದಿವೆ- ಎಂದರೂ ತಪ್ಪಾಗದು. ಏಕೆಂದರೆ ವೇದಗಳು ಸರ್ವಧರ್ಮಗಳ ಸಾರವಾಗಿವೆ. ಅವು ವಿಶ್ವಕಲ್ಯಾಣ, ವಿಶ್ವಶಾಂತಿಗಳೆಂಬ ಮುಖ್ಯಗುರಿಯುಳ್ಳವಾಗಿದ್ದು ಪ್ರತಿಯೊಬ್ಬ ಮಾನವನ ವೈಯಕ್ತಿಕಕಲ್ಯಾಣಕ್ಕೂ ಹಾದಿಯನ್ನು ಸೂಚಿಸುತ್ತವೆ. ಇಂಥ ವೇದಗಳನ್ನು ಅಧ್ಯಯನಮಾಡದೆ, ಅವುಗಳ ಅರ್ಥವನ್ನೂ ತಿಳಿಯದೆ ನಾವು ಭಾರತೀಯ ರೆನ್ನಿಸಿಕೊಳ್ಳುವದಾದರೂ ಹೇಗೆ ಸಾಧ್ಯ ? ವೇದವು ದ್ವಿಪಾತ್-ಚತುಷ್ಪಾತ್ ಎಲ್ಲಾ ಪ್ರಾಣಿಗಳಿಗೂ ಶುಭವಾಗಲೆಂಬ ಪ್ರಾರ್ಥನೆಯನ್ನು ಪ್ರತಿದಿನವೂ ಕೈಗೊಳ್ಳುವಂತೆ ಬ್ರಾಹ್ಮಣನನ್ನು ಕಟ್ಟುಮಾಡುತ್ತಿದೆ. ವೇದದ ಆನು ಪೂರ್ವಿಗೆ ಅನುಗುಣವಾಗಿ ಪ್ರಾರ್ಥನೆಮಾಡುವವನನ್ನು ಬ್ರಾಹ್ಮಣನೆಂದೂ ಹೆಸರಿಸಲಾಗಿದೆ. ಆದರೆ ಇದೇ ಪ್ರಾರ್ಥನೆಯನ್ನು ಹೃತ್ಪೂರ್ವಕವಾಗಿ- ಯಾವ ಮನುಷ್ಯನೇ ಆಗಲಿ, ಅವನು ಪ್ರಪಂಚದ ಯಾವ ಮೂಲೆಯಲ್ಲಿಯೇ ಇರಲಿ, ಮಾಡಿದರೂ ಸರಿ ; ಅವನು ಬ್ರಾಹ್ಮಣ (ಸಾತ್ತ್ವಿಕ)ನೆನಿಸುವನು. ಹೀಗೆ ಬ್ರಾಹ್ಮಣ್ಯವನ್ನು 'ಸಾತ್ತ್ವಿಕತೆ' ಎಂಬರ್ಥದಲ್ಲಿಯೂ ವೇದವನ್ನು 'ಜಗತ್ತಿಗೇ ಕ್ಷೇಮವನ್ನುಂಟುಮಾಡುವ ಪ್ರಾರ್ಥನಾಸಾಹಿತ್ಯ'ವೆಂಬ ಅರ್ಥ ದಲ್ಲಿಯೂ ಸ್ವೀಕರಿಸಿದಲ್ಲಿ ಪ್ರಪಂಚಕ್ಕೆ ನಿಜವಾದ ಉಪಕಾರವಾಗುವದು. ಇಂಥ ಪ್ರಾರ್ಥನೆಗಳನ್ನು ಸಲ್ಲಿಸುವವರೇ ಋಷಿಗಳೆನಿಸುವರು.

ಆದ್ದರಿಂದ ವಾಚಕರೆ, ನೀವು ಮೊದಲು 'ಭಾರತೀಯ'ರೆಂಬುದನ್ನು ಹೃದಯಕ್ಕೆ ತಂದುಕೊಳ್ಳಿರಿ. ಅನಂತರ ಭಾರತವು ಸನಾತನಧರ್ಮದ ಜನ್ಮ ಭೂಮಿಯೆಂತ ನೆನೆಸಿಕೊಳ್ಳಿರಿ ; ಹಾಗೂ ಸನಾತನಧರ್ಮವು ವೇದಗಳಲ್ಲಿ ಅಡಕವಾಗಿದೆಯೆಂತ ಅರಿತು ವೇದಗಳನ್ನು ಗೌರವಿಸಿರಿ. ಮುಂದುವರೆದು

ವೇದಾರ್ಥಗಳನ್ನು ವಿಶದೀಕರಿಸುವ ಪೌರುಷೇಯಧರ್ಮಗ್ರಂಥಗಳನ್ನು ಗುರುತಿಸಿ ಅವುಗಳಲ್ಲಿರುವ ಉಪದೇಶಗಳ ಕಡೆಗೆ ಕಿವಿಗೊಟ್ಟು ಆಲೈಸಿರಿ. ಆನಂತರ ಆ ಉಪದೇಶಗಳನ್ನು ಅನುಷ್ಠಾನಕ್ಕೆ ತಂದುಕೊಂಡು ನಿಮ್ಮ ಹಾಗೂ ನಿಮ್ಮ ಸುತ್ತಮುತ್ತಲಿನ ಜಗತ್ತಿನ ಕ್ಷೇಮಲಾಭಗಳಿಗಾಗಿ ನಿಮ್ಮ ಪ್ರಯತ್ನಗಳನ್ನು ಧಾರೆಯೆರೆಯಿರಿ. ಈ ಸಂದರ್ಭದಲ್ಲಿ ಅಧ್ಯಾತ್ಮದೃಷ್ಟಿಯನ್ನೇ ಅಳವಡಿಸಿಕೊಂಡು ಜಾತಿಮತಗಳ ಭ್ರಾಂತಿಯಿಂದ ಪಾರಾಗಿರಿ. ಆಗ ನೀವು ಅಮೃತಪುತ್ರರೇ ಈಗಲೂ ಆಗಿರುವಿರಿ–ಎಂಬಿದು ಮನದಟ್ಟಾಗುವದು.

ಈಗ ಈ ಶಾಂತಿಮಂತ್ರದ ಕಡೆಯಲ್ಲಿರುವ ಘೋಷಣೆಯನ್ನು ವಿಚಾರ ಮಾಡೋಣ. ಶಾಂತಿ– ಎಂಬ ಶಬ್ದವೇ ಹೃದಯಂಗಮವಾಗಿರುವದು. ಅದು ನಿಜವಾಗಿಯೂ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ–ಎಂಬ ಮೂರು ಪ್ರಪಂಚಗಳಲ್ಲಿಯೂ ಆವಶ್ಯವಾಗಿದೆ. ಉದಾಹರಣೆಗೆ ಭೌತಿಕವಾದ ನಮ್ಮ ಸುತ್ತುವಳೆಯದಲ್ಲೇ ಅಶಾಂತವಾತಾವರಣವಿದ್ದರೆ ನಮಗೆ ಮನಸ್ಸಿನಲ್ಲೇ ಆತಂಕವು ಕಾಡುತ್ತಿರುವದು. ಆದರೆ ಅದು ಶಾಂತವಾಗಿದೆ–ಎಂದು ಗೊತ್ತಾದೊಡನೆಯೇ ನಿರ್ಭಯವಾಗಿ ವ್ಯವಹರಿಸುವೆವು. ಹೀಗೆಯೇ ಒಳಗೂ ಎಂದರೆ ಮನೋಬುದ್ಧಿ, ವಿಜ್ಞಾನ–ಆತ್ಮಪರ್ಯಂತವಾಗಿಯೂ ಶಾಂತಿಯು ಬೇಕು. ದೈವಿಕವಾಗಿ ಮಳೆ, ಬಿಸಿಲು, ಚಳಿ, ಹಿಮ–ಇತ್ಯಾದಿಗಳ ಮೂಲಕವೂ ಮಾನವನಿಗೆ ಹಿಂಸೆಯಾಗದಂತೆ ವಾತಾವರಣವು ಇರಬೇಕಾಗುವದು. ಆದ್ದರಿಂದ ಮೂರು ವಿಧವಾದ ಪ್ರಪಂಚದಲ್ಲಿಯೂ ತಾಪತ್ರಯಗಳು ಶಮನವಾಗಿ ಎಲ್ಲೆಲ್ಲಿಯೂ ಶಾಂತಿಯು ಲಭಿಸಲೆಂದು ಮೂರುಬಾರಿಗೆ ಶಾಂತಿಘೋಷಣೆಯನ್ನು ಮಾಡಲಾಗಿದೆ. ಜಗತ್ತಿನ ಎಲ್ಲಾ ವಿಧವಾದ ಕಷ್ಟಪರಂಪರೆಗಳೂ ನಾಶವಾಗಿ ಪರಮಶಾಂತನಾದ ಭಗವಂತನ ದಯೆಯಿಂದ ಸಜ್ಜನರಿಗೆ ಶಾಂತಿಯು ಲಭಿಸಿ ಆ ಮೂಲಕ ಸಕಲರಿಗೂ ಕಲ್ಯಾಣವಾಗಲೆಂದು ಇಲ್ಲಿ ಕೇಳಿಕೊಂಡಿದೆ. ಭಗವಂತನ ಕೃಪೆಯಿಂದ ಇಲ್ಲಿಗೆ ಪುರುಷಸೂಕ್ತದ ವಿವರಣೆಯು ಪೂರೈಸಿದೆ. ವಾಚಕರಿಗೆ ಮಂಗಳವಾಗಲಿ !

**|| ಓಂ ತತ್ ಸತ್ ||**

ಆಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.
1994

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ